207

ತೇಜಸ್ವಿಯವರ ಕಾದಂಬರಿಗಳಲ್ಲಿ ನಿಗೂಢತೆ

ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ

ನಿಬಂಧ

ಮಾರ್ಗದರ್ಶಕರು

ಡಾ। ಕೆ.ವಿ. ಚಂದ್ರಣ್ಣಗೌಡ ಎಂ.ಎ., ಎಲ್.ಎಲ್.ಬಿ., ಪಿಹೆಚ್.ಡಿ.

ಉಪ ಪ್ರಾಚಾರ್ಯರು, ಮುಖ್ಯಸ್ಥರು, ಕನ್ನಡ ವಿಭಾಗ

ವಿ.ವಿ. ಪುರಂ ಸಂಜೆ ಕಾಲೇಜು, ಕೆ.ಆರ್. ರಸ್ತೆ, ಬೆಂಗಳೂರು - ೫೬೦೦೦೪

ಸಂಶೋಧಕರು

ಎನ್. ತಿಪ್ಪೇಸ್ವಾಮಿ

ಸಿರಿಗನ್ನಡ ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

AKSHARA GRANTHALAYA
ACC.NO. 129843

ಕನ್ನಡ ವಿಶ್ವವಿದ್ಯಾಲಯ

ಹಂಪಿ

ಕಾವ್ಯ ಮಂಡಲ ಸಾಂಸ್ಕೃತಿಕ ಅಧ್ಯಯನ ಕೇಂದ್ರ

ಕನ್ನಡ ವಿಶ್ವವಿದ್ಯಾನಿಲಯ, ಬೆಂಗಳೂರು - ೦೪

೨೦೦೭

8K0.9
SWA
129843

ಯೋಗ್ಯತಾ ಪತ್ರ

ಶ್ರೀಯುತ ಎನ್. ತಿಪ್ಪೇಸ್ವಾಮಿಯವರು ಕನ್ನಡ ವಿಶ್ವವಿದ್ಯಾನಿಲಯದ ಅಂಗಸಂಸ್ಥೆಯಾದ ಕಾವ್ಯಮಂಡಲ ಸಾಂಸ್ಕೃತಿಕ ಅಧ್ಯಯನ ಕೇಂದ್ರದಲ್ಲಿ ಎಂ.ಫಿಲ್. ಪದವಿಗಾಗಿ **"ಕೆ.ಪಿ. ಪೂರ್ಣಚಂದ್ರತೇಜಸ್ವಿಯವರ ಕಾದಂಬರಿಗಳಲ್ಲಿ ನಿಗೂಢತೆ"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ಸದರಿ ಸಂಶೋಧನಾ ಸಂಪ್ರಬಂಧವನ್ನು ರಚಿಸಿದ್ದಾರೆ. ಇವರ ಸಂಪ್ರಬಂಧವು ಬೇರೆ ಯಾವುದೇ ವಿಶ್ವವಿದ್ಯಾಲಯದಲ್ಲಿ ಸಂಶೋಧಕ ಪದವಿಗಾಗಲಿ ಅಥವಾ ಇನ್ನಿತರೆ ಯಾವುದೇ ಪದವಿಗಾಗಿ ಒಪ್ಪಿಸಿಲ್ಲವೆಂದು ಈ ಮೂಲಕ ದೃಢಪಡಿಸುತ್ತೇನೆ.

ದಿನಾಂಕ : 18/08/07.
ಸ್ಥಳ : ಬೆಂಗಳೂರು

ಡಾ। ಕೆ.ವಿ. ಚಂದ್ರಣ್ಣಗೌಡ ಎಂ.ಎ., ಎಲ್.ಎಲ್.ಬಿ., ಪಿಹೆಚ್.ಡಿ.
ಉಪ ಪ್ರಾಚಾರ್ಯರು, ಮುಖ್ಯಸ್ಥರು ಕನ್ನಡ ವಿಭಾಗ
ವಿ.ವಿ. ಪುರಂ ಕಲೆ ಮತ್ತು ವಾಣಿಜ್ಯ ಸಂಜೆ ಕಾಲೇಜು,
ಕೆ.ಆರ್. ರಸ್ತೆ
ಬೆಂಗಳೂರು - ೫೬೦೦೦೪
ದೂರವಾಣಿ : ೨೬೬೭೫೪೭೩

ದೃಢೀಕರಣ ಪತ್ರ

ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಕಾದಂಬರಿಗಳಲ್ಲಿ ನಿಗೂಢತೆ ಎಂಬ ವಿಷಯ ಕುರಿತು ಕನ್ನಡ ವಿಶ್ವವಿದ್ಯಾಲಯದ ಅಂಗಸಂಸ್ಥೆಯಾದ ಕಾವ್ಯಮಂಡಲ ಸಾಂಸ್ಕೃತಿಕ ಅಧ್ಯಯನ ಕೇಂದ್ರದಲ್ಲಿ ಸಂಶೋಧಕ (ಎಂ.ಫಿಲ್) ಪದವಿಗಾಗಿ ಸಮರ್ಪಿಸಿದ ಈ ಸಂಶೋಧನ ಸಂಪ್ರಬಂಧವನ್ನು ಡಾ। ಕೆ.ವಿ. ಚಂದ್ರಣ್ಣಗೌಡ, ಎಂ.ಎ., ಎಲ್.ಎಲ್.ಬಿ., ಪಿಹೆಚ್.ಡಿ. ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ಸಿದ್ಧಪಡಿಸಿದ್ದೇನೆ. ಈ ಸಂಶೋಧನ ಸಂಪ್ರಬಂಧವನ್ನು ಹಿಂದೆ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಎಂ.ಫಿಲ್. ಪದವಿಗಾಗಿ ಅಥವಾ ಇನ್ನಿತರ ಯಾವುದೇ ಪದವಿಯ ಉದ್ದೇಶಕ್ಕಾಗಿ ಸಲ್ಲಿಸಿಲ್ಲವೆಂದು ಈ ಮೂಲಕ ವಿಶ್ವವಿದ್ಯಾಲಯದ ಗಮನಕ್ಕೆ ತರುತ್ತಾ, ದೃಢೀಕರಿಸಿ, ಪ್ರಮಾಣೀಕರಿಸುತ್ತೇನೆ.

ದಿನಾಂಕ : 15.8.2007.

ಸ್ಥಳ : ಬೆಂಗಳೂರು.

ಎಸ್. ತಿಪ್ಪೇಸ್ವಾಮಿ

ಸಂಶೋಧನಾ ವಿದ್ಯಾರ್ಥಿ

ಕಾವ್ಯಮಂಡಲ ಸಾಂಸ್ಕೃತಿಕ ಅಧ್ಯಯನ

ಕೇಂದ್ರ, ಕನ್ನಡ ವಿಶ್ವವಿದ್ಯಾಲಯ

ಬೆಂಗಳೂರು - ೫೬೦೦೦೮

ಅಧ್ಯಾಯಗಳು



ಕಾದಂಬರಿ ಹಿನ್ನೆಲೆ

ಕಾದಂಬರಿ ಸಾಹಿತ್ಯ ಪ್ರಕಾರ ಇಂಗ್ಲೆಂಡಿನಲ್ಲಿ ಒಂದು ಪರ್ವಕಾಲದಲ್ಲಿ ಹುಟ್ಟಿತು. ಬಂಡವಾಳಷಾಹಿ ಆರ್ಥಿಕ ವ್ಯವಸ್ಥೆ ಹಣದ ಮೂಲಕ ಕುಲ, ವಂಶ, ಆಗರ್ಭ ಶ್ರೀಮಂತಿಕೆ ಮುಂತಾದ ಭಾವನೆಗಳನ್ನೆಲ್ಲಾ ಕಂಪಿಸಿಬಿಟ್ಟಿತು. ಈ ಸಂದರ್ಭದಲ್ಲೆ ಕಾದಂಬರಿ ಹುಟ್ಟಿತೆಂಬುದು ಗಮನಾರ್ಹ ವಿಷಯ. ಎಲ್ಲ ಸಾಹಿತ್ಯ ಪ್ರಕಾರಗಳು ನಾವು ಪ್ರಪಂಚವನ್ನೂ ತಿಳಿಯುವ ರೀತಿಯನ್ನು ತಿಳಿಸುತ್ತವೆ. ಬದಲಾಗುತ್ತಿದ್ದ ಪ್ರಪಂಚವನ್ನು ಪಾಶ್ಚಿಮಾತ್ಯ ಲೇಖಕ ಅರಿತುಕೊಂಡ ರೀತಿಯನ್ನು ನಾವು ಅವರ ಕಾದಂಬರಿಗಳಲ್ಲಿ ಕಾಣಬಹುದು. ಆ ಕಾಲದ ಲೇಖಕರು ಕಾದಂಬರಿ ಪ್ರಕಾರವನ್ನು ತಮ್ಮ ಎಲ್ಲ ತಿಳಿವಳಿಕೆಗಳಿಗೂ, ಅನಿಸಿಕೆಗಳಿಗೂ ಮಾಧ್ಯಮವಾಗಿ ಉಪಯೋಗಿಸಲು ಪ್ರಾರಂಭಿಸಿದರು. ಮನಃಶಾಸ್ತ್ರ, ಸಮಾಜಶಾಸ್ತ್ರ ಪ್ರತ್ಯೇಕವಾದ ಶಿಸ್ತುಗಳಾಗಿ ಇನ್ನೂ ಬೆಳೆಯದ ಕಾಲದಲ್ಲಿ ಕಾದಂಬರಿ ಪ್ರಕಾರ ಈ ಎಲ್ಲ ಕೆಲಸಗಳನ್ನು ನಿರ್ವಹಿಸುತ್ತಿತ್ತು. ೧೯ನೇ ಶತಮಾನದ ಇಂಗ್ಲೆಂಡಿನ ಸಾಮಾಜಿಕ, ರಾಜಕೀಯ ವ್ಯವಸ್ಥೆಯನ್ನು ತಿಳಿಸಲು ಆ ಕಾಲದ ಕಾದಂಬರಿಗಳು ಸಹಾಯ ಮಾಡುತ್ತವೆ. ಆಗಿನ ಕಾಲದ ಒಬ್ಬ ಕಾದಂಬರಿಕಾರ, ಸಮಾಜಶಾಸ್ತ್ರಜ್ಞ, ಬೋಧಕ, ರಾಜಕೀಯ ಪ್ರಚಾರಕ ಎಲ್ಲವೂ ಆಗಿ ಬರುತ್ತಾನೆ. ಹಾಗಾಗಿ ಕಾದಂಬರಿ ಪ್ರಕಾರ ಎಷ್ಟು ಜಗ್ಗಿದರೂ ಹಿಗ್ಗಬಲ್ಲ, ಎಷ್ಟನ್ನು ತುಂಬಿಸಿದರೂ ತುಂಬಿಸಬಲ್ಲ ಎಲ್ಲ ಅಪೇಕ್ಷಗಳನ್ನು ಪೂರೈಸಬಲ್ಲ ಪ್ರಕಾರವಾಗಿ ಪರಿಣಮಿಸುತ್ತದೆ.[1]

ಲೋಕದ ವಾಸ್ತವ ಚಿತ್ರದ ಬದಲಾಗಿ, ಒಂದು ಮನಸ್ಸು ಲೋಕವನ್ನು ಹೇಗೆ ಕಾಣುತ್ತದೆ ಎಂಬುದನ್ನು ತೋರಿಸುವುದು ಪಾಶ್ಚಾತ್ಯರಿಗೆ ಅವಶ್ಯವಾಗುತ್ತಾ ಹೋಗಿದೆ. ಯಾವುದಾದರೂ ಪಾತ್ರವೊಂದರ ಮೂಲಕ ಜಗತ್ತನ್ನು ನೋಡುವುದು ಮುಖ್ಯವಾಗಿದೆ. ಅಂದರೆ, ಪ್ರಪಂಚ, ಸಮಾಜ ಹೇಗಿದೆ ಎನ್ನುವುದರ ಬದಲಾಗಿ, ಇವು ಮುಖ್ಯವಾಗಿ ಒಂದು ಪಾತ್ರಕ್ಕೆ ಅಥವಾ ಪ್ರಜ್ಞೆಗೆ ಹೇಗೆ ಕಾಣುತ್ತವೆ ? ಏಕೆ ಕಾಣುತ್ತವೆ ? ಎನ್ನುವ ಪ್ರಶ್ನೆಗಳಿಗೆ ಹುಡುಕುವ ಉತ್ತರವೇ ಕಾದಂಬರಿಯಾಗುತ್ತದೆ. ಡಿಕನ್ಸ್ ಲಂಡನ್ನಿನ ಒಂದು ಬೀದಿಯನ್ನು ವರ್ಣಿಸಿದರೆ, ಇಡೀ ಬೀದಿಯೇ ನಮ್ಮ ಕಣ್ಣಿಗೆ ಕಟ್ಟುವಂತೆ ಮಾಡುತ್ತಾನೆ. ಅದೇ ವರ್ಜೀನಿಯಾ, ವೋಲ್ಫ್ - ಈ ಬೀದಿಯನ್ನು ವರ್ಣಿಸುವ ಗಮನಕ್ಕೆ ಬರುವಷ್ಟು ಮಾತ್ರ ವರ್ಣಿಸುತ್ತಾನೆ. ಇದರಿಂದ ಲೇಖಕ ಸೃಷ್ಟಿಸುವ ಪ್ರಪಂಚ ತನ್ನ ದೃಷ್ಟಿಕೋನಕ್ಕೆ ಬದ್ಧವಾಯಿತು. ಕನ್ನಡ ಕಾದಬಂರಿ ಬೌದ್ಧಿಕ ಪ್ರಪಂಚದಲ್ಲಿ ೨೦ನೆಯ

ಶತಮಾನದಲ್ಲಿದ್ದರೂ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿ ಒಂದೆರಡು ಶತಮಾನ ಹಿಂದಿದೆ. ಕನ್ನಡ ಕಾದಂಬರಿ ಸಾಹಿತ್ಯದಲ್ಲಿ ಡಿಕನ್ಸ್, ಟಾಲ್‌ಸ್ಟಾಯ್, ಬೆಕೆಟ್, ಕಾಮೂ, ಎಲ್ಲರೂ ಒಂದೇ ಕಾಲದಲ್ಲಿ ಸಮಕಾಲೀನರಾಗಿದ್ದಾರೆ. ಆದ್ದರಿಂದ "ಗ್ರಾಮಾಯಣ", "ಬಿರುಕು", "ಹಳದಿ ಮೀನು" ಒಂದೇ ಕಾಲದಲ್ಲಿ ಬರುವುದು ಸಹಜವಾದದ್ದು. ವಾಸ್ತವ ಮಾರ್ಗದಲ್ಲಿ ಬರೆಯುವುದು ಸರಿಯೋ ನವ್ಯ ಮಾರ್ಗದಲ್ಲಿ ಬರೆಯುವುದು ಸರಿಯೋ ಎನ್ನುವುದು ಒಣ ಹರಟೆಯೆಂದು ತೋರುತ್ತದೆ.[2]

ಈಚೆಗೆ ನಮ್ಮಲ್ಲಿ ಸೂಕ್ಷ್ಮ ಬದಲಾವಣೆಗಳು ಆಗುತ್ತಿವೆ. ಪೂರ್ವನಿಶ್ಚಿತ ನಂಬಿಕೆಗಳು ಜಾತಿಯ ಕಟ್ಟುಪಾಡುಗಳು ನಿರ್ಬಂಧ, ವಿಧಿ ನಿಷೇಧಗಳು ಮಾಯವಾಗಿ, ಪ್ರಪಂಚ ವಿಶಾಲವಾಗಿ ಆಶಾದಾಯಕವಾಗಿ ಕಾಣಿಸುತ್ತಿದೆ. ಕೆಲವರಿಗೆ ಇದು ಅರ್ಥಹೀನವಾಗಿಯೂ ಕಾಣುತ್ತಿರಬಹುದು. ಒಟ್ಟಿನಲ್ಲಿ ಇದು ಮಹತ್ತರ ಬದಲಾವಣೆಯ ಸಂಕ್ರಮಣಕಾಲ. ಅತ್ಯಂತ ದೊಡ್ಡ ಕಾದಂಬರಿಗಳು ಹುಟ್ಟಬಲ್ಲ ಕಾಲ. ಬೇರೆ ಶಾಸ್ತ್ರ ಅಥವಾ ವಿಷಯಗಳು ಎಷ್ಟು ಬೆಳೆದರೂ ಸಹ ಶಾಸ್ತ್ರ ಹೇಳಲಾರದ ವಿಶಿಷ್ಟ. ಸತ್ಯವನ್ನು ಕಾದಂಬರಿ ಹೇಳಬಲ್ಲದ್ದರಿಂದ ಸಾಹಿತ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಬಂದಿದೆ. ಶಾಸ್ತ್ರ ಸಾಮಾನ್ಯ ತತ್ವಗಳನ್ನು ಹೇಳಿದರೆ, ಸಾಹಿತ್ಯ ಮಹತ್ವಪೂರ್ಣವಾದ ವಿಶಿಷ್ಟ ವಿವರಗಳ ಮೂಲಕ ಸತ್ಯವನ್ನು ನಮ್ಮೆದುರಿಗೆ ಇಡುತ್ತದೆ. ಶಾಸ್ತ್ರಗಳು ಹೇಳಲಾಗದ್ದನ್ನು ಸಾಹಿತ್ಯವು ಹೇಳಲು ಸಾಧ್ಯವಾಗುತ್ತದೆ. ಆದ್ದರಿಂದ ಕಾದಂಬರಿ ಎಂದರೆ ಕೇವಲ ವರದಿ ಅಲ್ಲ; ಗೈಡ್ ಅಲ್ಲ ; ಕಾದಂಬರಿಕಾರ ತಾನು ಆರಿಸಿಕೊಂಡ ಪ್ರಪಂಚದಿಂದ ಹುಡುಕಿ ಮೂಡಿಸಿದ ಜೀವನ ಸೃಷ್ಟಿಯೇ ಆಗಿದೆ. ಹೊಸ ನೈತಿಕ ಪ್ರಜ್ಞೆಯನ್ನು ಸೃಷ್ಟಿಸುವುದೂ ಆಗಿದೆ. ಕಾದಂಬರಿಕಾರ ಸಮಾಜಶಾಸ್ತ್ರ ತಾತ್ವಿಕ ಹಾಗೂ ಮನೋವಿಜ್ಞಾನಿಗಳಿಗಿಂತ ಮುಂದಿದ್ದನೆಂದು ಹೇಳಬಹುದು. ತನ್ನ ಕೃತಿಯಲ್ಲಿ ನೈಜವಾಗಿಲ್ಲದ ವಿಚಾರಗಳನ್ನು ಎಂದೂ ಹೇಳುವುದಿಲ್ಲ. ಪ್ರತಿ ಹೊಸ ನೈತಿಕ ಪ್ರೇರಣೆಗಳನ್ನು ಹುಡುಕುವುದು ಚಿಂತಕರಿಗಿಂತ ತನ್ನ ಪ್ರತಿಸೃಷ್ಟಿಯಲ್ಲಿ ಕಾದಂಬರಿಕಾರ ಅದಕ್ಕಿಂತಲೂ ಹೆಚ್ಚಿನ ಮೌಲ್ಯಗಳನ್ನು ಪ್ರೇರೇಪಿಸುತ್ತಾನೆ.

ಕಾದಂಬರಿಗಳ ಬಗ್ಗೆ ಕೆಲವರ ವ್ಯಾಖ್ಯಾನಗಳು

೧. "ಕಾದಂಬರಿ ಕಲೆ ನಮ್ಮ ಒಂಟಿ ಬದುಕನ್ನು ಬಹುರೂಪಿಯಾಗಿ ಗುಣಿಸಿ, ನಮ್ಮ ವ್ಯಕ್ತಿತ್ವದಿಂದಲೇ ಪಾರು ಮಾಡಿ ಪರಕಾಯ ಪ್ರವೇಶದ ಶಕ್ತಿಯನ್ನು ನಮ್ಮಲ್ಲಿ ಧಾರಾಳಗೊಳಿಸುತ್ತದೆ." - ಆರ್ಟೆಕಾಗ್ಯಾಸೆ

೨. ಕಾದಂಬರಿ ಕರತಲ ರಂಗಭೂಮಿ (Project Theatre) ಎಂದು ಮ್ಯಾನ್ಯುಯಸ್ ಕ್ರಾಫರ್ಡ್ ಹೇಳುತ್ತಾನೆ.[3]

೩. ಕಾದಂಬರಿ ಎಂದರೆ, ಗದ್ಯರೂಪದಲ್ಲಿರುವ ವೈನೋದಿಕ ಮಹಾಕಾವ್ಯ - ಹೆನ್ರಿ ಫೀಲ್ಡಿಂಗ್ (Comic Visison)

೪. ಸಾಹಿತ್ಯ ಪ್ರಕಾರಗಳಲ್ಲೆಲ್ಲಾ ಅತ್ಯಂತ ಸ್ವತಂತ್ರವಾದದ್ದು, ಅತ್ಯಂತ ಸ್ಥಿತಿಸ್ಥಾಪಕ ಗುಣಉಳ್ಳದ್ದು ಅತ್ಯಂತ ಪ್ರಚಂಡವಾದದ್ದು - ಹೆನ್ರಿ ಜೇಮ್ಸ್

೫. ಕಾದಂಬರಿ ಜೀವನದ ಏಕೈಕ ಉಜ್ವಲ ಪುಸ್ತಕ - ಡಿ.ಎಚ್. ಲಾರೆನ್ಸ್[4]

ಪ್ರತಿಯೊಂದು ಕಾದಂಬರಿಯು ಕಥೆಯನ್ನು ಹೇಳುತ್ತದೆ. ಆದರೆ, ಕಥೆಯನ್ನು ಹೇಳುವವರು ಯಾರು, ಅವರಿಗೂ ಕಥೆಗೂ ಇರುವ ಸಂಬಂಧವೇನು ಎಂಬುದು ಮುಖ್ಯ ಪ್ರಶ್ನೆ. ಬಹಳಷ್ಟು ಕಾದಂಬರಿಗಳಲ್ಲಿ ಮುಖ್ಯವಾಗಿ ಕಾದಂಬರಿಕಾರನೆ ಸರ್ವಸಾಕ್ಷಿ ಪ್ರಜ್ಞೆಯಿಂದ ಕಥೆಯ ಎಲ್ಲ ಅಂಶಗಳನ್ನೂ, ಎಲ್ಲ ಪಾತ್ರಗಳ ಒಳ-ಹೊರಗನ್ನೂ ಬಲ್ಲವನಾಗಿ ಕಥೆ ಹೇಳುತ್ತಾನೆ. ಕಾದಂಬರಿಯು ಒಂದು ಆತ್ಮಚರಿತ್ರೆಯ ರೂಪದಲ್ಲಿ ತನ್ನ ಕಥೆಯನ್ನು ತಾನೇ ಹೇಳಿಕೊಳ್ಳುವುದು ಅಥವಾ ಕಥೆ ಹೇಳುವ ಪಾತ್ರ ಕಾದಂಬರಿಯ ಮುಖ್ಯ ಪಾತ್ರವಾಗಿರಬಹುದು. ಅಥವಾ ಕತೆಗೆ ಸಂಬಂಧವಿಲ್ಲದ ಹೊರಗಿನ ನಿರೀಕ್ಷಕನಾಗಿರಬಹುದು. ಕಾದಂಬರಿ ಹತ್ತು ಹಲವಾರು ಪಾತ್ರಗಳ ನಿರೂಪಣೆಯ ಸಂಕಲನವಾಗಬಹುದು. ಇಲ್ಲವೆ, ಹಲವಾರು ಆತ್ಮಕತೆಗಳ ಸಂಯೋಜನೆ ಆಗಬಹುದು. ಹಾಗಾಗಿ ಕಾದಂಬರಿ ಹೊಸ ನೈತಿಕ ಮೌಲ್ಯಗಳನ್ನು ಸೃಷ್ಟಿಸುತ್ತದೆ.

ಅಡಿಟಿಪ್ಪಣಿ

1. ಯು.ಆರ್. ಅನಂತ ಮೂರ್ತಿ, ಪ್ರಜ್ಞೆ - ಪರಿಸರ, ಪುಟ - 26

ಪ್ರಕಟಣೆ, ಕನ್ನಡ ಪುಸ್ತಕ ಪ್ರಾಧಿಕಾರ.

2. ಯು.ಆರ್. ಅನಂತ ಮೂರ್ತಿ, ಪ್ರಜ್ಞೆ - ಪರಿಸರ, ಪುಟ - 27

ಪ್ರಕಟಣೆ, ಕನ್ನಡ ಪುಸ್ತಕ ಪ್ರಾಧಿಕಾರ.

3. ಗಿರಡ್ಡಿ ಗೋವಿಂದ ರಾಜ, ಸಮಗ್ರ ವಿಮರ್ಶೆ, ಸಂಪುಟ. 2, ಪುಟ - 5

4. ಗಿರಡ್ಡಿ ಗೋವಿಂದ ರಾಜ, ಸಮಗ್ರ ವಿಮರ್ಶೆ, ಸಂಪುಟ. 2, ಪುಟ - 26

ಕಾದಂಬರಿ ನಡೆದು ಬಂದ ದಾರಿ

ಸಾಹಿತ್ಯ ರಚನೆ ವಿವಿಧ ಪ್ರಕಾರಗಳಿಂದ ಕೂಡಿದೆ. ಕಾವ್ಯ, ನಾಟಕ, ಕಾದಂಬರಿ, ವಿಮರ್ಶೆ, ಭಾವಗೀತ ಮುಂತಾದ ಪ್ರಕಾರಗಳು ಆಧುನಿಕ ಸಾಹಿತ್ಯ ರಚನೆಯಲ್ಲಿ ಮಹತ್ವ ಪಡೆದಿವೆ. ಕೆಲ ಚಿಂತಕರು ಅದರಲ್ಲಿ ಫ್ರೆಡರಿಕ್ ಜೇಮ್ಸ್‌ನಂತಹ, ಮಾರ್ಕ್ಸಿಸ್ಟ್ ಚಿಂತಕರು ಕಾದಂಬರಿಯನ್ನು ಒಂದು ಸಾಹಿತ್ಯ ಪ್ರಕಾರ ಎಂದು ಪರಿಗಣಿಸಲು ಸಂಶಯ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಕೆಲವು ಮಾನದಂಡಗಳನ್ನು ಅನುಸರಿಸುತ್ತಾರೆ. ಪಾಲ್ ಬೂರ್ಜೆಟ್ ಎಂಬ ವಿಮರ್ಶಕ ಟಾಲ್‌ಸ್ಟಾಯ್ ಹಾಗೂ ದಾಸ್ತೊವಸ್ಕಿ ಕಾದಂಬರಿಗಳನ್ನು ಕೇವಲ ವರದಿ ಎಂದು ತಿಳಿಸುತ್ತಾನೆ. ಇಂತಹ ಹೇಳಿಕೆ ಆ ಕಾಲಕ್ಕೆ ಸರಿ ಎನಿಸಿದರೂ ನಂತರದ ವಿಮರ್ಶಕರು ಟಾಲ್‌ಸ್ಟಾಯ್ ಮತ್ತು ದಾಸ್ತೊವಸ್ಕಿಯ ಕಾದಂಬರಿಗಳು ಕಾದಂಬರಿ ಪ್ರಕಾರದಲ್ಲಿಯೇ ಶ್ರೇಷ್ಠ ಕೃತಿಗಳೆನ್ನುವುದನ್ನೂ ಒಪ್ಪಿಕೊಳ್ಳುತ್ತಾರೆ.

ಬಾಕ್ಸಿನ್ ಎಂಬ ವಿಮರ್ಶಕ ಕಾದಂಬರಿಯ ಮೂರು ಲಕ್ಷಣಗಳನ್ನು ಹೇಳುತ್ತಾನೆ.

೧. ಕಾದಂಬರಿಯಲ್ಲಿ ಸಾಧ್ಯವಾಗುವ ಬಹುಧ್ವನಿತ್ವದ ತ್ರಿ - ಆಯಾಮತ್ವ

೨. ಸಾಹಿತ್ಯಿಕ ಪ್ರತಿಮೆಗಳ ಸೃಷ್ಟಿಗೆ ಹೊಸತೊಂದು ಕ್ಷೇತ್ರದ ಕೊಡುಗೆ ಹಾಗೂ ಈ ಕ್ಷೇತ್ರ ವರ್ತಮಾನದೊಂದಿಗೆ ಹೊಂದಿದ ಗರಿಷ್ಠ ಸಂಬಂಧ.

೩. ಸಾಹಿತ್ಯ ಪ್ರತಿಮೆಯ ಕಾಲ ಘಟಕದಲ್ಲಿ ಕ್ರಾಂತಿಕಾರಕ ಪರಿವರ್ತನೆ.[1]

ಭಾಷೆ, ವಾಸ್ತವಾಚೆಗಿನ ಬೆರೆ ನೆಲೆಗಳನ್ನು ಚಿಂತಕರು ಚಿಂತಿಸಿದ್ದಾರೆ. ಬಾರ್ತ್‌ನ ಪ್ರಕಾರ ಕಾದಂಬರಿಯಲ್ಲಿ ನಿರ್ಣಾಯಕ ಪಾತ್ರವಿರುವುದು ವಾಸ್ತವ ಹಾಗೂ ಭಾಷೆಗಳಿಗಿಂತ ಹೆಚ್ಚಾಗಿ ವೃತ್ತಿಗೆ ವೃತ್ತಿಯೊಂದೇ ಸೃಜನಶೀಲತೆ ಹಾಗೂ ಸಮಾಜಗಳನ್ನು ಜೋಡಿಸಬಲ್ಲದು. ಭಾಷೆ ಶೈಲಿಗಳ ವಿಷಯದಲ್ಲಿ ಲೇಖಕನಿಗೆ ಸ್ವಾತಂತ್ರ್ಯವಿಲ್ಲ ಆದರೆ, ವೃತ್ತಿಯ ವಿಷಯದಲ್ಲಿ ಅವನಿಗೆ ಸ್ವಾತಂತ್ರ್ಯವಿದೆ ಎನ್ನುವುದು ಅವನ ಪ್ರತಿಪಾದನೆ.[2] ಪ್ರತಿಯೊಂದು ಯುಗದ ಸಮಗ್ರತೆ ಕಾದಂಬರಿಯ ನೆಲೆಯಾಗಿರುತ್ತದೆ. ಅದು ಸಮಗ್ರತೆಯನ್ನು ಸಾಂಸಾರಿಕ ಜೀವನದಲ್ಲಿ ಶೋಧಿಸುತ್ತದೆ. ಇದು ಕಾದಂಬರಿಕಾರನ

ಪೂರ್ವ ನಿಯೋಜಿತ ಉದ್ದೇಶವಲ್ಲ. ಕಾದಂಬರಿಯನ್ನು ಒಂದು ಪ್ರಕಾರ ಎಂದು ಕರೆಯುವುದಕ್ಕಿಂತ ಒಂದು ಪ್ರಕ್ರಿಯೆ ಎಂದು ಕರೆಯುವುದು ಹೆಚ್ಚು ಸೂಕ್ತವಾದುದು ಎಂಬ ವಾದವೊಂದಿದೆ.

ಇಂಗ್ಲಿಷ್ ಸಾಹಿತ್ಯದ ಪ್ರಭಾವ ಬೀಳುವ ಮೊದಲೇ ಕಾದಂಬರಿ ಎನ್ನಬಹುದಾದ ಮೂರು ಕೃತಿಗಳು ಕನ್ನಡದಲ್ಲಿ ರಚನೆಯಾಗಿದ್ದವು. ಯಾದವನ **ಕಲಾವತೀಪರಿಣಯ (೧೮೧೫)** ಮುಮ್ಮಡಿ ಕೃಷ್ಣರಾಜ ಒಡೆಯರ **ಸೌಗಂಧಿಕ ಪರಿಣಯ (೧೮೨೧)** ಹಾಗೂ ಕೆಂಪುನಾರಾಯಣನ **ಮುದ್ರಾಮಂಜೂಷ (೧೮೨೩)** ಕಲಾವತಿ ಪರಿಣಯವು ಬಳ್ಳಿ ಕಥಾನಕತೆಯಿಂದ ಕೂಡಿದೆ. ಸೌಗಂಧಿಕಾ ಪರಿಣಯವು ಹೊಸಗನ್ನಡ ಭಾಷೆಗೆ ಹತ್ತಿರವಿದೆ. ಮುದ್ರಾಮಂಜೂಷ ಸಂಸ್ಕೃತದ ಮುದ್ರಾರಾಕ್ಷಸ ನಾಟಕದ ಆಧಾರದ ಮೇಲೆ ರಚಿತವಾಗಿದೆ. ಅನಂತರ ಇಂಗ್ಲಿಷ್‌ನ ಕೆಲವು ಕಾದಂಬರಿಗಳು ಕನ್ನಡಕ್ಕೆ ಅನುವಾದಗೊಂಡವು. ಜಾನ್ ಬನ್‌ಯನ್ ನ **ದಿ ಬಿಲ್‌ಗ್ರಿಮ್ಸ್ ಪ್ರೋಗ್ರೆಸ್ (೧೮೪೨)** ಡ್ಯಾನಿಯಲ್ ಡಫೋನ ರಾಬಿನ್‌ಸನ್ ಕ್ರೂಸೊ (೧೮೫೭) ಇವುಗಳು ಕನ್ನಡಕ್ಕೆ ವಾಸ್ತವಿಕ ನಿರೂಪಣೆಯನ್ನು ಪರಿಚಯ ಮಾಡಿಕೊಟ್ಟಿತು.

ಮರಾಠಿಯಿಂದ ಪದಮಂಜಿಯವರ ಯಮುನಾ ಪರ್ಯಟನ (೧೮೬೯) ಬಂಗಾಲಿಯಿಂದ ಬಂಕಿಮ ಚಂದ್ರರ ದುರ್ಗೇಶ ನಂದಿನ (೧೮೮೫) ತೆಲುಗಿನ ವೀರೇಶಲಿಂಗ ಪಂತಲು ಅವರ ವಿವೇಕ ಚಂದ್ರಿಕೆ (೧೮೯೫) ಮಲಯಾಳದಿಂದ ಮುಳಿಯಲ್ ಅವರ ಸುಕುಮಾರಿ(೧೮೯೯) ಇನ್ನೂ ಮುಂತಾದವುಗಳು ಬೇರೆ ಬೇರೆ ಭಾಷೆಗಳಿಂದ ಕನ್ನಡಕ್ಕೆ ಭಾಷಾಂತರಗೊಂಡವು.

ಬಂಕಿಮಚಂದ್ರರ ದುರ್ಗೇಶ ನಂದಿನಿ ಕನ್ನಡಕ್ಕೆ ತಂದ ಸಂದರ್ಭದಲ್ಲಿ ದುರ್ಗೇಶ ನಂದಿನಿಗೆ ಇಂಗ್ಲಿಷ್‌ನಲ್ಲಿ ಪೀಠಿಕೆಯನ್ನು ಬರೆದರು. ಆ ಪೀಠಿಕೆಯಲ್ಲಿ ಕಾದಂಬರಿಗೆ 'ನಾವೆಲ್' ಎಂಬ ಪದವನ್ನು ಬಳಸಿದರು. ಕಾದಂಬರಿ ಸಮಾಜ ಹಾಗೂ ಸಮಾಜದ ಅಂಗಭೂತನಾದ ಮನುಷ್ಯನ ಚರಿತ್ರೆ ನಡವಳಿಕೆಗಳಲ್ಲಿ ಕಂಡುಬರುವ ದುರ್ನಡತೆ ಮಂತಾದವುಗಳನ್ನೂ ಉದಾಹರಣೆಗಳೊಡನೆ ಚಿತ್ರಿಸಿ, ಪ್ರತಿಯೊಬ್ಬನು ಸದ್ಭಾವದಿಂದ ನಡೆದುಕೊಳ್ಳುವುದನ್ನು ತೋರಿಸುವುದಕ್ಕಾಗಿ ಎಂದರು.

೧೮೭೫ರಿಂದ ೧೯೩೦ರ ನಡುವಿನ ಕಾಲವನ್ನು **ಕನ್ನಡ ಕಾದಂಬರಿ ಉದಯ ಕಾಲ** ಎಂದು ಗುರುತಿಸಲಾಗಿದೆ. ಇದಕ್ಕೆ ಮುಖ್ಯ ಪ್ರೇರಣೆ, ಇಂಗ್ಲಿಷ್ ಸಾಹಿತ್ಯದ ಪರಿಚಯ ಹಾಗೂ ದೇಶೀ ಭಾಷೆಗಳಾದ ಬಂಗಾಲಿ ಹಾಗೂ ಮರಾಠಿ ಭಾಷೆಗಳಿಂದ ಹರಿದ ಪ್ರಭಾವ. ಈ ಮಾತು ಕೇವಲ ಸಾಹಿತ್ಯಕ್ಕಷ್ಟೇ ಸೀಮಿತವಾಗದೆ, ರಾಜಕೀಯಕ್ಕೂ ಹಾಗೂ ಸಾಂಸ್ಕೃತಿಕ ಕ್ಷತ್ರಕ್ಕೂ ಸಂಬಂಧಿಸಿದುದಾಗಿದೆ. ಈ ಕಾಲದ ಲೇಖಕರೆಲ್ಲ ತಮ್ಮ ಸಂಸ್ಕಾರ, ಸಂಸ್ಕೃತಿಯಲ್ಲಿ ಅಪಾರವಾದ ಕಾಳಜಿಯನ್ನೂ ಮತ್ತು ವಿಶೇಷ ಆಸಕ್ತಿಯನ್ನೂ ಹೊಂದಿದ್ದರು. ಸನಾತನ ಧರ್ಮದ ಮೌಲ್ಯಗಳನ್ನು ನಂಬಿದವರು ಆಗಿದ್ದರು. ಸಾಂಸ್ಕೃತಿಕ ಸಂದರ್ಭದಲ್ಲಿಯೇ ಕಾದಂಬರಿ ಕಚನೆಗೆ ಹೊರಟ ಗುಲ್ವಾಡಿ ವೆಂಕಟರಾಯರು. ಬೋಳಾರು ಬಾಬುರಾಯರು, ಗಳಗನಾಥ, ಪುಟ್ಟಣ್ಣನವರು. ಈ ಎಲ್ಲ ಕಾದಂಬರಿಕಾರರ ಮನೋಧರ್ಮ ಬೇರೆಬೇರೆಯಾಗಿತ್ತು.

೧೮೯೨ರಲ್ಲಿ ಪ್ರಕಟವಾದ ಲಕ್ಷ್ಮಣರಾವ್ ಗದಗಕರರ **ಸೂರ್ಯಕಾಂತ** ಕನ್ನಡದ ಮೂಲಕ ಸ್ವತಂತ್ರ್ಯ ಕಾದಂಬರಿ. ಇದು ಐತಿಹಾಸಿಕ ಕಾದಂಬರಿ. ಗುಬ್ಬಿ ಮುರಿಗಾರಾಧ್ಯರ ಶೃಂಗಾರ ಚಾತುರ್ಯೋಲ್ಲಾಸಿನಿ, ಗಳಗನಾಥರ ಪ್ರಬುದ್ಧನಯನೆ, ಗುಲವಾಡಿ ವೆಂಕಟರಾಯರ ಇಂದಿರಾ ಬಾಯಿ ಈ ಎಲ್ಲ ಕೃತಿಗಳು ಗಮನಿಸಬೇಕಾದವುಗಳು.

ಎಂ.ಎಂ. ಪುಟ್ಟಣ್ಣನವರು ಕನ್ನಡ ಕಾದಂಬರಿಯ ಆದ್ಯ ಪ್ರವರ್ತಕರಲ್ಲೊಬ್ಬರು. ಇವರು ಇಂಗ್ಲಿಷ್ ಸಾಹಿತ್ಯವನ್ನು ಬಲ್ಲವರಾಗಿದ್ದರು. ಷೇಕ್ಸ್‌ಪಿಯರ್‌ನ ಎರಡು ನಾಟಕಗಳನ್ನು, ಮಾಡಿದ್ದುಣ್ಣೋ ಮಾರಾಯ ಮತ್ತಿತರ ಇಂಗ್ಲಿಷ್ ಕೃತಿಗಳನ್ನು ಭಾಷಾಂತರಿಸಿದರು. ಆದರೂ ಇವರ ಕಾದಂಬರಿಗಳು ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗದಿರುವುದು ಆಶ್ಚರ್ಯಕರವಾಗಿದೆ. ಇವರ ಕೃತಿಗಳಲ್ಲಿ ಭಾರತೀಯ ಪರಂಪರೆಯನ್ನು ವೈಭವೀಕರಿಸಿದೆ. ದೃಷ್ಟಾಂತ ನೀತಿಕತೆ, ದಂತಕತೆಗಳನ್ನು ತಮ್ಮ ಕೃತಿಗಳಲ್ಲಿ ದುಡಿಸಿಕೊಂಡಿದ್ದಾರೆ. ಭಾರತೀಯ ಕಥಾ ಪ್ರಕಾರಗಳ ಸಾಧ್ಯತೆಗಳನ್ನು ತಮ್ಮ ಕೃತಿಗಳಲ್ಲಿ ಮೇಳವಿಸಿ, ಅಚ್ಚ ದೇಶೀಯತೆಯಿಂದಾಗಿ ಪುಟ್ಟಣ್ಣನವರು ಕನ್ನಡ ಕಾದಂಬರಿಯ ಪ್ರಾರಂಭಘಟ್ಟದ ಮಹತ್ವದ ಕಾದಂಬರಿಕಾರರಾಗಿದ್ದಾರೆ. ವೆಂಕಟಾಚಾರ್ಯ, ಗಳಗನಾಥ, ಎಂ.ಎಸ್.ಪುಟ್ಟಣ್ಣ ಇವರಿಂದ ಕನ್ನಡ ಕಾದಂಬರಿ ಕೇವಲ ಮನರಂಜನೆಯಾಗದೆ, ಗಂಭೀರವಾಗಿ ನೋಡುವ ಕ್ರಿಯೆಯಾಯಿತು. ಅನಂತರ

ಕನ್ನಡ ಕಾದಂಬರಿ ಇಪ್ಪತ್ತನೆ ಶತಮಾನದ ನಾಲ್ಕನೆ ದಶಕದಲ್ಲಿ ಸಮೃದ್ಧಿಯನ್ನು ಪಡೆಯಿತು. ಶಿವರಾಮಕಾರಂತರ ಚೋಮನದುಡಿ ದೇವದೂತ ೧೯೩೩ರಲ್ಲಿ ಆನಂದಕಂದರ ರಾಜಯೋಗಿ, ಸುದರ್ಶನ ೧೯೩೪ರಲ್ಲಿ ರಂ.ಶ್ರೀ.ಯವರ ಬಾಳುರಿ, ಅ.ನ.ಕೃ. ಅವರ ಜೀವನಯಾತ್ರೆ ಮತ್ತು ಉದಯರಾಗ, ಶ್ರೀರಂಗರ ವಿಶ್ವಾಮಿತ್ರ ಸೃಷ್ಟಿ ಜಡಭರತರ ಧರ್ಮಸೆರೆ, ೧೯೩೬ರಲ್ಲಿ ಕುವೆಂಪುರ ಕಾನೂರು ಸುಬ್ಬಮ್ಮ ಹೆಗ್ಗಡಿತಿ ಪ್ರಕಟವಾದವು. ಇದರಿಂದ ಕನ್ನಡದಲ್ಲಿ ಕಾದಂಬರಿ ಯುಗ ಪ್ರಾರಂಭವಾಯಿತು. ೧೯೩೦ರಿಂದ ೧೯೪೫ರ ವರೆಗೆ ಸುಮಾರು ಎಂಭತ್ತು ಕಾದಂಬರಿಗಳು ಪ್ರಕಟವಾದವು.

[ಕನ್ನಡ ಕಾವ್ಯ ಪ್ರಕಾರದಲ್ಲಿ ಬೇಂದ್ರೆ - ಕುವೆಂಪು ಪ್ರಭಾವ ಬೀರಿದಂತೆ ಕಾದಂಬರಿ ಪ್ರಕಾರದಲ್ಲಿ ಕಾರಂತ ಮತ್ತು ಅನಕೃ ಪ್ರಭಾವ ಬೀರಿದರು.[4] ಕಾರಂತರು ಸುಮಾರು ೩೮ ಕಾದಂಬರಿಗಳನ್ನು ಬರೆದಿದ್ದಾರೆ. ಅಗಾಧವಾದ ಜೀವನ ಶ್ರದ್ಧೆ ಮತ್ತು ಅತಿಭಾವುಕತೆಗೆ ಎಡೆಕೊಡದ ಕಾದಂಬರಿಕಾರರು. ಇವರ ಬರಹದಲ್ಲಿ ಆವೇಶಗಳಾಗಲಿ, ಝಗಮಗಿಸುವ ಆದರ್ಶಗಳಾಗಲಿ ಜೀವಂತವಾದ ಮತ್ತು ವಾಸ್ತವ ಜಗತ್ತಿಗೆ ಘೋಷಣೆಗಳಾಗಲಿ ಇಲ್ಲ. ಹತ್ತಿರವಾದ ಜಗತ್ತನ್ನು ಸೃಷ್ಟಿಸಿದರು. ಅವರ ಕಾದಂಬರಿಗಳಲ್ಲಿ ಸಾಮಾಜಿಕ ಚಿತ್ರಣ ಜೀವಂತವಾಗಿರುವುದನ್ನು ಕಾಣುಬಹುದು.]

ಅ.ನ.ಕೃ. ಕೃಷ್ಣರಾಯರು ೧೧೨ ಕಾದಂಬರಿಗಳನ್ನು ಬರೆದು, ಒಂದು ಪರಂಪರೆಯನ್ನು ಸೃಷ್ಟಿಸುವಷ್ಟು ಪ್ರಭಾವ ಬೀರಿದರು. ಪ್ರಗತಿಶೀಲ ಚಳುವಳಿಯ ನಾಯಕರಾಗಿ ಹಲವು ವಾದ ವಿವಾದಕ್ಕೆ ಕೇಂದ್ರ ಬಿಂದುವಾಗಿ, ಸವಾಲನ್ನು ಸ್ವೀಕರಿಸಿದರು. ಕೃಷ್ಣರಾಯರು ಕಾದಂಬರಿಯ ಎಲ್ಲೆಯನ್ನು ವಿಶಾಲಗೊಳಿಸಿದ್ದಲ್ಲದೆ, ಕುಟುಂಬ ಜೀವನ ಗ್ರಾಮಜೀವನ, ನಗರ ಜೀವನ, ಕಾರ್ಮಿಕರ ಜೀವನ, ಅಸ್ಪೃಶ್ಯತೆ, ಕಾಮಜೀವನ ಎಲ್ಲವನ್ನೂ ಕಾದಂಬರಿಯ ಪರಿಧಿಯಲ್ಲಿ ತರಲು ಯತ್ನಿಸಿದರು. ಕಾದಂಬರಿಯನ್ನು ಸಮಸ್ಯೆಗಳ ನಿರೂಪಣೆಗೂ, ಸಾಮಾಜಿಕ ಕ್ರಾಂತಿಗೂ ಸಾಧನವನ್ನಾಗಿ ಬಳಸಿದರು. ಕಾದಂಬರಿಗೆ ಸಾವಿರಾರು ಓದುಗರನ್ನು ಆಕರ್ಷಿಸಿದ್ದು ಅನಕೃ ಅವರ ಕೊಡುಗೆ.

ಗೋಕಾಕರು ೧೯೩೧ರಲ್ಲಿ ಇಜ್ಜೋಡು ಎಂಬ ೧೭೨ ಪುಟಗಳ ಕಾಂದಬರಿ ಪ್ರಕಟವಾಯಿತು. ಈ ಕಾದಂಬರಿ ೧೯೫೩ರ ಹೊತ್ತಿಗೆ ೧,೨೦೦ ಪುಟಗಳ ಕಾದಂಬರಿಯಾಗಿ ಬೆಳೆಯಿತು. ಇದರ ಇನ್ನೊಂದು ಹೆಸರು ಸಮರಸವೇ ಜೀವನ.

ವಿಷಮ ದಾಂಪತ್ಯದಲ್ಲಿ ಬೆಂದು ಹೋದ ಪದ್ಮಾವತಿಯ ಕತೆಯು ಕಾದಂಬರಿಯ ಕೇಂದ್ರ ಬಿಂದು. ಇಡೀ ಕಾದಂಬರಿ ಪಯಣದ ಅನುಭವವನ್ನು ಕೊಡುತ್ತದೆ. ಸಮರಸವೇ ಜೀವನದಲ್ಲಿ ಬೌದ್ಧಿಕಾಂಶ ಎದ್ದು ಕಾಣುತ್ತದೆ.

ನಾಟಕಕಾರರೆಂದೇ ಪ್ರಸಿದ್ಧರಾದ ಶ್ರೀರಂಗರು ಹಲವು ಕಾದಂಬರಿಗಳನ್ನು ಬರೆದಿದ್ದಾರೆ. ನಾಟಕಗಳನ್ನು ಬರೆಯದೇ ಹೋಗಿದ್ದಲ್ಲಿ, ಕಾದಂಬರಿಕಾರರೆಂದೇ ಗಮನ ಸೆಳೆಯುತ್ತಿದ್ದರು. ವಿಶ್ವಾಮಿತ್ರ ಸೃಷ್ಟಿ, ಪುರುಷಾರ್ಥ, ಪ್ರಕೃತಿ, ಅನಾದಿ, ವಿಷಚಕ್ರವ್ಯೂಹ - ಮುಂತಾದ ಹತ್ತು ಕಾದಂಬರಿಗಳನ್ನು ಬರೆದಿದ್ದಾರೆ. ಶ್ರೀರಂಗರ ಕಾದಂಬರಿಗಳಲ್ಲಿ ತಂತ್ರದ ಹೊಸ ಹೊಸ ಪ್ರಯೋಗಗಳನ್ನು ಕಾಣಬಹುದು.

ದೇವುಡು ನರಸಿಂಹಶಾಸ್ತ್ರಿ ಇನ್ನೊಬ್ಬ ಕನ್ನಡದ ಧೀಮಂತ ಕಾದಂಬರಿಕಾರರು. ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನ - ಅವರ ಬೃಹತ್ ಕಾದಂಬರಿಗಳು. ಇವರೇ ಬರೆದ ಅಂತರಂಗ ಕನ್ನಡದ ಮೊಟ್ಟ ಮೊದಲನೆಯ ಮನೋವಿಶ್ಲೇಷಣಾತ್ಮಕ ಕಾದಂಬರಿಯನ್ನು ಬರೆದರು. ತಮ್ಮ ಕಾದಂಬರಿಗಳಲ್ಲಿ ಪೌರಾಣಿಕ ಪಾತ್ರಗಳನ್ನು ಸೃಷ್ಟಿಸಿ, ಬೆರಗುಗೊಳಿಸುವ ಪ್ರತಿಭೆಯನ್ನು ತೋರುತ್ತಾರೆ.

ಕುವೆಂಪುರವರ ಶ್ರೇಷ್ಠ ಹಾಗೂ ಬೃಹತ್ ಕಾದಂಬರಿಗಳೆಂದರೆ, **ಕಾನೂರು ಸುಬ್ಬಮ್ಮ ಹೆಗ್ಗಡತಿ** ಮತ್ತು **ಮಲೆಗಳಲ್ಲಿ ಮದುಮಗಳು**. ಕಾನೂರು ಸುಬ್ಬಮ್ಮ ಹೆಗ್ಗಡಿತಿ ೧೯೩೬ರಲ್ಲಿ ಪ್ರಕಟವಾಯಿತು. ಮೊದಲೆರಡು ದಶಕಗಳು ಈ ಕಾದಂಬರಿ ಅತಿ ಮೆಚ್ಚುಗೆಯನ್ನು ಪಡೆಯಿತು. ಈಚೆಗೆ ಈ ಕಾದಂಬರಿ ತೀವ್ರ ವಿಮರ್ಶೆಗೆ ಒಳಗಾಯಿತು. ಕರ್ನಾಟಕದ ತೀರ್ಥಹಳ್ಳಿ ಪ್ರಾಂತ್ಯದ ಹಳ್ಳಿಗಾಡಿನ ಜೀವನದ ಆವರಣದಲ್ಲಿ ಒಂದು ಸೂಕ್ಷ್ಮ ಚೇತನ ಅರಳುವುದನ್ನು ಕಾದಂಬರಿಕಾರರು ಚಿತ್ರಿಸುತ್ತಾರೆ. ಮಲೆನಾಡಿನ ನಿಸರ್ಗ, ಜನಜೀವನ, ಸಂಜೆ ಮುಂಜಾನೆಗಳು, ಪ್ರಾಣಿ ಪಕ್ಷಿಗಳು ಓದುಗರ ಅನುಭವಕ್ಕೆ ಬರುತ್ತವೆ. ವಾಸ್ತವ ಮಾರ್ಗದಲ್ಲಿ ಬಂದ ಬಹುಮುಖ್ಯ ಕಾಂದಬರಿಗಳಲ್ಲೊಂದು. ೧೯೬೭ರಲ್ಲಿ ಮಲೆಗಳಲ್ಲಿ ಮದುಮಗಳು ಪ್ರಕಟವಾಯಿತು. ಕಾನೂರು ಸುಬ್ಬಮ್ಮ ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು ಕಾದಂಬರಿಗೆ ಸಜೀವ ಸಂಬಂಧವಿದೆಯನ್ನುವುದನ್ನೂ ಕಾಣಬಹುದು. ಇವೆರಡರ ಸಾಮಾಜಿಕ ಹಾಗೂ ಪ್ರಾಕೃತಿಕ ಪರಿಸರ ಒಂದೇ ಆಗಿದೆ. ಕಾದಂಬರಿಯ ಹೆಸರಿನಲ್ಲಿಯೇ ಕಾದಂಬರಿ

ಕೇಂದ್ರದ ಸೂಚನೆಯಿದೆ. ಚೆನ್ನಮ್ಮ ಮುಕುಂದಯ್ಯ ಗುತ್ತಿತಿಮ್ಮಿ ಇವರ ಕತೆಗಳು ಕಾದಂಬರಿಯಲ್ಲಿ ಹಾಸುಹೊಕ್ಕಾಗಿವೆ. ಕುವೆಂಪು ತಮ್ಮ ಕಾದಂಬರಿಗಳ ಬಗ್ಗೆ Cosmic Vision broading on local things ಎಂದು ಹೇಳಿದ್ದಾರೆ. ಡಿ.ಆರ್. ನಾಗರಾಜ್ ಕುವೆಂಪು ಕಾದಂಬರಿಗಳ ಬಗ್ಗೆ ಬರೆಯುತ್ತಾ, ತತ್ವಜ್ಞಾನಿ ಹಾಗೂ ಕಾದಂಬರಿಯ ಕಲಾವಿದರ ನಡುವೆ ಭೇದ ಕಲ್ಪಿಸುತ್ತಾರೆ. ಅವರ ಅಭಿಪ್ರಾಯದಲ್ಲಿ ಕುವೆಂಪು ಕಾದಂಬರಿಯ ತತ್ವಜ್ಞಾನಿಯ ದಿವ್ಯ ನಿರ್ಲಕ್ಷ್ಯವನ್ನೂ ಮೀರಿ ಜೀವನದ ವಾಸ್ತವಗಳನ್ನು ತಮ್ಮ ಕೃತಿಗಳಲ್ಲಿ ತೋರಿದ್ದಾರೆ ಎಂದು ಹೇಳುತ್ತಾರೆ.

ಪ್ರಗತಿಶೀಲ ಚಳುವಳಿ ಮುಖ್ಯವಾಗಿ ಫಲ ನೀಡಿದ್ದು ಕಾದಂಬರಿ, ಸಣ್ಣ ಕತೆಗಳಲ್ಲಿ ಅನಕೃ ತಮ್ಮ ಸಾಹಿತ್ಯ ರಚನೆಗೆ ಅಶ್ಲೀಲ ಎಂದು ಯಾವ ವಿಷಯವನ್ನೂ ಹೊರಗಿಡಲಿಲ್ಲ. ಸಮಾಜದ ಅನೇಕ ಸಮಸ್ಯೆಗಳನ್ನು ಕಾದಂಬರಿಗೆ ವಸ್ತುವನ್ನಾಗಿ ದುಡಿಸಿಕೊಂಡರು. ಅನಕೃ ಕಾದಂಬರಿಯ ಲೋಕವನ್ನು ವಿಸ್ತರಿಸಿದರಲ್ಲದೇ ಹೊಸ ಹೊಸ ವಸ್ತುಗಳನ್ನೂ ಆರಿಸಿ, ನಿಸ್ಸಂಕೋಚವಾಗಿ ಬರೆಯುವುದನ್ನೂ ಸಾಧ್ಯ ಮಾಡಿಕೊಟ್ಟರು. ತ.ರಾ.ಸುಬ್ಬರಾವ್, ನಿರಂಜನ, ಅರ್ಚಕ ವೆಂಕಟೇಶ್, ನಾಡಿಗೇರ ಕೃಷ್ಣರಾವ್, ಕುಮಾರವೆಂಕಣ್ಣ ಮುಂತಾದವರೆಲ್ಲ ಪ್ರಗತಿಶೀಲ ಮಾರ್ಗದಲ್ಲಿ ಬರೆದರು. ತ.ರಾ.ಸು. ಮುಂಜಾವಿನಿಂದ ಮುಂಜಾವು, ಪುರುಷಾವತಾರ, ಹಂಸಗೀತ, ಬಿಡುಗಡೆಯ ಬೇಡಿ - ಮುಂತಾದವುಗಳು. ಮೋಹದ ಬಲೆಯಲ್ಲಿ, ಜರತಾರಿ ಜಗದ್ಗುರು, ಜ್ವಾಲಾಮುಖಿಯ ಮೇಲೆ, ನಾನು ಪೊಲೀಸನಾಗಿದ್ದೆ, ಖಾನಾವಳಿಯ ನೀಲ - ಮುಂತಾದ ಕಾದಂಬರಿಗಳನ್ನು (ಬಸವರಾಜ ಕಟ್ಟೀಮನಿ) ಬರೆದರು. ನಿರಂಜನರು ಚಿರಸ್ಮರಣೆ ಕಾದಂಬರಿ ಕನ್ನಡದ ಶ್ರೇಷ್ಠ ಕಾದಂಬರಿಗಳಲ್ಲಿ ಒಂದು.

ನವ್ಯ ಪ್ರಕಾರ ಸಣ್ಣಕತೆಯಲ್ಲಿ ಮೊದಲು ಕಾಣಿಸಿಕೊಂಡು ಕಾದಂಬರಿಯ ಪ್ರಕಾರದಲ್ಲಿ ಹೆಚ್ಚು ಪ್ರಭಾವಿಯಾಗಿ ಬೆಳೆಯಿತು. ೧೯೬೦ರ ವೇಳೆಗೆ ನವ್ಯ ಪ್ರಕಾರ ಹೆಚ್ಚಾಗಿ ಕಂಡುಬಂದಿತು. ೧೯೬೧ರಲ್ಲಿ ಪ್ರಕಟವಾದ ಶಾಂತಿನಾಥ ದೇಸಾಯಿಯವರ ಮುಕ್ತಿ ಕಾದಂಬರಿಯನ್ನು ನವ್ಯ ಮಾರ್ಗದ ಪ್ರಥಮ ಕಾದಂಬರಿಯ ಎಂದು ಕರೆಯಲಾಗಿದೆ. ಸುಮಾರು ಇಪ್ಪತ್ತು ವರ್ಷಗಳ ಕಾಲ ಹದಿನೈದು ಅಥವಾ ಇಪ್ಪತ್ತು ಕಾದಂಬರಿಗಳು ಮಾತ್ರ ರಚಿತಗೊಂಡವು.

ನವೋದಯ ಸಾಹಿತ್ಯ ಇಂಗ್ಲಿಷ್ ಸಾಹಿತ್ಯದ ಶೇಕ್ಸ್‌ಪಿಯರ್, ಮಿಲ್ಟನ್, ವಾಲ್ಟರ್, ಸ್ಕಾಟ್‌ರ ಪ್ರಭಾವಕ್ಕೆ ಒಳಗಾದರೆ, ಪ್ರಗತಿಶೀಲ ಸಾಹಿತ್ಯ ಫ್ರಾನ್ಸಿನ ಮಾಪಸ, ಜೆಮಿಲಿಜೋ ನಾರ್ವೆಯ ಇಬ್ಸಿನ್, ರಷ್ಯದ ಮಾಕ್ಸಿಂಗಾರ್ಕಿ ಮುಂತಾದವರ ಪ್ರಭಾವಕ್ಕೆ ಒಳಗಾಯಿತು. ಅಂತೆಯೇ ನವ್ಯ ಸಾಹಿತ್ಯ ಇಂಗ್ಲೆಂಡ್‌ನ ಡಿಎಚ್ ಲಾರೆನ್ಸ್, ಸಾಮ್ಯುಯಲ್ ಬೆಕೆಟ್, ಅಮೆರಿಕಾದ ಸ್ಯಾಲಿಂಗರ್, ಫ್ರಾನ್ಸಿನ ಆಲ್ಬರ್ಟ್‌ಕಾಮು, ಪಾ ಪಾಲ್ ಸಾತೆ, ಜರ್ಮನಿಯ ಫ್ರಾನ್ಜ್ ಕಾಫ್ಕ್ - ಇವರ ಪ್ರಭಾವಕ್ಕೆ ಒಳಗಾಯಿತು.

[ನವ್ಯಕಾಲಘಟ್ಟದಲ್ಲಿ ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಲಂಕೇಶ, ತೇಜಸ್ವಿ, ಯು.ಆರ್. ಅನಂತಮೂರ್ತಿ, ಶ್ರೀ ಕೃಷ್ಣ ಆಲನಹಳ್ಳಿ, ಬಿ.ವಿ. ವೈಕುಂಠರಾಜು, ಎಸ್.ಎಲ್. ಭೈರಪ್ಪ - ಮುಂತಾದವರು ಅನೇಕ ಕಾದಂಬರಿಗಳನ್ನು ರಚಿಸಿದರು. ಯು.ಆರ್. ಅನಂತಮೂರ್ತಿಯವರ ಕುತೂಹಲಕರ ಕಾದಂಬರಿಗಳೆಂದರೆ, ಒಂದು ಸಂಸ್ಕಾರ,ಇನ್ನೊಂದು ಭಾರತೀಪುರ. ಸಂಸ್ಕಾರ ಕಾದಂಬರಿಯ ಕೇಂದ್ರ ಪಾತ್ರ ಪ್ರಾಣೇಶಚಾರ್ಯರು. ಇವರಿಗೆ ಪ್ರತಿಸ್ಪರ್ಧಿ ನಾರಣಪ್ಪ. ಭಾರತೀಪುರದ ನಾಯಕ ಜಗನ್ನಾಥ. ಇಂಗ್ಲೆಂಡಿನಿಂದ ಭಾರತೀಪುರಕ್ಕೆ ಹಿಂದಿರುಗಿ ಸಮಗ್ರ ಬದಲಾವಣೆಗೆ ಪ್ರಯತ್ನಿಸುತ್ತಾನೆ. ಆದರೆ, ಅವನ ಪ್ರಯತ್ನ ಗೊಂದಲದಲ್ಲಿಯೇ ಮುಕ್ತಾಯವಾಗುತ್ತದೆ. ಈ ಕಾಲಘಟ್ಟದ ಪ್ರಮುಖ ಕಾದಂಬರಿಕಾರರೆಂದರೆ ಎಸ್.ಎಲ್. ಭೈರಪ್ಪ. ವಂಶವೃಕ್ಷ, ದೂರಸರಿದರು, ಧರ್ಮಶ್ರೀ, ಗೃಹಭಂಗ, ದಾಟು, ಮಂದ್ರ, ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ.) ೧೯೭೫ರ ವೇಳೆಗೆ ಕನ್ನಡ ಸಾಹಿತ್ಯದಲ್ಲಿ ಹೊಸ ಗಾಳಿಯೊಂದು ಬೀಸಿತು. ನವ್ಯಕ್ಕೆ ಬದಲಾಗಿ ನವ್ಯೋತ್ತರ ಎಂಬ ಪ್ರಕಾರ ಅಥವಾ ವಿಧ ಬಳಕೆಯಾಯಿತು. Post Modern ಎಂಬ ಪದ ಅಂತಾರಾಷ್ಟ್ರೀಯ ಬಳಕೆಯಾಗಿದೆ.[5] ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಮುಖ್ಯವಾಗಿ ಮೂರು ನವ್ಯೋತ್ತರ ಒಲವುಗಳನ್ನು ಗುರುತಿಸಬಹುದು. ಆತ್ಮಪ್ರಜ್ಞೆಯ ಕಾದಂಬರಿಗಳಲ್ಲಿ ಸಮಗ್ರ ಪ್ರಜ್ಞೆಗಿಂತ ಆತ್ಮಪ್ರಜ್ಞೆಯೇ ಹೆಚ್ಚು ಜಾಗೃತವಾಗಿರುತ್ತದೆ. ವಾಸ್ತವ ಜಗತ್ತಿನಲ್ಲಿ ನಡೆಯುವ ವ್ಯಕ್ತಿ-ವ್ಯಕ್ತಿ ಸಂಬಂಧಗಳಿಗಿಂತ ಲೇಖಕ ತನ್ನ ಆಂತರಿಕ ಜಗತ್ತಿನಲ್ಲಿ ಹೆಚ್ಚು ಆಸಕ್ತನಾಗಿರುತ್ತಾನೆ. ತೇಜಸ್ವಿ ಮತ್ತು ಲಂಕೇಶಕರು ನವ್ಯೋತ್ತರ ಕಾದಂಬರಿಕಾರರಿಗೆ ಅನುಕರಣೀಯರಾಗಿದ್ದಾರೆ.

ನವ್ಯೋತ್ತರ ಸಂದರ್ಭದಲ್ಲಿ ಕನ್ನಡ ಸಾಹಿತ್ಯದಲ್ಲಿ ನಡೆದ ಮುಖ್ಯ ಘಟನೆಯೆಂದರೆ, ಬಂಡಾಯ, ದಲಿತ ಚಳುವಳಿ. ಈ ಚಳುವಳಿಯು ಎಲ್ಲ ನೆಲೆಗಳಲ್ಲಿ

ನಿರ್ದಿಷ್ಟವಾಗಿ ಗುರುತಿಸುವುದು ಕಷ್ಟವಾದರೂ ಮಾರ್ಕ್ಸ್‌ವಾದ, ಲೋಹಿಯಾವಾದ ಹಾಗೂ ಅಂಬೇಡ್ಕರ್‌ವಾದಗಳನ್ನು ವಿಶೇಷವಾಗಿ ಪ್ರಭಾವವಿದೆ. ಈ ನಿಟ್ಟಿನಲ್ಲಿ ದೇವನೂರು ಮಹಾದೇವರ **ಒಡಲಾಳ, ಕುಸುಮಬಾಲೆ**, ಅರವಿಂದ ಮಾಲಗತ್ತಿಯವರ **'ಕಾರ್ಯ'** ಕೃತಿಗಳು ಬಹು ಮುಖ್ಯವಾದವುಗಳು. ಬರಗೂರು, ಕುಂ.ವೀ., ಮನಜ., ವಾಲೀಕಾರ ಮೊದಲಾದವರು ಒಳ್ಳೆಯ ಕಾದಂಬರಿಗಳನ್ನು ಬರೆದಿದ್ದಾರೆ.

ಈ ಮಧ್ಯೆ ಅನೇಕ ಲೇಖಕಿಯರು ಕಾದಂಬರಿ ಸಾಹಿತ್ಯ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ಮೂವತ್ತರ ದಶಕದಲ್ಲಿ ತ್ರಿವೇಣಿ ಕನ್ನಡ ಸಾಹಿತ್ಯ ಲೋಕಕ್ಕೆ ವಿಶಿಷ್ಟ ಕೊಡುಗೆಯನ್ನು ನೀಡಿದರು. ಅಂದಿನ ಸಮಯದಲ್ಲಿ ಸ್ತ್ರೀಯರು ಬರೆಯದೆ ಇದ್ದ ಕಾಲದಲ್ಲಿ ಬರೆಯಲು ಪ್ರಾರಂಭಿಸಿ, ಅಪಾರ ಜನಮನ್ನಣೆಯನ್ನು ಗಳಿಸಿದರು. ಬೆಕ್ಕಿನ ಕಣ್ಣು, ಶರಪಂಜರ, ಹಣ್ಣೆಲೆ ಚಿಗುರಿದಾಗ - ಮುಂತಾದ ಕಾದಂಬರಿಗಳಲ್ಲಿ ಮನಶಾಸ್ತ್ರವನ್ನೂ ತಮ್ಮ ಕಾದಂಬರಿಗಳಲ್ಲಿ ಗುರಿ ಮಾಡಿಕೊಳ್ಳುತ್ತಾರೆ.

ತ್ರಿವೇಣಿಯವರ ನಂತರ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕಾದಂಬರಿಗಳನ್ನು ಬರೆಯಲು ಪ್ರಾರಂಭಿಸಿದರು. ಎಂ.ಕೆ. ಇಂದಿರಾ, ಅನುಪಮಾ ನಿರಂಜನ, ಎಚ್.ಎಲ್. ಪುಷ್ಪ, ಪಾರ್ವತಿ, ಸಿ.ಎನ್. ಮುಕ್ತಾ, ಜಯಲಕ್ಷ್ಮಿ - ಮುಂತಾದವರು ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ.

ಇತ್ತೀಚಿನ ದಶಕಗಳಲ್ಲಿ ವೀಣಾ ಶಾಂತೇಶ್ವರ, ಸಾರಾ ಅಬೂಬಕರ್, ಬಿ.ಟಿ. ಲಲಿತಾನಾಯಕ್ - ಹೆಚ್ಚು ಜನಪ್ರಿಯರಾಗಿದ್ದಾರೆ. ವೀಣಾ ಶಾಂತೇಶ್ವರರ ಶೋಷಣೆ, ಬಂಡಾಯ - ಇತ್ಯಾದಿ ಕಾದಂಬರಿಗಳನ್ನು ಬರೆದಿದ್ದಾರೆ. ಇವರ ಕಾದಂಬರಿಗಳಲ್ಲಿ ಹೆಣ್ಣಿನ ಇಂದಿನ ವ್ಯವಸ್ಥೆಯಲ್ಲಿ ಹೇಗೆ ಶೋಷಣೆಗೆ ಒಳಗಾಗಿದ್ದಾಳೆ ಎಂಬುದನ್ನು ಚಿತ್ರಿಸಿದ್ದಾರೆ. ಸಾರಾ ಅಬೂಬಕರ್ ಮುಸ್ಲಿಂ ಸಂವೇದನೆಯ ಹಿನ್ನೆಲೆಯಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇವರ ಚಂದ್ರಗಿರಿಯ ತೀರದಲ್ಲಿ ಧಾರ್ಮಿಕ ಹಾಗೂ ಕೌಟುಂಬಿಕ ಚಿತ್ರಗಳನ್ನು ಚಿತ್ರಿಸಿದ್ದಾರೆ. ಬಿ.ಟಿ. ಲಲಿತಾನಾಯಕ್‌ರ ಗತಿ ಸಮಾಜದಲ್ಲಿ ಹೆಣ್ಣಿಗಾಗುತ್ತಿರುವ ನಿರಂತರ ಶೋಷಣೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

ಕನ್ನಡ ಕಾದಂಬರಿ ನವೋದಯ, ಪ್ರಗತಿಶೀಲ, ನವ್ಯ ಹಾಗೂ ನವ್ಯೋತ್ತರ ಕಾಲಗಳಲ್ಲಿ ಹಲವಾರು ವಿಚಾರಧಾರೆಗಳ ಪ್ರಭಾವದಿಂದ ಹಾಗೂ ಹೊಸ ಹೊಸ ಪ್ರಯೋಗಗಳಿಂದ ಸ್ಥಿತ್ಯಂತರಗಳನ್ನು ಕಂಡರೂ ಅದು ಮುಖ್ಯವಾಗಿ ವಾಸ್ತವ ವಾದದ ಪರಂಪರೆಯಾಗಿಯೇ ಉಳಿದು ಬಂದುದು ಮಹತ್ವವಾಗಿದೆ. ಕನ್ನಡ ಕಾದಂಬರಿ ಪರಂಪರೆಯಲ್ಲಿ ಎರಡು ಪರಂಪರೆಗಳನ್ನು ಗುರುತಿಸಬಹುದು. ಒಂದು ಅನಕೃ ಪರಂಪರೆ, ಇನ್ನೊಂದು ಕಾರಂತ ಪರಂಪರೆ. ಕಾರಂತ ಪರಂಪರೆ ವಾಸ್ತವವಾದದ ಧನಾಂಶಗಳನ್ನು ಒಳಗಂಡರೆ, ಅನಕೃ ಪರಂಪರೆ ವಾಸ್ತವವಾದದ ಋಣ ಅಥವಾ ನೆಗೆಟಿವ್ ಲಕ್ಷಣಗಳನ್ನು ತೋರಿಸುತ್ತದೆ.

ಕನ್ನಡ ಕಾದಂಬರಿ ಪಾಶ್ಚಾತ್ಯ ಪ್ರಭಾವದಲ್ಲಿಯೇ ಹುಟ್ಟಿ ಬೆಳೆದಿದೆ. ಬೆಳೆಯುತ್ತಿದೆ. ಆದರೂ ತನ್ನ ನಾಡಿನ ಸ್ವಂತಿಕೆಯನ್ನು ಪರಂಪರೆಯನ್ನು ಉಳಿಸಿಕೊಂಡಿದೆ.

ಅಡಿಟಿಪ್ಪಣಿ

1. ಡಾ|| ಜಿ.ಎಸ್.ಆಮೂರ, ಕನ್ನಡ ಕಥನ ಸಾಹಿತ್ಯ : ಕಾದಂಬರಿ ಪುಟ - 8

2. ಡಾ|| ಜಿ.ಎಸ್.ಆಮೂರ, ಕನ್ನಡ ಕಥನ ಸಾಹಿತ್ಯ : ಕಾದಂಬರಿ ಪುಟ - 8

3. ಎಲ್.ಎಸ್. ಶೇಷಗಿರಿರಾವ್, ಹೊಸಗನ್ನಡ ಸಾಹಿತ್ಯ, ಪುಟ - 170

   ಪ್ರಕಟಣೆ, ಕನ್ನಡ ಸಾಹಿತ್ಯ ಪರಿಷತ್.

4. ಎಲ್.ಎಸ್. ಶೇಷಗಿರಿರಾವ್, ಹೊಸಗನ್ನಡ ಸಾಹಿತ್ಯ, ಪುಟ - 175

   ಪ್ರಕಟಣೆ, ಕನ್ನಡ ಸಾಹಿತ್ಯ ಪರಿಷತ್.

5. ಡಾ|| ಜಿ.ಎಸ್.ಆಮೂರ, ಕನ್ನಡ ಕಥನ ಸಾಹಿತ್ಯ : ಕಾದಂಬರಿ ಪುಟ - 353

ಕಾದಂಬರಿಯಲ್ಲಿ ವೈಚಾರಿಕತೆ

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿಯೇ ವೈಚಾರಿಕತೆಯ ಅಭಿವ್ಯಕ್ತಿಗೆ ಅನುಕೂಲಕರವಾದ ಮಾಧ್ಯಮವಾಗಿದೆ. ಕಾವ್ಯದಲ್ಲಿ ಸಂವೇದನೆಯ ಮಟ್ಟದಲ್ಲಿ ಮಾತ್ರ ವೈಚಾರಿಕತೆ ಬರಬಹುದು. ನಾಟಕದಲ್ಲಿಯೂ ಲೇಖಕನ ವೈಯಕ್ತಿಕ ವೈಚಾರಿಕತೆಯ ಆವಿಷ್ಕಾರಕ್ಕೆ ಅಷ್ಟೊಂದು ಅವಕಾಶವಿಲ್ಲ. ಆದ್ದರಿಂದ ಕಾವ್ಯ ಹಾಗೂ ನಾಟಕ ಈ ಎರಡು ಸಾಹಿತ್ಯ ಪ್ರಕಾರಗಳಿಗಿಂತ ಕಾದಂಬರಿ ಹೆಚ್ಚು ವಿಕಸನಶೀಲವಾದ್ದು. ಸಾಮಾಜಿಕ ಸಮಸ್ಯೆಗಳು, ರಾಜಕೀಯ ಸಿದ್ಧಾಂತಗಳು, ನೈತಿಕ ಅಥವಾ ತಾತ್ವಿಕ ಪ್ರತಿಪಾದನೆಗಳು, ವ್ಯಕ್ತಿ, ವ್ಯಕ್ತಿಗಳ-ವ್ಯಕ್ತಿ - ಸಮಾಜದ, ವ್ಯಕ್ತಿ - ದೈವದ ಸಂಬಂಧ ಸೆಣಸಾಟಗಳು ಒಂದಲ್ಲ ಒಂದು ರೀತಿಯಲ್ಲಿ ಕಾದಂಬರಿಯಲ್ಲಿ ಬರುತ್ತದೆ. ಕಾದಂಬರಿ ಇಂದು ಲೇಖಕನ ವೈಚಾರಿಕತೆಯ ಪ್ರಮುಖ ಮಾಧ್ಯಮ ಹಾಗೂ ಪ್ರಕಾರವಾಗಿದೆ.[1]

ಕಾದಂಬರಿ ಮುಖ್ಯವಾಗಿ ಬದುಕಿನಲ್ಲಿ ನಿತ್ಯ ಅನುಭವದ ಪರಿಧಿಯಲ್ಲಿ ಬಂದು ಹೋಗುವ ಜನರನ್ನು ಸನ್ನಿವೇಶಗಳನ್ನು ಚಿತ್ರಿಸುತ್ತದೆ. ಹಾಗೆ ಚಿತ್ರಿಸುವಾಗ ಆ ಜನರ ಹಾಗೂ ಸನ್ನಿವೇಶಗಳ ಭಾವನಾತ್ಮಕ ಹಾಗೂ ನೈತಿಕ ಬಿಕ್ಕಟ್ಟುಗಳ ಮೇಲೆ ಒತ್ತುಕೊಡುತ್ತದೆ. ಎಲ್ಲ ಸಾಹಿತ್ಯದ ಹಿರಿಮೆಯೂ ಮಹತ್ವದ ಹಾಗೂ ಜಟಿಲ ಬಿಕ್ಕಟ್ಟುಗಳಿಗೆ ಗೌರವಯುತವಾದ ಪರಿಹಾರ ದೊರಕಿಸುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತವೆ. ಭಾವನಾತ್ಮಕ ಹಾಗೂ ನೈತಿಕ ಮೌಲ್ಯಗಳನ್ನು ಪ್ರಸ್ತಾಪಿಸುವುದು ಅನಿವಾರ್ಯವೂ ಆಗಿದೆ. ಇಂಥ ಮೌಲ್ಯಗಳ ವಿಷಯದಲ್ಲಿ ವ್ಯಕ್ತವಾಗುವ ಲೇಖಕನ ದೃಷ್ಟಿಕೋನವನ್ನು ಅವನ ವೈಚಾರಿಕತೆ ನಿರ್ಧರಿಸುತ್ತದೆ. ವೈಚಾರಿಕತೆ ಕಾದಂಬರಿಯೊಂದರ ಗರಿಮೆಯನ್ನು ನಿರ್ಧರಿಸುವ ಮಹತ್ವದ ಸಂಗತಿಗಳಲ್ಲಿ ಒಂದು. ಎಲಿಯಟ್ ಹೇಳುವಂತೆ, ಒಂದು ಕೃತಿ ಸಾಹಿತ್ಯ - ಹೌದೋ ಅಲ್ಲವೋ, ಕಥಾ ಸಂಧಾನ ಎಂಬುದನ್ನು ಕೇವಲ ಸಾಹಿತ್ಯ ಮಾನದಂಡಗಳು, ಭಾಷೆಯ ಉಪಯೋಗ, ಪಾತ್ರ ನಿರೂಪಣೆ ಮಾತ್ರ ನಿರ್ಧರಿಸಬಲ್ಲವು. ಆದರೆ, ಆ ಕೃತಿಯ ಹಿರಿಮೆಯನ್ನು ನಿರ್ಧರಿಸುವುದಕ್ಕೆ ಕೇವಲ ಸಾಹಿತ್ಯಿಕ ಮಾನದಂಡಗಳೇ ಸಾಕಾಗುವುದಿಲ್ಲ. ಉತ್ತಮ ಕಾದಂಬರಿಯೊಂದು ಬದುಕಿನ ಬಗೆಗಿರುವ ಅನುಭವವನ್ನೂ ವಿಸ್ತರಿಸಬೇಕು. ಹೊಸ ದೃಷ್ಟಿಕೋನವನ್ನು ಬಿಂಬಿಸಬೇಕು. ಬದುಕಿನ ಮೂಲಭೂತ ಸಮಸ್ಯೆಗಳ ಆಳವಾದ ತಿಳಿವಳಿಕೆಯಿಂದ ಹೊರಡುವ ಲೇಖಕ ಉತ್ತಮ ಮಾರ್ಗದರ್ಶನ

ನೀಡಬಲ್ಲವನಾಗುತ್ತಾನೆ. ಅನುಭವದ ಸ್ವೀಕಾರ ಮತ್ತು ಆಯ್ಕೆ ಲೇಖಕನ ವೈಚಾರಿಕತೆಯನ್ನು ನಿಯಂತ್ರಿಸುತ್ತದೆ. ಸಾಹಿತ್ಯದಲ್ಲಿ ಜೀವನಾನುಭವ ಒಂದು ರೀತಿಯಲ್ಲಿ ಲೇಖಕನ ಜೀವನ ದೃಷ್ಟಿಯ ಅರ್ಥಪೂರ್ಣತೆಯನ್ನು ಒಳಗೊಂಡು ಸಾಹಿತ್ಯದಲ್ಲಿ ಸ್ಥಾನ ಪಡೆಯುತ್ತದೆ. ವೈಚಾರಿಕತೆಯು ಮಹತ್ವ ಪಾತ್ರ ವಹಿಸುವುದರಿಂದ, ಅದು ಕೃತಿಯ ಯಶಸ್ಸಿನ ಮೇಲೆ ಪರಿಣಾಮ ಬೀರುತ್ತದೆ.

ಅನುಭವ ಮತ್ತು ವೈಚಾರಿಕೆಗಳು ಒಂದೇ ಮೂಲದಿಂದ ಉದ್ಭವಿಸಿದಾಗ ಕೃತಿಯ ಕಲಾಸಿದ್ಧಿ ಸ್ವಾಭಾವಿಕವಾಗಿ, ಸಹಜವೂ, ಅರ್ಥಪೂರ್ಣವೂ ಆಗುತ್ತದೆ. ಅನುಭವ ಮತ್ತು ವೈಚಾರಿಕತೆಗಳು ಜೀವನದಲ್ಲಿ ಮಹತ್ವವಾದವುಗಳು. ಗ್ರಾಮಾಯಣದ ಕಾದಂಬರಿಯಲ್ಲಿ ಇವೆರಡು ಅಪೂರ್ವ ಹೊಂದಾಣಿಕೆಯನ್ನು ಕಾಣಬಹುದು. ಕೌಟುಂಬಿಕ ಮೌಲ್ಯಗಳ ಮೂಲಕ ಬಾಳಿ ಬೆಳೆದ ಹಳ್ಳಿಯೊಂದರ ಸಮಾಜ ನಂತರ ಬಾಹ್ಯ ಪ್ರಚೋದನೆ ಹಾಗೂ ಆಂತರಿಕ ವಿಚ್ಛಿದ್ರಕಾರಿ ಶಕ್ತಿಗಳಿಂದಾಗಿ ಅವನತಿ ಹೊಂದುವ ಚಿತ್ರವನ್ನು ಗ್ರಾಮಾಯಣ ಕಟ್ಟಿಕೊಡುತ್ತದೆ. ಲೇಖಕರ ವೈಯಕ್ತಿಕ ಆತ್ಮೀಯತೆ, ಕಥಾ ವಸ್ತುವಿನ ನಿರ್ಧಿಷ್ಟತೆ, ಆಳವಾದ ಅರ್ಥಗಳ ತಿಳುವಳಿಕೆಯಿಂದಾಗಿ ಇದು ಕೇವಲ ಒಂದು ಹಳ್ಳಿಯ ಕತೆಯಾಗಿ ಉಳಿಯದೇ ಆಧುನಿಕ ಪ್ರಭಾವಗಳಿಗೆ ಸಿಕ್ಕು ತಮ್ಮ ರಚನೆಯ ಮೂಲ ಸ್ವರೂಪವನ್ನೇ ಕಳೆದುಕೊಳ್ಳುತ್ತಿರುವ ಎಲ್ಲ ಭಾರತೀಯ ಕತೆಗಳ ಕಥೆಯೂ ಆಗುತ್ತದೆ. ಈ ಕಾದಂಬರಿಯಲ್ಲಿ ವೈಚಾರಿಕ ಅರ್ಥವನ್ನು ವಾಚ್ಯವಾಗಿ ವಿವರಿಸದಿದ್ದರೂ ಇಲ್ಲಿ ಪಾತ್ರ, ಸನ್ನಿವೇಶಗಳೇ ಅದನ್ನು ಪಾರದರ್ಶಕವಾಗಿ ಸೂಚಿಸಬಲ್ಲವಾಗಿವೆ. ಹೀಗೆ ಅನುಭವ ಮತ್ತು ವೈಚಾರಿಕತೆಗಳು ಒಟ್ಟಿಗೆ ದುಡಿದಾಗ ಮಹತ್ವದ ಕೃತಿಯೊಂದು ನಿರ್ಮಾಣವಾಗುತ್ತದೆ.

ವೈಚಾರಿಕತೆ ಸಾಹಿತ್ಯದಲ್ಲಿ ಪ್ರಕಟವಾಗಬೇಕಾದ ಒಂದು ಆದರ್ಶ ಕ್ರಮ. ಈ ಆದರ್ಶಕ್ರಮದ ಒಂದು ಉದಾಹರಣೆಯನ್ನು ತೇಜಸ್ವಿಯವರ ಸ್ವರೂಪ ಕಾದಂಬರಿಯಲ್ಲಿ ಕಾಣಬಹುದು. ಸ್ವರೂಪದ ವೈಚಾರಿಕತೆ ಸಾರ್ತ್ರ, ಕಾಮೂರ ಅಸ್ತಿತ್ವವಾದಕ್ಕೆ ಹತ್ತಿರವಾಗಿದೆ. ಕಾಮೂನ The Fall ಕಾದಂಬರಿಗೂ ಬಹಳಷ್ಟು ಋಣಿಯಾಗಿದೆ.[2] ಇಲ್ಲಿನ ಬಹಳಷ್ಟು ಅಂಶ ಸ್ವತಂತ್ರವಾದದ್ದಲ್ಲವಾದರೂ, ಅಪ್ರಾಮಾಣಿಕವೆಂದು ಅನಿಸುವುದಿಲ್ಲ. ನಾಯಕನ ಅಪ್ರಮಾಣಿಕತೆ, ಆತ್ಮವಂಚನೆ, ಮೊದಲಾದವುಗಳನ್ನು ಮೂರ್ತಗೊಳಿಸುವ ಕೆಲಸವನ್ನು ಇಲ್ಲಿಯ ಘಟನೆಗಳು ಮಾಡುತ್ತವೆ. ಹಾಗೂ ಎಂದೂ

ಮುಗಿಯದ ಅರ್ಥದ ಅಮೂರ್ತ ನಿಗೂಢ ಛಾಯೆಗಳನ್ನೂ ಹಾಗೆಯೇ ಉಳಿಸುತ್ತದೆ. ಆತ್ಮ ನಿವೇದನೆಯ ಪ್ರಮಾಣಿಕ ಪ್ರಯತ್ನಕ್ಕೆ ನಾಯಕ ಪಡುವ ತೊಳಲಾಟದ ಮೂಲಕ ಪ್ರಕಟವಾಗುವ ವೈಚಾರಿಕತೆ ಸಹಜವಾಗಿದೆ. ಈ ವೈಚಾರಿಕತೆ ಇತ್ಯಾತ್ಮಕ ಸ್ವರೂಪದ ಸಿದ್ಧಾಂತವಾಗದೆ, ತನ್ನ ಅರಿವಿನಿಂದ ಹುಟ್ಟುವ ಪ್ರಮಾಣಿಕ ಶೋಧವಾಗಿ ಬಂದಿದೆ.

ಒಂದು ಕಾದಂಬರಿ ಮೂರ್ತವಾದ ಜೀವನಾನುಭವದಿಂದ ಆರಂಭವಾಗಿ ಮುಂದೆ ವೈಚಾರಿಕತೆಯನ್ನು ಅರ್ಥಪೂರ್ಣತೆಯನ್ನು ಮೈಗೂಡಿಸಿಕೊಳ್ಳಬಹುದು. ಬೀಜರೂಪದಲ್ಲಿದ್ದು ನಂತರ ಮೂಡಬಹುದು. ಲೇಖಕ ತನ್ನ ಪ್ರತಿಭೆಗೆ ತಕ್ಕದಾದ ವಿಷಯವನ್ನು ಯಾವ ದಿಕ್ಕಿನಿಂದಲಾದರೂ ಆರಂಭಿಸಬಹುದು. ಆದರೆ, ವೈಚಾರಿಕತೆಯ ಮೂಲದಿಂದ ಹೊರಡುವ ಕೃತಿ ಯಶಸ್ವಿಯಾಗುವುದೇ ಇಲ್ಲವೆಂದಾಗಲೀ ವೈಚಾರಿಕತೆಯಿಲ್ಲದೆ ಯಾವ ಕೃತಿಯೂ ಯಶಸ್ಸು ಕಾಣುವ ಸಾಧ್ಯತೆಗಳಿವೆಯೆಂದಾಗಲೀ ಅರ್ಥವಲ್ಲ. ಶಿವರಾಮ ಕಾರಂತರು ತಮ್ಮ ಕಾದಂಬರಿಗಳನ್ನು ವೈಚಾರಿಕ ತಳಹದಿಯ ಮೇಲೆಯೇ ಕಟ್ಟುತ್ತಾರೆ. ನಂಬಿದವರ ನಾಕ ನರಕದಲ್ಲಿ ನಂಬಿಕೆಯೇ ಬದುಕಿಗೂ ಇರುವ ನಿಕಟ ಸಂಬಂಧವನ್ನು ಕುರಿತು ಚಿಂತಿಸಿದ್ದರೆ, ಅಳಿದ ಮೇಲೆ ಕಾದಂಬರಿಯಲ್ಲಿ ಸತ್ತಮೇಲೆ ಮನುಷ್ಯನ ಬಾಳಿನಲ್ಲಿ ಉಳಿಯುವುದಾದರೂ ಏನು - ಎಂಬ ತಾತ್ವಿಕ ಪ್ರಶ್ನೆಯಿದೆ. ಇಲ್ಲಿನ ಸಂಗತಿಗಳು ಬದುಕಿನ ಮೇಲೆ ಬೀರಿದ ಪೂರ್ವನಿಶ್ಚಿತ ಸಿದ್ಧಾಂತಗಳಾಗಿರದೆ, ಬದುಕಿನ ಅಗಮ್ಯ ಸ್ವರೂಪವನ್ನೂ ಅರ್ಥ ಮಾಡಿಕೊಳ್ಳಲು ಯತ್ನಿಸುವ ಪ್ರಯತ್ನಗಳಾಗಿವೆ. ಅರ್ಥದ ಶೋಧನೆಗಳಾಗಿವೆ. ಯಶವಂತರಾಯರು ತಮ್ಮ ಎಲ್ಲಾ ಜೀವನವನ್ನೂ ಅಂತರ್ಮುಖಿಯಾಗಿಸಿಕೊಂಡು, ಏಕಾಂತ ಜೀವನವನ್ನು ಮಾಡಿದರು. ಯಶವಂತರು ಸತ್ತ ಮೇಲೆ ಅವರ ಸಂಪರ್ಕದಲ್ಲಿ ಬಂದ ಹಲವಾರು ಜನರ ಭಾವನೆಗಳೆಲ್ಲ ಕಲೆ ಹಾಕಿ ಮತ್ತೆ ಅವರ ವ್ಯಕ್ತಿತ್ವವನ್ನು ಪುನರ್ರಚಿಸುವುದು. ಇದೊಂದು ಬಗೆಯ ಶೋಧನ. ಈ ಶೋಧನೆ ಬದುಕಿನ ಅಗಮ್ಯ ರಹಸ್ಯದತ್ತ ಬೆರಳು ಮಾಡಿ ಎಂದಿಗೂ ಮುಗಿಯಲಾರದ ಅರ್ಥಸಂಪತ್ತನ್ನು ಸೂಚಿಸುತ್ತದೆ.

ಎಸ್.ಎಲ್.ಭೈರಪ್ಪನವರು ತಮ್ಮ ಕಾದಂಬರಿಗಳಲ್ಲಿ ವೈಚಾರಿಕತೆಯನ್ನೇ ಮೂಲ ಸಾಮಗ್ರಿಯನ್ನಾಗಿಸಿಕೊಂಡು ಬರೆಯುತ್ತಾರೆ.[3] ತಾತ್ವಿಕ ಸಿದ್ಧಾಂತಗಳ ಮೂಲಕವೇ ಅವರ ಬಹುತೇಕ ಕಾದಂಬರಿಗಳು ಆರಂಭವಾಗುತ್ತವೆ. ಅವನ್ನೂ ಪಾತ್ರ ಸನ್ನಿವೇಶಗಳ ಮೂಲಕ ಉದಾಹರಿಸುವಾಗ ಅವರ ಲಕ್ಷ್ಯವೆಲ್ಲ ಮೂಲತತ್ವದ ಮೇಲೆ ಉಳಿಯುತ್ತದೆ. ಶುದ್ಧ

ಜೀವನಾನುಭವದಿಂದಲೇ ಕಾದಂಬರಿಯ ರಚನೆಗೆ ಹೊರಡುವ ಲೇಖಕರು ಇದ್ದಾರೆ. ಮೊಕಾಶಿಯವರ ಗಂಗವ್ವ ಮತ್ತು ಗಂಗಾಬಾಯಿ ಇದಕ್ಕೆ ಉದಾಹರಣೆಯಾಗಿದೆ. ಒಬ್ಬರನ್ನೊಬ್ಬರು ಬಲೆಯಲ್ಲಿ ಹಿಡಿಯಲು ಹೂಡುವ ತಂತ್ರ, ಸೋಗು, ಬದುಕಿನ ಪ್ರತಿಕ್ಷಣಗಳನ್ನು ಹರಿತಗೊಳಿಸುತ್ತವೆ. ರಾಘಪ್ಪ ತನ್ನ ಭಾವನಾತ್ಮಕ ಹಾಗೂ ನೈತಿಕ ಬಿಕ್ಕಟ್ಟಿನ ಪ್ರಸಂಗದಲ್ಲಿ ಬದುಕಿನ ಅರ್ಥಪೂರ್ಣತೆಯನ್ನು ಮನಗಾಣುವುದೇ ಈ ಕಾದಂಬರಿಯ ಮಹತ್ವ ಭಾಗ. ಹೆಂಡತಿ ಸಾವಿನಲ್ಲಿ ರಾಘಪ್ಪನಿಗೆ ಹೊಸ ಜೀವನದ ಸಾಕ್ಷಾತ್ಕರವಾಗುತ್ತದೆ. ತನ್ನ ಸ್ವ ಸಾಮರ್ಥ್ಯದಿಂದ ಜೀವನವನ್ನೇ ಸೋಲಿಸಲು ಹೂಡಿದ್ದ ರಾಘಪ್ಪ ತನ್ನ ಅಂತರಂಗದತ್ತ ನೋಡಿ ಅಲ್ಲಿಯ ದೌರ್ಬಲ್ಯ ಕಂಡು ತಾನೇ ಬೆಚ್ಚಿ ಬೀಳುತ್ತಾನೆ. ರಾಘವನ ಪರಿವರ್ತನೆಯಲ್ಲಿ ಇಡೀ ಕಾದಂಬರಿ ಬದುಕಿನ ಕ್ರಿಯಾಶೀಲತೆಗೆ ಅರ್ಥ ತರುತ್ತದೆ.

ಕುವೆಂಪುರವರ ಕಾನೂರು ಹೆಗ್ಗಡಿತಿ ಹಾಗೂ ಮಲೆಗಳಲ್ಲಿ ಮದುಮಗಳು ಕಾದಂಬರಿಗಳು ಜೀವನದ ಲವಲವಿಕೆ, ವೈವಿದ್ಯ ವಿವರಗಳು ಆಶ್ಚರ್ಯಗೊಳಿಸುವಂತಿವೆ. ಕಾನೂರು ಹೆಗ್ಗಡಿತಿಯಲ್ಲಿ ಹೂವಯ್ಯನ ಪಾತ್ರದ ಮೂಲಕ ವೈಚಾರಿಕತೆಯನ್ನು ಕಾಣಬಹುದಾಗಿದೆ. ಇವನ ಭಾವಾತಿರೇಕದ ಆದರ್ಶ ವಿಮರ್ಶಕನ ಟೀಕೆಗೆ ಒಳಗಾಗಿದೆ. ಹೂವಯ್ಯನದು ಇಡಿಯ ಕತೆಯ ಹಣೆ ಬರಹವನ್ನೇ ನಿರ್ಧರಿಸುವಷ್ಟು ಕ್ರಿಯಾಶೀಲವಾದದ್ದಲ್ಲ. ಹೂವಯ್ಯನ ನಿಷ್ಕ್ರಿಯತೆ ಸುಬ್ಬಮ್ಮನ ಪತನದ ಮೂಲಕ ಕಾನೂರು ಮನೆತನ ದುರಂತಕ್ಕೆ ಕಾರಣವಾಗುತ್ತದೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಮಲೆನಾಡಿನ ಕ್ರಿಯಾಶೀಲವಾದ ಬದುಕನ್ನು ಕಾಣಬಹುದು. ಮುಕುಂದಯ್ಯ - ಚಿನ್ನಮ್ಮ, ಐತ-ಪೀಂಚಲು, ನಾಯಿಗುತ್ತಿ-ತಿಮ್ಮಿ, ವೆಂಕಪ್ಪನಾಯಕ-ನಾಗಕ್ಕ, ಚೀಂಕ್ರ-ಅಕ್ಕಣಿ, ತಿಮ್ಮಪ್ಪ ಹೆಗ್ಗಡೆ-ಲಕ್ಕಮ್ಮ - ಹೀಗೆ ಬೇರೆ ಬೇರೆ ಜಾತಿಯ ಬೇರೆ ಬೇರೆ ಅಂತಸ್ತುಗಳ ಜನಗಳಲ್ಲಿ ನಡೆಯುವ ಕಾಯಕಜೀವನ. ವಿವಾಹಪೂರ್ವ ಸಂಬಂಧ, ಮದುವೆ, ಅದಕ್ಕಾಗಿ ನಡೆಯುವ ಅನೇಕ ಅವಾಂತರಗಳು ಇಲ್ಲಿವೆ. ಪುಟ್ಟಪ್ಪನವರ ಕಾದಂಬರಿಗಳಲ್ಲಿ ಲೇಖಕನ ಸಮಗ್ರದರ್ಶನ ಮೂಡುವುದಿಲ್ಲ ಎಂದು ವಿಮರ್ಶಿಸಿದ್ದಾರೆ. ಅವರ ಕಾದಂಬರಿಗಳು ಅನುಭವದ ವೈಚಾರಿಕತೆಯನ್ನು ಧಿಕ್ಕರಿಸದೆ, ಅರ್ಥಪೂರ್ಣವಾದ ಶ್ರೀಮಂತ ಬದುಕನ್ನು ಚಿತ್ರಿಸುತ್ತಾರೆ.

ಮಾನವನ ಹವ್ಯಾಸಗಳು ಹಲವಾರು. ವಿದ್ಯಾವಂತ ಕುಟುಂಬದವರು ಮನೆಗಳಲ್ಲಿ ಬಿಡುವಿದ್ದಾಗ ಸಣ್ಣಕಥೆ, ಕಾವ್ಯಗಳನ್ನು ಓದುತ್ತಿದ್ದರು. ಸಣ್ಣಕಥೆ ಯಾವುದಾದರೊಂದು ಅನುಭವ ಅಥವಾ ಘಟನೆಯನ್ನು ಚಿತ್ರಿಸುತ್ತದೆ. ಸುಮ್ಮನೆ ಕುಳಿತಾಗ ಒಂದು ಕಾದಂಬರಿಯಾದರೂ ಇದ್ದರೆ ಸಮಯ ವ್ಯರ್ಥವಾಗಲಿಕ್ಕಿಲ್ಲ ಎಂಬ ಅಪೇಕ್ಷೆಯ ಪೂರೈಕೆಗಾಗಿ ಹುಟ್ಟಿದ್ದೇ ಕಾದಂಬರಿ ಸಾಹಿತ್ಯಪ್ರಕಾರ.

೧೮ನೇ ಶತಮಾನದಲ್ಲಿ ಕೈಗಾರಿಕಾ ಕ್ರಾಂತಿ ವಿಫುಲ ಯಶಸ್ಸನ್ನು ಪಡೆಯಿತು. ಈ ಯಶಸಿನಿಂದ ದೊಡ್ಡ ದೊಡ್ಡ ಮುದ್ರಣ ಯಂತ್ರಗಳು ನಿರ್ಮಾಣವಾಗಿ ಮುದ್ರಣ ಪ್ರಪಂಚಕ್ಕೆ ಬಹು ಸಹಾಯವಾಯಿತು. ಈ ಸಾಹಿತ್ಯ ಪ್ರಕಾರ ಆಧುನಿಕ ವ್ಯವಸ್ಥೆಯಲ್ಲಿ ಬದಲಾವಣೆಯಾಗುತ್ತಿದ್ದ ಕಾಲದಲ್ಲಿ ಹುಟ್ಟಿದ್ದು ಗಮನಾರ್ಹ ವಿಚಾರ.

ಪುರಾತನ ಗ್ರೀಕ್, ರೋಮನ್, ಗ್ರಂಥಗಳಲ್ಲಿ ಕಾದಂಬರಿಯ ಲಕ್ಷಣಗಳನ್ನು ವಿವರಿಸುವ ಉಲ್ಲೇಖವಿದ್ದರೂ ಅವುಗಳನ್ನು ಕಾದಂಬರಿ ಎಂದು ಪರಿಗಣಿಸಲು ಸಾಧ್ಯವಿಲ್ಲ. ೧೭ನೇ ಶತಮಾನದ ಪ್ರಾರಂಭದಲ್ಲಿ ಸ್ಪೇನಿನ ಸರ್ವಾಂಟಿಸ್ ಬರೆದ 'ದಾನ್ ಕ್ವಿವೊತ್' ಕೃತಿಯನ್ನು ವಿಶ್ವದ ಮೊಟ್ಟ ಮೊದಲ ಕಾದಂಬರಿ ಎಂದು ಹೇಳಬಹುದು.[4] ೧೭೧೯ ಡೇನಿಯಲ್ ಡೆಫೊ ಬರೆದ ರಾಬಿನ್‌ಸನ್ ಕ್ರೊಸೋ ಇಂಗ್ಲೀಷಿನ ಮೊದಲ ಕಾದಂಬರಿ ಎಂದು ಅಭಿಪ್ರಾಯಪಡುತ್ತಾರೆ. ಸಾಮ್ಯುಯಲ್ ರಿಚರ್ಡ್‌ಸನ್, ಹೆನ್ರಿಫೀಲ್ಡಿಂಗ್, ವಾಲ್ಟರ್ ಸ್ಕಾಟ್, ಜೇನ್ ಆಸ್ಟಿನ್, ಚಾರ್ಲ್ಸ್ ಡಿಕೆನ್ಸ್, ಜಾರ್ಜ್ ಎಲಿಯಟ್, ಥಾಮಸ್ ಹಾರ್ಡಿ - ಮುಂತಾದವರೆಲ್ಲ ಇಂಗ್ಲೀಷಿನ ಪ್ರಮುಖ ಕಾದಂಬರಿಕಾರರು.

ಯೂರೋಪಿನ ರಾಷ್ಟ್ರಗಳು ವಿಶ್ವ ಸಾಹಿತ್ಯಕ್ಕೆ ಅತ್ಯುತ್ತಮ ಕಾದಂಬರಿಗಳನ್ನು ನೀಡಿವೆ. ಜರ್ಮನಿಯ ಗಯಟೆ, ಫ್ರಾನ್ಸ್‌ಕಾಫ್ಕ, ಥಾಮಸ್ ಮಾನ್, ಫ್ರಾನ್ಸಿನ ವಾಲ್ಟೇರ್, ಅಂದ್ರೇಮಾಲ್ರೋ, ಆಲ್ಬರ್ಟ್ ಕಾಮು, ರಷ್ಯದ ಟಾಲ್‌ಸ್ಟಾಯ್, ದಾಸ್ತೋವಸ್ಕಿ, ಮಾಕ್ಸಿಂಗಾರ್ಕಿ ಮುಂತಾದವರು ಪ್ರಮುಖರು. ಕಾದಂಬರಿ ಇಂದಿನ ದಿನಗಳಲ್ಲಿ ಕೇವಲ ಮನೋರಂಜನೆಯಾಗಿರದೆ, ಕಾವ್ಯದ ಗಾಂಭೀರ್ಯತೆಯನ್ನು ಪಡೆದುಕೊಂಡಿರುವುದು ಗಮನಾರ್ಹ ವಿಚಾರ.

ಅಡಿಟಿಪ್ಪಣಿ

1. ಗಿರಡ್ಡಿ ಗೋವಿಂದರಾಜ, ಸಮಗ್ರ ವಿಮರ್ಶೆ ಸಂಪುಟ. 2 ಪುಟ 26
2. ಗಿರಡ್ಡಿ ಗೋವಿಂದರಾಜ, ಸಮಗ್ರ ವಿಮರ್ಶೆ ಸಂಪುಟ. 2 ಪುಟ 30
3. ಗಿರಡ್ಡಿ ಗೋವಿಂದರಾಜ, ಸಮಗ್ರ ವಿಮರ್ಶೆ ಸಂಪುಟ. 2 ಪುಟ 32
4. ಕನ್ನಡ ವಿಶ್ವಕೋಶ, ಸಂಪುಟ-೫, ಪುಟ-173

ನವ್ಯಸಾಹಿತ್ಯ

ಒಂದು ಕಾಲಕ್ಕೆ ಅತ್ಯುತ್ತಮ ಕೃತಿಗಳನ್ನು ಕೊಟ್ಟ ಕಾವ್ಯ ಸಂಪ್ರದಾಯ ತನ್ನ ಛಾಪನ್ನು ಕಳೆದುಕೊಂಡ ಮೇಲೆ ಹೊಸ ಸಾಹಿತ್ಯಕ್ಕೆ ದಾರಿ ಮಾಡಿಕೊಟ್ಟಿತು. ಕನ್ನಡ ಸಾಹಿತ್ಯದಲ್ಲಿ ೧೯೫೦ರ ಬಳಿಕ ಬಂದ ಹೊಸ ಬಗೆಯ ಬರವಣಿಗೆಯನ್ನು ನವ್ಯ ಸಾಹಿತ್ಯ ಎಂದು ಕರೆಯುತ್ತಾರೆ. ಈ ನವ್ಯ ಸಾಹಿತ್ಯ ಹುಟ್ಟಲು ಆ ಕಾಲದ ಪರಿಸರದ ಪ್ರಭಾವವೇ ಕಾರಣ. ಬಡತನ, ನಿರುದ್ಯೋಗ, ಅಶಾಂತಿ, ಕಪಟ ಸ್ಪಷ್ಟವಾಗಿ ಗೋಚರಿಸತೊಡಗಿದ್ದರಿಂದ ಕಲ್ಪನಾ ದೃಷ್ಟಿ ಕಳಚಿ, ವಾಸ್ತವಿಕ ದೃಷ್ಟಿಗೆ ಎಡೆ ಮಾಡಿಕೊಟ್ಟಿತು.

ನವ್ಯ ಸಾಹಿತ್ಯದ ಪ್ರಮುಖ ಕಾದಂಬರಿಗಳು

೧) ಜೀವನದ ಸಂಕೀರ್ಣ, ಅನುಭವಗಳನ್ನು ಬಿಡಿಸಿ, ಬಿಡಿಸಿ, ಬೇರೆಯಾಗಿ ಹೇಳದೆ, ಅಷ್ಟೇ ಸಂಕೀರ್ಣವಾಗಿ ಹೇಳುವುದು.

೨) ಹಿಂದಿನವರು ಬಳಸುತ್ತಿದ್ದ ಛಂದಸ್ಸು ತಂತ್ರಗಳನ್ನು ಬಿಟ್ಟು ಹೊಸ ತಂತ್ರಗಳನ್ನು ರೂಪಿಸುವುದು.

೩) ಹೇಳುವ ವಿಷಯವು ಸಂಕೀರ್ಣವಾಗಿರುವುದು.

೪) ಓದುಗರು ತೀವ್ರವಾಗಿ ಅನುಭವಿಸುವಂತೆ ಪ್ರತಿಮೆ, ಸಂಕೇತಗಳನ್ನು ಬಳಸುವುದು.

ಕನ್ನಡದಲ್ಲಿ ನವ್ಯ ಸಾಹಿತ್ಯ ಪ್ರಾರಂಭವಾದದ್ದು ಪೇಜಾವರ ಸದಾಶಿವರಾಯರಿಂದ ನವ್ಯಕಾವ್ಯ ಎಂಬ ಪದವನ್ನು ಮೊದಲು ಬಳಸಿದವರು ಗೋಕಾಕರು.

೧೯೪೭ರಲ್ಲಿ ಸ್ವಾತಂತ್ರ್ಯ ಲಭಿಸಿದ್ದು, ನವ್ಯ ಸಾಹಿತ್ಯದ ಉಗಮಕ್ಕೆ ಮುಖ್ಯ ಕಾರಣವೆಂದು ಹೇಳಬಹುದು. ಆಗಿನ ಜನತೆಗೆ ಎರಡು ಮುಖ್ಯ ವಿಚಾರಗಳಿದ್ದವು. ಒಂದು ಸ್ವಾತಂತ್ರ್ಯಕ್ಕಾಗಿ ಹಂಬಲಿಸುವುದು, ಎರಡು ಅರಸರ ಆಳ್ವಿಕೆಯ ಮೆಚ್ಚುಗೆಗೆ ಪಾತ್ರವಾಗುವುದು. ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದ ನಾಯಕರೆಲ್ಲ ದೇವಮಾನವರಾಗಿ

ಕಾಣುತ್ತಿದ್ದರು. ಸ್ವಾತಂತ್ರ್ಯದಿಂದ ಬಂದ ನಂತರ ನಮ್ಮ ಎಲ್ಲ ಕಷ್ಟಗಳು ಪರಿಹಾರವಾಗುತ್ತದೆ ಎಂಬ ನಂಬಿಕೆ ದೇಶದ ಜನತೆಯಲ್ಲೆಲ್ಲಾ ತುಂಬಿತ್ತು.

ಪ್ರತಿ ತಲೆಮಾರಿನಲ್ಲಿ ಒಬ್ಬ ಬರಹಗಾರ ತನ್ನದೇ ಆದ ಹೊಸ ಭಾಷೆಯನ್ನು ರೂಪಿಸಿಕೊಳ್ಳದೇ ಉತ್ತಮ ಅಭಿವ್ಯಕ್ತಿಯನ್ನು ಪಡೆಯಲಾರ. ಭಾಷೆ ಮತ್ತು ಅಭಿವ್ಯಕ್ತಿ ಕಾಲ ಕಾಲಕ್ಕೆ ಹೊಸತನವನ್ನು ಪಡೆಯುತ್ತಿರುತ್ತದೆ. ಪ್ರಗತಿಶೀಲ ಸಾಹಿತಿಗಳು ನವೋದಯ ಸಾಹಿತ್ಯದ ಸತ್ವ ಕಳೆದುಹೋಯಿತು ಎಂದು ಹೇಳಿದರೆ, ನವ್ಯ ಸಾಹಿತಿಗಳು ನವೋದಯ ಹಾಗೂ ಪ್ರಗತಿಶೀಲ ಎರಡು ಸಾಹಿತ್ಯಗಳು ತಮ್ಮ ಪಾತ್ರವನ್ನು ಮುಗಿಸಿವೆ ಎಂದು ಹೇಳಿದರು. ೧೯೫೦ರಲ್ಲಿ ಮುಂಬಯಿ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ ಲೇಖಕ ಗೋಷ್ಠಿಯ ಅಧ್ಯಕ್ಷರಾಗಿ ಗೋಕಾಕರು **ಸಾಹಿತ್ಯ ಹಾಗೂ ನವ್ಯತೆ** ಎಂಬ ವಿಷಯದ ಬಗ್ಗೆ ಒಂದು ಉಪನ್ಯಾಸವನ್ನು ನೀಡಿದರು. ಅಂದಿನ ಗೋಷ್ಠಿಯಲ್ಲಿ ಹೀಗೆ ವಿವರಿಸಿದರು. "ಅಪೂರ್ಣ ವ್ಯಕ್ತಿತ್ವದಿಂದ ಉದ್ವಿಗ್ನರಾಗಿ ಒಬ್ಬರ ಮೇಲೊಬ್ಬರು ನಾವು ಹರಿದಾಡುತ್ತಿದ್ದೇವೆ. ಪ್ರಳಯದೆಡೆಗೆ ಜಗತ್ತನ್ನು ಎಳೆದೊಯ್ಯುತ್ತಿದ್ದೇವೆ. ಆದ್ದರಿಂದ ಸಾಹಿತ್ಯ ಬರಿ ಸತ್ಯ ಇಲ್ಲವೆ ಸೌಂದರ್ಯಕ್ಕೆ ಅಂಟಿಕೊಂಡು ನಿಲ್ಲದೆ ಮೇಲೆ ಹೇಳಿದ ಸಮ್ಯಕ್ತವನ್ನು ಚಿತ್ರಿಸಬೇಕಾಗಿದೆ. ಇದು ಅಮೃತ ತತ್ವಗಳ ಸಮೀಕರಣವಾಗಬೇಕಾಗಿದೆ. ಈ ಸಮೀಕರಣವೇ ನವ್ಯ ಸಾಹಿತ್ಯದ ಸೂತ್ರವಾಗಬೇಕಾಗಿದೆ" ಎಂದು ಹೇಳಿದರು. ಗೋಕಾಕರು ನವ್ಯ ಪ್ರಕಾರದ ನೂತನ ಮಾರ್ಗವನ್ನೂ ವಿವರಿಸಿದರು.

ನವೋದಯ ಸಾಹಿತ್ಯದಲ್ಲಿ ಬಂದ ಪ್ರಮುಖರೆಲ್ಲಾ ವಾಸ್ತವತೆಗೆ ಒತ್ತು ಕೊಡದೆ, ಕಲ್ಪನಾ ಲೋಕದಲ್ಲಿ ವಿಹರಿಸಿ, ಸಾಹಿತ್ಯವನ್ನು ಬೇರೊಂದು ರೀತಿಯಲ್ಲಿ ರಚಿಸಿದರು. ಪ್ರಗತಿಶೀಲ ಸಾಹಿತಿಗಳು ಕಷ್ಟ ಪರಂಪರೆಗಳನ್ನೂ, ಸಮಸ್ಯೆಗಳನ್ನೂ ಶೋಷಣೆಗಳನ್ನೇ ಮುಖ್ಯ ಮಾಡಿಕೊಂಡು ಸಾಹಿತ್ಯ ರಚಿಸಿದರು. ನವ್ಯರು ಇವರೆಲ್ಲಕ್ಕಿಂದ ಬೇರೆ ರೀತಿಯಲ್ಲಿ ಸಾಹಿತ್ಯ ರಚಿಸಿದರು. ನವ್ಯ ಬರಹಗಾರರು ಸಾಹಿತ್ಯವನ್ನು ಜೀವನದ ವಿಶ್ಲೇಷಣೆಯ ಮಾಧ್ಯಮವನ್ನಾಗಿ ಮಾಡಿಕೊಂಡು ಜೀವನದಲ್ಲಿ ಅರ್ಥ ಹಾಗೂ ಮೌಲ್ಯಗಳನ್ನು ಹುಡುಕುವ ಪ್ರಯತ್ನ ಮಾಡಿದರು. ತಮ್ಮ ಜೀವಾನುಭವ ವಿಷಯವನ್ನು ಹಂತ ಹಂತಗಳಲ್ಲಿ ಬಿಡಿಸಿ ನೋಡಿದರು. ಜೀವನದ ಸಂಕೀರ್ಣತೆಯನ್ನು

ಸರಳಗೊಳಿಸದೆ, ಅನುಭವಕ್ಕೆ ಭಾಷೆಯಲ್ಲಿ ಒಂದು ರೂಪ ಕೊಡುವ ಪ್ರಯತ್ನ ಮಾಡಿದರು.

ನವ್ಯ ಸಾಹಿತ್ಯ ಪ್ರಕಾರದಲ್ಲಿ ಅನೇಕರು ಸಾಹಿತ್ಯ ಕೃಷಿಯಲ್ಲಿ ತೊಡಗಿ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದರು. ಗೋಪಾಲಕೃಷ್ಣ ಅಡಿಗ, ರಾಮಚಂದ್ರಶರ್ಮ, ನಿಸಾರ್ ಅಹಮದ್, ವಿ.ಜಿ. ಭಟ್ಟ, ಎ.ಕೆ. ರಾಮಾನುಜನ್, ಲಂಕೇಶ್, ತೇಜಸ್ವಿ ಚಂದ್ರಶೇಖರ ಕಂಬಾರ, ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಯಶವಂತ ಚಿತ್ತಾಲ, ಅನಂತಮೂರ್ತಿ, ಶಾಂತಿನಾಥ ದೇಸಾಯಿ ಮುಂತಾದವರು. ವರಕವಿ ಬೇಂದ್ರೆಯವರು ಕೂಡ ನವ್ಯದ ಪ್ರಭಾವಕ್ಕೆ ಒಳಗಾದರು. ಶಿವರುದ್ರಪ್ಪ, ಚನ್ನವೀರಕಣವಿ, ಇವರುಗಳು ನವ್ಯದ ಉತ್ತಮ ಅಂಶಗಳನ್ನು ಬೆಳೆಸಿಕೊಂಡರು. ಇದೇ ಸಮಯದಲ್ಲಿ ಅಸಂಗತ ನಾಟಕವೂ ಬಳಕೆಯಾಯಿತು. ಲಂಕೇಶ ಚಂಪಾ ಮೊದಲಾದವರು ಈ ಪ್ರಕಾರದಲ್ಲಿ ಗಮನಾರ್ಹ ಕೃತಿಗಳನ್ನು ನೀಡಿದರು.

ನವ್ಯಕಾಲಘಟ್ಟದ ಪ್ರಮುಖ ಕಾದಂಬರಿಗಳು

ಶಾಂತಿನಾಥ ದೇಸಾಯಿಯವರ **ಮುಕ್ತಿ** ಕಾದಂಬರಿಯನ್ನು ಪ್ರಥಮ ನವ್ಯ ಕಾದಂಬರಿ ಎಂದು ಹೇಳಲಾಗಿದೆ.[1] ತಂತ್ರದ ದೃಷ್ಟಿಯಿಂದ **ಮುಕ್ತಿ** ಕಾದಂಬರಿಯಲ್ಲಿ ನಾವೀನ್ಯತೆ ಎದ್ದು ಕಾಣುತ್ತದೆ. ಗತಕಾಲದ ವಿಷಯವನ್ನು ತನ್ನ ತಿಳಿವಳಿಕೆಯಲ್ಲಿಟ್ಟುಕೊಂಡು ವರ್ತಮಾನವನ್ನೂ ಹುಡುಕುವ ಗೌರೀಶನ ಉದ್ದೇಶಕ್ಕೆ ಕಾಲದ ಗತಿಯನ್ನು ಹೊಸ ತಂತ್ರವನ್ನು ಕಾದಂಬರಿಕಾರರು ಸಮರ್ಥವಾಗಿ ಬಳಸಿಕೊಂಡಿದ್ದಾರೆ.

'ಮುಕ್ತಿ' ನಾಯಕ ಗೌರೀಶನ ಆತ್ಮಕಥೆ. ತನ್ನ ಮುಖ್ಯ ಉದ್ದೇಶ ಎಲ್ಲ ಸಂಬಂಧಗಳಿಂದ ಬಿಡುಗಡೆ ಹೊಂದಿ ದೇಶ ಭ್ರಷ್ಟನಾಗಿ ನೈರೋಬಿಗೆ ಹೊರಡುವ ಮೊದಲು ತನ್ನ ಗತಕಾಲದ ಜೀವನಕ್ಕೆ ಒಂದು ಆಕಾರ ಕೊಡುವುದು. ಹೊಸ ಮೌಲ್ಯಗಳ ಬೆಳಕಿನಲ್ಲಿ ತನ್ನ ಬಾಳನ್ನು ರೂಪಿಸಬಯಸುವ ಅವನಿಗೆ ಗತ ಜೀವನವನ್ನೂ ಅರ್ಥ ಮಾಡಿಕೊಳ್ಳುವುದು ತುಂಬ ಮಹತ್ವದ್ದು. ಈ ಕಾದಂಬರಿಯಲ್ಲಿ ಅತ್ಯಂತ

ಸಂಕೀರ್ಣ ಸಂಬಂಧ ಗೌರೀಶ-ಶ್ರೀಕಾಂತರದ್ದು. ಗೌರೀಶನಿಗೆ ಸತ್ಯೇಂದ್ರನ ಮೂಲಕ ಶ್ರೀಕಾಂತನ ಪರಿಚಯವಾಗುತ್ತದ. ಪ್ರಥಮ ಭೇಟಿಯಲ್ಲಿಯೇ ಶ್ರೀಕಾಂತನ ವ್ಯಕ್ತಿತ್ವ ಅವನನ್ನೂ ಬಲವಾಗಿ ಆಕರ್ಷಿಸುತ್ತದೆ. ನಂತರದ ದಿನಗಳಲ್ಲಿ ಗೌರೀಶನ ಮನಸ್ಸು ಶ್ರೀಕಾಂತನ ತಂಗಿಯಾದ ಕಾಮಿನಿಯತ್ತ ಹರಿಯುತ್ತದೆ. ಕಾಮಿನಿಯದು ತೀರಾ ಸ್ಥೈರ್ಯ ವೃತ್ತಿಯ ಸ್ವಭಾವ. ಈ ಕಾರಣದಿಂದ ಗೌರೀಶನ ಜೀವನದಲ್ಲಿ ದುರಂತ ಸಮಸ್ಯೆಯೊಂದು ಹುಟ್ಟಿಕೊಳ್ಳುತ್ತದೆ. ಈ ಸಮಸ್ಯೆ ಅವನನ್ನು ನೋಯಿಸುತ್ತಿರುವಾಗಲೇ ಶ್ರೀಕಾಂತ ಟಿ.ಬಿ. ಖಾಯಿಲೆಗೆ ಬಿದ್ದು ಸತ್ತುಹೋಗುತ್ತಾನೆ. ಇದರಿಂದ ಗೌರೀಶ ಎಲ್ಲವನ್ನೂ ಮರೆಯುವುದಕ್ಕೆ ಮುಂಬಯಿಗೆ ಬರುತ್ತಾನೆ. ಇಲ್ಲಿ ಎಲ್ಲರಿಂದಲೂ ಮುಕ್ತಿಹೊಂದಲು ಅಲ್ಪತನದ ಅರಿವಿನೊಂದಿಗೆ ನೆಮ್ಮದಿ ಜೀವನವನ್ನು ಮಾಡುತ್ತಾನೆ.

'ವಿಕ್ಷೇಪ' ಶಾಂತಿನಾಥ ದೇಸಾಯಿಯವರ ಎರಡನೆಯ ಕಾದಂಬರಿ. ವಸ್ತು ಹಾಗೂ ತಂತ್ರಗಳ ದೃಷ್ಟಿಯಿಂದ ಮುಕ್ತಿಗಿಂತ ಭಿನ್ನವಾದುದು. ನಾಯಕ ರಾಹುಲ ತನ್ನತನವನ್ನು ಉಳಿಸಿಕೊಳ್ಳಲು ಹೋರಾಟ ನಡೆಸಿದವನು. ರಾಹುಲನಿಗೆ ತನ್ನ ಸ್ವರೂಪದ ಬಗ್ಗೆ ಸ್ಪಷ್ಟ ಅರಿವಿದೆ. ಬುದ್ಧಿಮತ್ತೆ, ಸೌಂದರ್ಯ, ತನ್ನ ವ್ಯಕ್ತಿತ್ವ ಮುಂತಾದವುಗಳ ಬಗ್ಗೆ ಅವನಲ್ಲಿ ಅಹಂಕಾರವಿದೆ. ಈ ಕಾದಂಬರಿಯ ಪ್ರಮುಖ ಪಾತ್ರಗಳೆಂದರೆ, ಮಾಧವಿ, ವೈದೇಹಿ, ಮೊದಲಾದವರೊಡನೆ ಕೂಡಿ ಬೆಳೆಯುತ್ತದೆ. ತಾಯಿಯಿಲ್ಲದ ಯುವಕ ಎಲ್ಲಿಯೂ ಸಂತೋಷ, ಸಮಾಧಾನವನ್ನು ಕಾಣುವುದಿಲ್ಲ. ಶ್ರೀಮಂತ ಕನ್ಯೆ ಮಾಧವಿಯನ್ನೂ ಮದುವೆಯಾಗಲು ಇಷ್ಟಪಡುತ್ತಾನೆ. ಕಾರಣಾಂತರಗಳಿಂದ ಸಾಕು ತಾಯಿ ಆರಿಸಿದ ಹುಡುಗಿಯೆನ್ನೇ ಮದುವೆಯಾಗುತ್ತಾನೆ. ಚಂಚಲ ಪ್ರವೃತ್ತಿ ರಾಹುಲನ ಪ್ರಕೃತಿಯಾಗಿದೆ. ಮುಕ್ತಿಯ ಕತೆಗೆ ಒಂದು ಮುಕ್ತಾಯವಿದೆ. ಆದರೆ, ವಿಕ್ಷೇಪ ಕಾದಂಬರಿಗೆ ಮುಕ್ತಾಯವೇ ಇಲ್ಲ ಎನಿಸುತ್ತದೆ.

ಯಶವಂತ ಚಿತ್ತಾಲರ ಮೂರು ದಾರಿಗಳು ಕಾದಂಬರಿ ನವ್ಯ ಕಾಲದ ಪ್ರಾರಂಭದಲ್ಲಿಯೇ ರಚಿತವಾಯಿತು. ಈ ಕಾದಂಬರಿಯ ಪ್ರಮುಖ ಪಾತ್ರ ನಿರ್ಮಲ. ಮೂರು ದಾರಿಗಳು ಕಾದಂಬರಿಯಲ್ಲಿ ಬರುವ ಕತೆ ಭಾರತದ ಯಾವುದೇ ಹಳ್ಳಿಯಲ್ಲಿ ನಡೆಯಬಹುದಾದ ವಿಷಯವಾಗಿದೆ. ನಿರ್ಮಲೆ ಕಾರವಾರದ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಳೆ. ಅದೇ ಊರಿನ ಫೋಟೋಗ್ರಾಫರ್ ರಂಗಪ್ಪನೊಡನೆ ಅವಳಿಗೆ ಸಂಬಂಧವಿದೆ ಎಂಬ ಗಾಳಿ ಮಾತು ತೇಲಿ ಬರುತ್ತದೆ. ಈ ಸುದ್ದಿ ತಿಳಿದಾಗ

ವಿಶ್ವನಾಥ ಹೆದರಿಕೊಳ್ಳುತ್ತಾನೆ. ಕೊನೆಗೆ ವಾಸುದೇವನೆಂಬ ಶಿಕ್ಷಕನೊಡನೆ ಮದುವೆಯಾಗುತ್ತದೆ. ನಂತರ ವಾಸ್ತವದಲ್ಲಿ ನಿರ್ಮಲೆ ಹಾಗೂ ರಂಗಪ್ಪನವರ ಸಂಬಂಧ ಕಳವಳಕ್ಕೆ ಕಾರಣವಿರುವಂಥದ್ದೇನು ಆಗಿರುವುದಿಲ್ಲ. ತಂದೆಯ ತಪ್ಪು ನಿರ್ಣಯದಿಂದ ರೊಚ್ಚಿಗೇಳುತ್ತಾಳೆ. ಕೊನೆಗೆ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾಳೆ. ಭೀತಿ, ಪ್ರೀತಿ, ಬಂಡಾಯ ಈ ಮೂರು ದಾರಿಗಳ ಸಂಘರ್ಷದಲ್ಲಿ ಕಾದಂಬರಿ ಕೊನೆಗೊಳ್ಳುತ್ತದೆ. ಯಾವುದೇ ಅಬ್ಬರವಿಲ್ಲದ ಕಲಾತ್ಮಕ ಕೃತಿ ಇದಾಗಿದೆ.

ಇವರ ಮತ್ತೊಂದು ಕಾದಂಬರಿ **ಶಿಕಾರಿ**. ಸುಮಾರು ೧೪ ವರ್ಷಗಳ ನಂತರ ಪ್ರಕಟವಾಯಿತು. ಚಿತ್ತಾರ ಮೊದಲ ಕಾದಂಬರಿಯ ಕೇಂದ್ರ ಬಿಂದು ದಾರಿಯಾದರೆ, ಶಿಕಾರಿ ಕೇಂದ್ರದ ಬಿಂದು ಬೇಟೆಯಾಗಿದೆ. ಬೇಟೆ ಕಾದಂಬರಿಯ ಉದ್ದಕ್ಕೂ ಅನೇಕ ಸಂದರ್ಭಗಳಲ್ಲಿ ಕಾಣಿಸಿಕೊಳ್ಳುತ್ತದೆ. ಆಹಾರಕ್ಕೆ ಸಂಬಂಧಿಸಿದಂತೆ ಬೇಟೆ ಮನುಷ್ಯನಿಂದ ಮನುಷ್ಯನ ಬೇಟೆ ಇದಾಗಿದೆ. ಶಿಕಾರಿಯ ಕೇಂದ್ರ ವ್ಯಕ್ತಿ ನಾಗಪ್ಪ. ಸ್ವ ಹಿತಾಸಕ್ತಿಗಳಿಂದ ಒಂದಾದ ಬೇಟೆಗಾರರ ತಂಡವೇ ಅವನ ಬೆನ್ನಹತ್ತುತ್ತದೆ. ಅಷ್ಟೇ ಅಲ್ಲದೆ, ಅವನ ವ್ಯಕ್ತಿತ್ವ ನಾಶಕ್ಕಾಗಿ ಹೊಂಚು ಹಾಕುತ್ತದೆ. ಹಲವಾರು ಮೂಲಭೂತ ಪ್ರಶ್ನೆಗಳನ್ನು ಎತ್ತುವುದರ ಮೂಲಕ ಶಿಕಾರಿ ಇಂದಿಗೂ ಪ್ರಸ್ತುತ ಕೃತಿಯಾಗುತ್ತದೆ.

ನಾಗಪ್ಪನ ಜೀವನದಲ್ಲಿಯ ಅತ್ಯಂತ ಬಿಕ್ಕಟ್ಟಿನ ಸತ್ವ ಪರೀಕ್ಷೆಯ ಸನ್ನಿವೇಶದೊಂದಿಗೆ ಕಾದಂಬರಿ ಪ್ರಾರಂಭವಾಗುತ್ತದೆ. ಗಂಭೀರ ಆಪಾದನೆಯ ಕಾರಣ ನಾಗಪ್ಪನನ್ನು ಕೆಲಸದಿಂದ ಅಮಾನತು ಮಾಡಬೇಕಾಗಿ ಬಂದಿದೆ. ಯಾಕೆ ಎನ್ನುವುದನ್ನು ಬೇಗ ತಿಳಿಸುತ್ತೇವೆ. ಅಲ್ಲಿಯವರೆಗೂ ಆಫೀಸ್ಸಿಗೆ ಬರಬಾರದು ಎಂದು ಆದೇಶವಾಗುತ್ತದೆ. ಈ ಆದೇಶ ಬಂದ ಹದಿಮೂರನೆಯ ದಿನ ಹೋಟೆಲ್‌ವೊಂದರಲ್ಲಿ ನಾಗಪ್ಪನ ಆಪಾದನೆಯ ವಿಚಾರವಾಗಿ ತನಿಖೆ ನಡೆಯುತ್ತದೆ. ತನಿಖೆಯ ವೇಳೆಯಲ್ಲಿ ಸುಳ್ಳು ವರದಿಯೊಂದಕ್ಕೆ ಸಹಿ ಹಾಕಲು ನಾಗಪ್ಪ ನಿರಾಕರಿಸಿ ತನ್ನ ಕೆಲಸಕ್ಕೆ ರಾಜೀನಾಮೆ ನೀಡುತ್ತಾನೆ. ನಾಗಪ್ಪನ ಶಿಕಾರಿ ಇಬ್ಬರಿಂದ ನಡೆಯುತ್ತದೆ. ಫಿರೋಜ ಬಂದೂಕವಾಲಾ ಹಾಗೂ ಶ್ರೀನಿವಾಸ. ಇವರ ದ್ವೇಷದ ಕಾರಣಗಳು ಬೇರೆ ಬೇರೆಯಾಗಿದ್ದರೂ, ತಮ್ಮ ಸಾಧನೆಗಾಗಿ ಅವರು ಒಟ್ಟಿಗೆಯೇ ಕೆಲಸ ಮಾಡುತ್ತಾರೆ.

ಶಿಕಾರಿ ಕನ್ನಡದ ಮಟ್ಟಿಗೆ ತೀರ ಹೊಸ ವಸ್ತುವನ್ನು ಆಯ್ದುಕೊಂಡಿದೆ. ಚಿತ್ತಾಲರು ಹೊಸ ವಸ್ತುವನ್ನು ಸಮರ್ಥವಾಗಿಯೇ ನಿರ್ವಹಿಸಿದ್ದಾರೆ. ಸ್ವಗತ-ಸಂಭಾಷಣೆಗಳ ಘಟನೆಗಳ ಮೂಲಕ ಅವನ ಮನಸ್ಸಿನ ಒಳಪದರುಗಳನ್ನು ಬಿಚ್ಚಿ ತೋರಿಸುವಲ್ಲಿ ಚಿತ್ತಾಲರ ಪ್ರತಿಭೆ ಅದ್ಭುತವಾಗಿ ಮೂಡಿ ಬಂದಿದೆ. ವ್ಯಕ್ತಿ ಹಾಗೂ ಸಮಾಜಗಳ ನಡುವಿನ ಬೇಧ ಮೂರು ದಾರಿಗಳಿಗಿಂತ ಶಿಕಾರಿಯಲ್ಲಿ ಹೆಚ್ಚು ಅರ್ಥಪೂರ್ಣವಾಗಿ ಬಂದಿದೆ.

೧೯೭೫ರಲ್ಲಿ ಪ್ರಕಟವಾದ ರಾವ್‌ಬಹದ್ದೂರರ ಗ್ರಾಮಾಯಣ ಕನ್ನಡದ ಉತ್ತಮ ಕಾದಂಬರಿಗಳಲ್ಲಿ ಒಂದು. ಅವರ ಪ್ರಥಮ ಹಾಗೂ ಶ್ರೇಷ್ಠ ಕಾದಂಬರಿ ಹೆಸರೇ ಸೂಚಿಸುವಂತೆ **ಗ್ರಾಮಾಯಣ**. ಒಂದು ಎಪಿಕ್. ಎಲ್ಲ ಎಪಿಕ್‌ಗಳಿರುವಂತೆ ಇಲ್ಲೂ ಜನರ ಜೀವನದಲ್ಲಿ ನಡೆಯುವ ಐತಿಹಾಸಿಕ ಸಂಕ್ರಾಂತಿಯೇ ಕಾದಂಬರಿಯ ವಸ್ತುವಾಗಿದೆ. ಕಾದಂಬರಿಯ ಘಟನೆಗಳೆಲ್ಲ ಕೃಷ್ಣಾನದಿಯ ದಡದಲ್ಲಿರುವ ಪಾದಳ್ಳಿ ಎಂಬ ಗ್ರಾಮದಲ್ಲಿ ನಡೆಯುತ್ತದೆ. ಘಟನೆಗಳೆಲ್ಲವೂ ಹತ್ತೊಂಭತ್ತನೆಯ ಶತಮಾನದ ಕೊನೆಯ ವರ್ಷಗಳಲ್ಲೊಂದರ ಒಂಭತ್ತು ತಿಂಗಳುಗಳ ಕಾಲಾವಧಿಯಲ್ಲಿ ನಡೆದುಹೋಗುತ್ತದೆ. ಈ ಕಾದಂಬರಿಯಲ್ಲಿ ಎಪ್ಪತ್ತೊಂಭತ್ತು ಪಾತ್ರಗಳಿವೆ. ಪ್ರತಿ ಪಾತ್ರಕ್ಕೆ ಕ್ರಿಯೆಯ ಬೆಳವಣಿಗೆಯಲ್ಲಿ ಭಾಗವಿದೆ. ಸಂಕುಚಿತ ವಿಶ್ವದ ಮೂಲಕ ಇಡೀ ಒಂದು ಜೀವನಕ್ರಮದ ವಿಘಟನೆಗೆ ಕಾರಣಗಳಾದ ಸಾಮಾಜಿಕ ಹಾಗೂ ಐತಿಹಾಸಿಕ ಶಕ್ತಿಗಳನ್ನು ತೋರಿಸುವುದು ಕಾದಂಬರಿಕಾರರ ಉದ್ದೇಶವಾಗಿದೆ. ಈ ಕಾದಂಬರಿಯಲ್ಲಿ ನಾಯಕನೂ ಇಲ್ಲ, ನಾಯಕಿಯೂ ಇಲ್ಲ. ಪಾದಳ್ಳಿಯ ಜನಸಮೂಹವೇ ನಾಯಕನ ಸ್ಥಾನವನ್ನು ತುಂಬಿದೆ.

ಕಾದಂಬರಿ ಪ್ರಾರಂಭದಲ್ಲಿಯೇ ಪಾದಳ್ಳಿಯ ವಿಘಟನೆಗೆ ಬಲವಾದ ಸೂಚನೆಗಳು ಕಂಡುಬರುತ್ತದೆ. ಊರನ್ನು ತಂದೆಯಂತೆ ನಡೆಸಿಕೊಂಡು ಹೋಗುತ್ತಿದ್ದ ರಾಣೋಜಿರಾಯನ ಮರಣದ ನಂತರ ಲಕ್ಷ್ಮೀಬಾಯಿ, ಚಿಕ್ಕಹೆಂಡತಿ ಪುತಳಾಬಾಯಿ ಮತ್ತು ಅವಳ ತಮ್ಮ ಬಾಪೂಸಾಹೇಬರ ಕಿರುಕುಳ ತಾಳಲಾರದೆ ಇಂದುಪುರಕ್ಕೆ ಓಡಿಹೋಗುತ್ತಾಳೆ. ಅಧಿಕಾರಕ್ಕಾಗಿ ಶಂಕರಪ್ಪ ಹಾಗೂ ಶೇಷಪ್ಪರಲ್ಲಿ ಪೈಪೋಟಿ ನಡೆಯುತ್ತದೆ. ಶಂಕರಪ್ಪ ಮಠದಲ್ಲಿ ತಂದಿರಿಸಿದ ಸ್ವಾಮಿ ಪಡದಯ್ಯ ಅವನ ವಿರುದ್ಧವೇ ಸಂಚು ಹೂಡುತ್ತಾನೆ. ಅವನು ಮಠದಲ್ಲಿಯೇ ಅನಾಚಾರಕ್ಕೆ ಇಳಿಯುತ್ತಾನೆ.

ಬಾಳಾಚಾರ್ಯನಿಗೆ ಹಣದ ಆಸೆ ಇಲ್ಲವಾದರೂ ಪ್ರತಿಷ್ಠೆ ಬೇಕು. ಇದಕ್ಕಾಗಿ ಅವನು ಕೆಲವು ಹೊಂದಾಣಿಕೆಗಳಿಗೂ ಸಿದ್ಧನಾಗುತ್ತಾನೆ. ಪಡದಯ್ಯ ಹಾಗೂ ಬಾಪು ಸಾಹೇಬ ಇಬ್ಬರೂ ಸ್ವಾರ್ಥಿಗಳು ಹಾಗೂ ಸಮಯಸಾಧಕರು. ದಾದಾನ ನಿಸ್ವಾರ್ಥತೆ ಹಾಗೂ ನಿರ್ವೀಯತೆಯನ್ನು ಕಾಣಬಹುದು. ಸ್ವಾರ್ಥ ಹಾಗೂ ಮೂರ್ಖತನ ಇವು ಹಳ್ಳಿಯ ಜೀವನದ ಸುತ್ತ ವಿನಾಶದ ಬಲೆಯನ್ನೇ ನೇಯುತ್ತದೆ.

ಪಿ. ಲಂಕೇಶ್ ಜೀವನದ ವಿವಿಧ ಕ್ಷೇತ್ರಗಳಲ್ಲಿ ಲವಲವಿಕೆಯಿಂದ ತೊಡಗಿಸಿಕೊಂಡವರು. ಶಿಕ್ಷಣ, ಪತ್ರಿಕೋದ್ಯಮ, ಸಿನಿಮಾ, ಬೇಸಾಯ, ರಾಜಕೀಯ - ಮುಂತಾದ ಕ್ಷೇತ್ರಗಳಲ್ಲಿ ಅವರ ದುಡಿಮೆ ಇದೆ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಲಂಕೇಶರು ಮೂರು ಕಾದಂಬರಿಗಳನ್ನು ಬರೆದಿದ್ದಾರೆ. **ಬಿರುಕು** ಅವರ ಮೊದಲ ಕಾದಂಬರಿಯಾಗಿದೆ. ಅಮೆರಿಕಾದ ಕಾದಂಬರಿಕಾರ ಸ್ಯಾಲಿಂಗರ್‌ನ **ಕ್ಯಾಚರ್ಸ್** ಇನ್‌ದಿ ರೈ ನ ಪ್ರಭಾವ ಈ ಕಾದಂಬರಿಯ ಮೇಲಾಗಿದೆ.[3] ಕಾದಂಬರಿಯ ನಾಯಕ ಬಸವರಾಜ ದುರ್ಬಲ ನಾಯಕ. ಸುಳ್ಳು, ಹೊಗಳಿಕೆ, ಪಲಾಯನ ಎಲ್ಲವನ್ನೂ ಬಳಸುತ್ತಾನೆ. ಬಸವರಾಜ ವಾಸ್ತವ ಲೋಕದಿಂದ ಭ್ರಮೆಯ ಲೋಕಕ್ಕೆ ಜಿಗಿಯುತ್ತಾನೆ. ನಾಯಕ ತನ್ನ ಮೇಲೆಯೇ ಲೈಂಗಿಕ ಆಕ್ರಮಣ ಮಾಡಿದಾಗ ಅವನು ಭ್ರಮಾಲೋಕದ ವಾಸವೂ ಕೊನೆಗೊಳ್ಳುತ್ತದೆ. ಬಿರುಕು ಕಾದಂಬರಿ ಯಶಸ್ವಿ ಎನ್ನುವುದಕ್ಕಿಂತ ಬಹು ಸ್ವಾರಸ್ಯವಾದ ಪ್ರಯೋಗ ಎನ್ನಬಹುದಾಗಿದೆ.

ನವ್ಯಕಾಲಘಟ್ಟದ ಪ್ರಮುಖ ಕಾದಂಬರಿಕಾರರಲ್ಲಿ ಅನಂತಮೂರ್ತಿ ಒಬ್ಬರು. ಸಾಹಿತ್ಯ ಮತ್ತು ಪ್ರತಿಭಟನೆ ಇವುಗಳ ಸಂಬಂಧವನ್ನೂ ವಿವೇಚಿಸುತ್ತ "ನಿಜವಾದ ಲೇಖಕ ವಾಸ್ತವ ಹಾಗೂ ಆದರ್ಶಗಳ ಡಯಲೆಕ್ಟಿಕ್‌ನ್ನು ಒಟ್ಟಿಗೆ ಗ್ರಹಿಸಿದಾಗ ಮಾತ್ರ ಅದು ನಿಜವಾದ ಸಾಹಿತ್ಯವಾಗಬಲ್ಲದು" ಎಂದು ಹೇಳಿದ್ದಾರೆ. ಈ ಮಾತು ಎಲ್ಲ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ೧೯೬೫ರಲ್ಲಿ ಸಂಸ್ಕಾರ ಪ್ರಕಟವಾಯಿತು. ಸಂಸ್ಕಾರದ ಕೇಂದ್ರ ಪಾತ್ರ ಪ್ರಾಣೇಶಾಚಾರ್ಯರು. ಧರ್ಮಶಾಸ್ತ್ರಗಳನ್ನೆಲ್ಲ ಬಲ್ಲವರಾದ ಪ್ರಾಣೇಶಾಚಾರ್ಯರು ಕಾಯಿಲೆಯಲ್ಲಿ ಬಿದ್ದ ಹೆಂಡತಿಯನ್ನು ಆರೈಕೆ ಮಾಡುತ್ತಾರೆ. ಸಂಪ್ರದಾಯ, ಮೌಲ್ಯಯುತವಾಗಿ ಜೀವನ ಮಾಡುವ ಪ್ರಾಣೇಶಾಚಾರ್ಯರಿಗೆ ನಾರಣಪ್ಪ ಪ್ರತಿಸ್ಪರ್ಧಿಯಾಗಿದ್ದಾನೆ. ಅಗ್ರಹಾರದಲ್ಲಿ ಸತ್ತುಬಿದ್ದಿದ್ದ ನಾರಾಣಪ್ಪನ ಶವಸಂಸ್ಕಾರವನ್ನೂ ನಡೆಸುವುದು ಧರ್ಮಸಮ್ಮತವೋ ಅಲ್ಲವೋ ಎನ್ನುವ ಸಂದಿಗ್ಧವನ್ನು ಬಿಡಿಸುವ ಹೊಣೆ

ಹೊರಬೇಕಾಗಿ ಬಂದಿದೆ. ಶವಸಂಸ್ಕಾರ ಗೊಂದಲದಲ್ಲಿ ಪ್ರಾಣೇಶಾಚಾರ್ಯರನ್ನು ನಾರಣಪ್ಪನ ಪ್ರೇಯಸಿ ಸ್ಪರ್ಶಿಸುತ್ತಾಳೆ. ಈ ಸ್ಪರ್ಶದ ಮೂಲಕ ಪ್ರಾಣೇಶಾಚಾರ್ಯನ ಜೀವನದಲ್ಲಿ ಕ್ರಾಂತಿಯಾಗುತ್ತದೆ. ಪ್ರಾಣೇಶಾಚಾರ್ಯರು ಹೊಸ ಜೀವನದ ಅನ್ವೇಷಣೆಗೆ ಹೊರಡುತ್ತಾರೆ. ಪ್ರಾಣೇಶಚಾರ್ಯರು ಅನುಭವಿಸುವ ಅವಸ್ಥೆಗಳಿಗೆ ಪ್ರೇತತ್ವ, ರಾಕ್ಷಸತ್ವ, ಮಾನವತ್ವ, ತಾತ್ವಿಕತ್ವದ ಆಧಾರವಿದೆ. ಪ್ರೇತತ್ವದಿಂದ ರಾಕ್ಷಸತ್ವಕ್ಕೆ, ರಾಕ್ಷಸತ್ವದಿಂದ ಮಾನವತ್ವಕ್ಕೆ ಬೆಳೆಯುವುದನ್ನು ತೋರಿಸುವ ಉದ್ದೇಶವಿದೆ. ಸಂಸ್ಕಾರದಿಂದ ಸ್ವಭಾವ, ಸ್ವಭಾವದಿಂದ ಸಂಸ್ಕಾರ ಮಾರ್ಪಾಡಾಗುತ್ತಾ, ಒಂದು ತಿಳಿವಳಿಕೆಯಿಂದ ಹೊರಟು ಇನ್ನೊಂದು ತಿಳುವಳಿಕೆಯನ್ನು ತಲುಪುತ್ತದೆ.

ಕಲೆಯ ದೃಷ್ಟಿಯಿಂದ ಇದನ್ನೂ ಮೀರಿಸುವ ಕಾದಂಬರಿ ಕನ್ನಡದಲ್ಲಿ ಇಲ್ಲ ಎನ್ನಬಹುದು. ಭಾಷೆ ಕಾದಂಬರಿಯ ಜಗತ್ತನ್ನು ಸಮರ್ಥವಾಗಿ ಸೃಷ್ಟಿಸುತ್ತಾ ಹೋಗುತ್ತದೆ. ಪ್ರತಿ ಸನ್ನಿವೇಶ ಕಣ್ಣೆಗೆ ಕಟ್ಟುವುದು ಮಾತ್ರವಲ್ಲ, ಅದರ ಸಂಕೀರ್ಣತೆ, ಪಾತ್ರಗಳ ಒಳಮನಸ್ಸು ಎಲ್ಲ ಒಟ್ಟಿಗೆ ಸೃಷ್ಟಿಯಾಗುತ್ತದೆ.

ಯು.ಆರ್. ಅನಂತಮೂರ್ತಿ ಅವರ ಮತ್ತೊಂದು ಪ್ರಮುಖ ಕಾದಂಬರಿ **ಭಾರತೀಪುರ** ಸಮಕಾಲೀನವಾದ ಮುಖ್ಯವಾದ ಸಮಸ್ಯೆಯನ್ನು ಕುರಿತು ಬರೆದಿದ್ದಾರೆ. ಕಾರ್ನಾಡರ ತುಘಲಕ್ ನಾಟಕ ನೆಹರು ಯುಗದ ನಾಟಕವಾದರೆ, ಭಾರತೀಪುರ ಈ ಯುಗವನ್ನು ಪ್ರತಿನಿಧಿಸುವ ಕಾದಂಬರಿ. ಕಾದಂಬರಿಕಾರರು ವರ್ಣನೆ ನಿರೂಪಣೆಗಳಲ್ಲಿ ಪ್ರತಿಸೃಷ್ಟಿಯನ್ನು ಸಾಧಿಸಿದ್ದಾರೆ. ನವ್ಯ ಕಾದಂಬರಿಯ ದುರ್ಬಲ ನಾಯಕ ಇಲ್ಲಿ ಸ್ಪಷ್ಟವಾಗಿ ರೂಪುಗೊಂಡಿದ್ದಾನೆ. ಕಥಾನಾಯಕ ಜಗನ್ನಾಥ ಇಂಗ್ಲೆಂಡಿನಿಂದ ಹಿಂದಿರುಗಿದ ನಂತರ ಇಲ್ಲಿನ ಪ್ರಚಲಿತ ಸಮಸ್ಯೆಗಳ ಕಡೆಗೆ ಗಮನ ನೀಡಿ ಹೊಸ ಬದಲಾವಣೆಯೊಂದನ್ನು ತರಲು ಪ್ರಯತ್ನಿಸುತ್ತಾನೆ. ಹರಿಜನರ ಉದ್ಧಾರಕ್ಕೆ ಅನೇಕ ವಿಧಗಳಲ್ಲಿ ಶ್ರಮಿಸುತ್ತಾನೆ. ಕಡೆಗೆ ಕಾದಂಬರಿ ಗೊಂದಲದಲ್ಲಿ ಮುಕ್ತಾಯವಾಗುತ್ತದೆ.

ಕನ್ನಡದಲ್ಲಿ ನವ್ಯ ಪ್ರಜ್ಞೆ ಸ್ಪಷ್ಟ ಹಾಗೂ ಶುದ್ಧರೂಪದಲ್ಲಿ ಕಾಣಿಸಿಕೊಂಡುದುದು ಮುಖ್ಯವಾಗಿ ಎರಡು ಕಾದಂಬರಿಗಳಲ್ಲಿ ; ಒಂದು ಶೌರಿ ರಾಮಾನುಜನ್‌ರ ಹಳದಿಮೀನು ಹಾಗೂ ಗಿರಿಯವರ ಸ್ಥಿತಿ-ಗತಿ ಯಲ್ಲಿ. ಹಳದಿ ಮೀನು ಕನ್ನಡಕ್ಕೆ ಅನುವಾದಿಸಿರುವ ಕಾದಂಬರಿ. ಮೂಲ ಕೃತಿಗಿಂತ ಮೊದಲೇ ಅನುವಾದ

ಪ್ರಕಟವಾದುದರಿಂದ ಕನ್ನಡ ಓದುಗರಿಗೆ ಅದು ಕನ್ನಡ ಕಾದಬಂರಿಯೆಂದು ಪರಿಚಯವಾಯಿತು. ನವ್ಯತೆಯ ಪ್ರಮುಖ ಸಿದ್ಧಾಂತವಾದ Absard ಅಥವಾ ಅಸಂಗತ ತತ್ವ ಹಳದಿ ಮೀನಿನಲ್ಲಿ ಕಾಣಿಸಿಕೊಂಡಷ್ಟು ಸ್ಪಷ್ಟವಾಗಿ ಬೇರೆ ಕಾದಂಬರಿಗಳಲ್ಲಿ ಕಾಣಿಸಿಕೊಂಡಿಲ್ಲ.

ಹಳದಿ ಮೀನು ತರುಣ - ತರುಣಿಯರ ಕಥೆ. ಹಳದಿ ಮೀನಿನ ಮುಖ್ಯ ಘಟನೆ ಆತ್ಮಹತ್ಯೆ.[4] ಈ ಆತ್ಮಹತ್ಯೆಯ ತಾತ್ವಿಕ ಹಿನ್ನೆಲೆ, ಅದರಲ್ಲಿ ಕೊನೆಗಳ್ಳುವ ಜೀವನಾನುಭವ ಪದರುಗಳು, ಹಂತಗಳು ಇವೇ ಕಾದಂಬರಿಯ ಮುಖ್ಯ ವಸ್ತು. ಹಳದಿ ಮೀನಿನ ನಾಯಕ ಕನ್ನಡ ಸಾಹಿತ್ಯದಲ್ಲಿ ರೂಪುಗೊಂಡ ಮೊಟ್ಟ ಮೊದಲ ಅಸಂಗತ ನಾಯಕ. ಜೀವನದ ಅರ್ಥಗಳನ್ನು ಕಾಣುವುದು ಹೋರಾಟದಲ್ಲಿ ಹಾಗೂ ಅನಿಶ್ಚಿತತೆಯಲ್ಲಿ. ಕಥೆಯ ಸಾಮಗ್ರಿ ಮೂರು ಭಾಗಗಳಲ್ಲಿ ಕೂಡಿದೆ. ಮೂರು ಭಾಗಗಳ ನಿರೂಪಣಕ್ರಮ. ಬಂಧ ಬೇರೆ ಬೇರೆಯಾಗಿದ್ದರೂ ಒಟ್ಟಿನಲ್ಲಿ ಕೇಂದ್ರ ವ್ಯಕ್ತಿಯ ಮೇಲೆ ಪ್ರತಿಕ್ಷಣಕ್ಕೂ ಬೆಳಕು ಬೀರುತ್ತದೆ. ಈ ಕೃತಿಯ ಮೂಲ ಇಂಗ್ಲೀಷಿನಲ್ಲಿದ್ದರೂ ಕನ್ನಡದ ಸ್ವತಂತ್ರ ಕಾದಬಂರಿಯಂತೆ ಮೂಡಿ ಬಂದಿದೆ. ಭಾಷೆ ತನ್ನ ಸ್ವಾತಂತ್ರ್ಯವನ್ನು ಸತ್ವವನ್ನು ಕಳೆದುಕೊಂಡಿಲ್ಲ. ವಿಶ್ವ ಸಂವೇದನೆಯನ್ನು ಸಮರ್ಥವಾಗಿ ಪ್ರತಿಬಿಂಬಿಸುವಲ್ಲಿ ಯಶಸ್ವಿಯಾಗಿದೆ.

ನವ್ಯ ಕಾದಂಬರಿಗೆ ಹೊಸ ರೂಪ ನೀಡಿದ ಕಾದಂಬರಿಯೆಂದರೆ ೧೯೭೧ರಲ್ಲಿ ಬಂದ ಗಿರಿಯವರ ಸ್ಥಿತಿಗತಿ. ಈ ಕಾದಂಬರಿಯಲ್ಲಿ ಕಥೆ ಮುಖ್ಯವೇ ಅಲ್ಲ. ಇಲ್ಲಿ ಭೂತ-ವರ್ತಮಾನಗಳ ನಡುವೆ ಹೊಯ್ದಾಡುವ ನಾಯಕನ ದ್ವಂದ್ವವಿಲ್ಲ. ನಾಯಕನ ಅನಿಸಿಕೆ ಅನುಭವವಷ್ಟೇ ಕಾದಂಬರಿ ಕಟ್ಟಿಕೊಡುತ್ತದೆ. ಇಲ್ಲಿನ ನಾಯಕ ಆತ ಮತ್ತು ಆಕೆ. ಬೆಂಗಳೂರಿನ ಬಳಿಯ ಊರೊಂದಕ್ಕೆ ಕೆಲಸಕ್ಕೆ ಹೋಗುತ್ತಾರೆ. ಅವಳಿಗೆ ಕಾಲೇಜಿನಲ್ಲಿ ಕೆಲಸ. ಅವನಿಗೆ ಕೆಲಸಕ್ಕೆ ಸೇರಲು ಆಜ್ಞೆ ಇದೆ. ಆದರೆ, ಅಲ್ಲಿ ಕೆಲಸವೇ ಇಲ್ಲ. ಇಲ್ಲಿ ಇರಲಾಗದೆ ಹೋಗಲು ಹಾದಿಯಿಲ್ಲದೆ ತಪ್ತನಾಗುವ ಅವನ ಮನಸ್ಥಿತಿ ಕಂಡದ್ದನ್ನೆಲ್ಲ ಕಾದಂಬರಿ ಹಿಡಿದಿಟ್ಟಿದೆ. ಇದು ಅವನ ಅನುಭವ ವಿಶ್ವ. ಯಾವುದು ಮಹತ್ವ ಅನ್ನಿಸದೇ ಹೋಗುವುದು ಇಲ್ಲಿನ ನಾಯಕನ ವ್ಯಕ್ತಿತ್ವ ಬಿರುಕಿಗೆ ಕಾರಣ. ತಬ್ಬಲಿತನ, ಪರಕೀಯತೆ, ಭ್ರಷ್ಟಸಮಾಜ - ಹೀಗೆ ಬದುಕಿನ ವಿವಿಧ ಹಂತಗಳಲ್ಲಿ ಯಾವ ಅನುಭವವೂ ಅರ್ಥಪೂರ್ಣವಾಗುವುದಿಲ್ಲ.

ಗತಿಸ್ಥಿತಿ ಕಾಮೂ ಕಾಫ್ಕಾರ ದಟ್ಟನೆರಳಿನಲ್ಲಿ ಹುಟ್ಟಿಕೊಂಡಿದೆ. ಕಾಫ್ಕಾನ **ಕ್ಯಾಸಲ್** ಕಾದಂಬರಿಯನ್ನು ಎಲ್ಲ ವಿವರಗಳಲ್ಲಿ ಅನುಸರಿಸಿದೆ. ಪರಿಚಿತವಾದ ವಿಚಾರವನ್ನು ಜೀವಂತಿಸಿಕೊಂಡು, ಹೊಸತನವನ್ನು ನೀಡುವಲ್ಲಿ ಸಫಲವಾಗಿದೆ.

ಶ್ರೀ ಕೃಷ್ಣ ಆಲನಹಳ್ಳಿ ಕವಿಯಾಗಿದ್ದರೂ, ಅವರು ಮುಖ್ಯವಾಗಿ ಕಾಣುವುದು ಮೂರು ಕಾದಂಬರಿಗಳಲ್ಲಿ. ಅವರ ಕಾದಂಬರಿಗಳಲ್ಲಿ ಬೌದ್ಧಿಕ ತಿಕ್ಕಾಟಗಳಾಗಲಿ, ಚರ್ಚೆಯಾಗಲಿ, ಜಿಜ್ಞಾಸೆಯಾಗಲಿ ಕಾಣಿಸುವುದಿಲ್ಲ.[5] **ಕಾಡು ಪರಸಂಗದ ಗೆಂಡೆತಿಮ್ಮ, ಭುಜಂಗಯ್ಯನ ದಶಾವತಾರ** ಗಳಲ್ಲಿ ಹೆಚ್ಚು ಸ್ಪಷ್ಟವಾಗಿ ನೇರವಾಗಿ ಅಭಿವ್ಯಕ್ತಿ ಪಡೆದಿವೆ. ಮಗ ಕಿಟ್ಟಿ ಬೆಳೆಯುವ ಕ್ರಿಯೆಯಿಂದ ಬದುಕನ್ನು ಹೊಸದಾಗಿ ಅರ್ಥ ಮಾಡಿಕೊಳ್ಳುತ್ತಾ ಪ್ರಬುದ್ಧನಾಗುವ ರೀತಿಯಿಂದ, ಅನೇಕ ವಿವರಗಳನ್ನು ಕೂಡಿಹಾಕುತ್ತಾ ಸಾಗುತ್ತದೆ.

ಹಳ್ಳಿಯ ಸಮಾಜದ ಅವನತಿಯತ್ತ ಕಾದಂಬರಿ ಕೇಂದ್ರಿಕರಿಸುತ್ತದೆ. ಕೊಪ್ಪಲಿನ ಚಂದ್ರೇಗೌಡ, ಹೊಸೂರಿನ ಶಿವಗಂಗರ ನಡುವೆ ಹೊಲದ ವಿಷಯದಲ್ಲಿ ಅಸಾಮಾಧಾನ ಹುಟ್ಟುತ್ತದೆ. ಕೆಂಚ-ದೇವಿಯರ ಪ್ರಸಂಗದಲ್ಲಿ ಚಂದ್ರೇಗೌಡರ ನ್ಯಾಯದಾನ, ಶಿವಗಂಗನ ಮಧ್ಯ ಪ್ರವೇಶ, ಇಬ್ಬರ ನಡುವೆ ದ್ವೇಷಕ್ಕೆ ಕಾರಣವಾಗುತ್ತದೆ. ಶಿವಗಂಗ ಚಂದ್ರೇಗೌಡ ಹುಲ್ಲಿ ಬಣವೆಗೆ ಬೆಂಕಿ ಇಟ್ಟಾಗ ಎರಡು ಊರಿನ ಜನಗಳ ಮನಸ್ಸಿನಲ್ಲಿ ಅಸೂಯೆ, ದ್ವೇಷ ಬೆಳೆಯಲು ಕಾರಣವಾಗುತ್ತದೆ. ಅಲ್ಲದೆ, ಚಂದ್ರೇಗೌಡರ ಹೆಂಡತಿಯಾದ ಕಮಲಿ ಅತ್ಯಾಚಾರಕ್ಕೆ ಒಳಗಾಗುತ್ತಾಳೆ.

ಕಾದಂಬರಿ ಪ್ರಕಾರಕ್ಕೆ ಮಹಿಳೆಯರು ಅಪಾರವಾದ ಕೊಡುಗೆ ನೀಡಿದ್ದಾರೆ. ಇವರ ಬಹುತೇಕ ಕಾದಂಬರಿಗಳಲ್ಲಿ ಕಾಣುವ ಪ್ರಮುಖ ಅಂಶವೆಂದರೆ, ಕೇಂದ್ರ ವಸ್ತುವು ಇಲ್ಲದಿರುವುದು. ಹೆಚ್ಚು ಲೇಖಕಿಯರು ಕೇವಲ ಘಟನೆ ಇಲ್ಲವೆ, ಪಾತ್ರಗಳ ನಿರೂಪಣೆಯಲ್ಲಿಯೇ ಆಸಕ್ತಿ ತಳೆದಿದ್ದಾರೆ. ತ್ರಿವೇಣಿ ಗೀತಾಕುಲಕರ್ಣಿ, ಪ್ರೇಮಾಭಟ್, ಸಿ.ಎನ್. ಜಯಲಕ್ಷ್ಮಿ, ಅನುಪಮಾ ನಿರಂಜ, ಪಂಕಜ, ವೈದೇಹಿ ಸಾರಾ ಅಬೂಬಕ್ಕರ್, ಎಚ್.ಎನ್. ಪಾರ್ವತಿ, ವೀಣಾಯಲಬುರ್ಗಿ ಮುಂತಾದವರು ಅನೇಕ ಕಾದಂಬರಿ ಬರೆದಿದ್ದಾರೆ.

ಅಡಿಟಿಪ್ಪಣಿ

1. ಎಲ್.ಎಸ್. ಶೇಷಗಿರಿರಾವ್, ಹೊಸಗನ್ನಡ ಸಾಹಿತ್ಯ, ಪುಟ 200
2. ಗಿರಡ್ಡಿ ಗೋವಿಂದ ರಾಜ, ಸಮುಗ್ರ ವಿಮರ್ಶೆ, ಪುಟ -143.
3. ಎಲ್.ಎಸ್. ಶೇಷಗಿರಿರಾವ್, ಹೊಸಗನ್ನಡ ಸಾಹಿತ್ಯ, ಪುಟ 206
4. ಎಲ್.ಎಸ್. ಶೇಷಗಿರಿರಾವ್, ಹೊಸಗನ್ನಡ ಸಾಹಿತ್ಯ, ಪುಟ 211
5. ಡಾ|| ಕೆ. ವಿಜಯಶ್ರೀ, ಕನ್ನಡ ನವ್ಯ ಕಾದಂಬರಿಗಳು, ಪುಟ - 99

ತೇಜಸ್ವಿಯವರ ಕಾದಂಬರಿಗಳಲ್ಲಿ ನಿಗೂಢತೆ

ತೇಜಸ್ವಿಯವರು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟತೆಯನ್ನು ಹೊಂದಿರುವ ಲೇಖಕ ಹಾಗೂ ಕಾದಂಬರಿಕಾರರು. ಸೃಜನಶೀಲ ಮನಸ್ಸನ್ನು ಹೊಂದಿದ ತೇಜಸ್ವಿ ತಮ್ಮ ಅಭಿವ್ಯಕ್ತಿಯ ವಿಸ್ತರಣೆಗೆ ಕಾದಂಬರಿ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇವರ ಮೊದಲ ಕಾದಂಬರಿ ಸ್ವರೂಪ. ೧೯೬೬ರಲ್ಲಿ ಪ್ರಕಟವಾಯಿತು. ಈ ಕಾದಂಬರಿ, ಕಾದಂಬರಿ ಪ್ರಪಂಚದಲ್ಲಿ ಹೊಸತೊಂದು ಅಭಿವ್ಯಕ್ತಿಯ ಬಗೆಯನ್ನು ಹುಟ್ಟುಹಾಕಿತು. ಇವರ ಇತರ ಕಾದಂಬರಿಗಳೆಂದರೆ, ನಿಗೂಢ ಮನುಷ್ಯರು. ಕರ್ವಾಲೋ, ಜುಗಾರಿಕ್ರಾಸ್, ಚಿದಂಬರ ರಹಸ್ಯ ಹಾಗೂ ಇತ್ತೀಚಿನ ಮಾಯಾಲೋಕ.

1

ಸ್ವರೂಪ ನಲವತ್ನಾಲ್ಕು ಪುಟಗಳ ನೀಳ್ಗತೆಯಂತೆ ಕಾಣುವ ಕಿರು ಕಾದಂಬರಿ. ವಸ್ತುವಿನ ದೃಷ್ಟಿಯಿಂದ ಈ ಕೃತಿ ನವ್ಯ ಪರಂಪರೆಗೆ ಸೇರುತ್ತದೆ. ಸ್ವರೂಪ ಕಾದಂಬರಿಯ ನಾಯಕ ಎಂ.ಡಿ. ಶ್ರೀನಿವಾಸ ತನ್ನ ಸ್ವರೂಪವನ್ನು ಅಥವಾ ತನ್ನ ಬದುಕನ್ನ ತಾನೇ ವಿಶ್ಲೇಷಿಸುತ್ತಾ, ಮುಂದುವರಿಯುತ್ತಾನೆ. ತನ್ನಲ್ಲಿರುವ ಕೆಲ ವಿಷಯಗಳ ನಿಗೂಢತೆಗಳನ್ನೂ ತನ್ನ ಗೆಳೆಯನಾದ ಹೇಮಂತನಿಗೆ ಹೇಳುತ್ತಾನೆ. ಶ್ರೀನಿವಾಸ ತನ್ನ ಚಿಕ್ಕಪ್ಪನ ಆಸ್ತಿಗೆ ವಾರಸುದಾರನಾಗಿ ಮಲೆನಾಡಿನ ಅಂಗಡಿ ಗ್ರಾಮಕ್ಕೆ ಬರುತ್ತಾನೆ. ಬರುವ ಮುಂಚೆ ಆ ಆಸ್ತಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ತರುತ್ತಾನೆ. ಆದರೆ, ಆಸ್ತಿಯನ್ನು ಯಾರು ಒತ್ತುವರಿ ಮಾಡಿಕೊಳ್ಳದೇ ಜಮೀನು ಯಥಾಸ್ಥಿತಿಯಲ್ಲಿಯೇ ಇರುತ್ತದೆ. ಅನಂತರ ತಾನೇ ಕೃಷಿಗೆ ತೊಡಗುತ್ತಾನೆ. ನಗರದಲ್ಲಿ ವಾಸಿಸುತ್ತಿರುವ ಹೇಮಂತ, ಗೆಳೆಯರಾದ ಶ್ರೀನಿವಾಸನನ್ನು ನೋಡಲು ಅಂಗಡಿ ಗ್ರಾಮಕ್ಕೆ ಬರುತ್ತಾನೆ. ಶ್ರೀನಿವಾಸ ಪಿಹೆಚ್.ಡಿ. ಪದವಿ ಪಡೆದ ವಿದ್ಯಾವಂತನಾಗಿರುತ್ತಾನೆ.[2] ತನ್ನ ಅನುಭವಗಳನ್ನೆಲ್ಲ ಒಟ್ಟು ಹಾಕಿ ಒಂದು ವಿಕಾರ ಸ್ವರೂಪವನ್ನು ಮಾಡುತ್ತೇನೆ ಎಂದು ಶ್ರೀನಿವಾಸ ಹೇಳುತ್ತಾನೆ.

ಶ್ರೀನಿವಾಸ ಹೇಳುವ ವಿವರಗಳು ಕೇವಲ ಅವನೊಬ್ಬನಿಗೆ ಸಂಬಂಧಿಸದೆ, ಸಮಸ್ತ ಮಾನವರಿಗೆ ಸಂಬಂಧಿಸಿದ ವಿವರಗಳಂತೆ ತೋರುತ್ತವೆ. ಮನುಕುಲವನ್ನು ಆವರಿಸುವ ಮೌನದಿಂದ ಬಿಡುಗಡೆ ಪಡೆಯುವ ಪ್ರಯತ್ನದಂತೆ ಭಾಸವಾಗುತ್ತದೆ. ಶ್ರೀನಿವಾಸ ಹೇಳುತ್ತಿರುವ ಘಟನೆಗಳು ಆತನ ವೈಯಕ್ತಿಕ ಬದುಕಿನ ಭೂತಕಾಲಕ್ಕೆ ಸಂಬಂಧಿಸಿದ ಘಟನೆಗಳಾಗಿರುತ್ತವೆ. ಜಯಂತಿಯನ್ನು ಪ್ರೀತಿಸಿ, ತಂದೆ-ತಾಯಿಗಳಿಗೆ

ಹೆದರಿ ಮದುವೆಯಾಗುವ ಧೈರ್ಯ ತೋರದೆ ಅವಳಿಗೆ ದ್ರೋಹ ಮಾಡಿದೆ ಎಂಬ ಭಾವನೆಯಲ್ಲಿರುವಾಗಲೇ ಅವಳು ಬೇರೊಬ್ಬನನ್ನು ಮದುವೆಯಾಗುತ್ತಾಳೆ. ಇದರಿಂದ ಶ್ರೀನಿವಾಸದ ಸಮಸ್ಯೆ ಪರಿಹಾರವಾಗುತ್ತದೆ. ಅವಳ ಮದುವೆಯ ನಂತರವೂ ಅವನಲ್ಲಿ ಅವಳ ಬಗ್ಗೆ ಉನ್ಮಾದ, ಉದ್ವಿಗ್ನತೆ ಉಂಟಾಗುತ್ತದೆ.

ಮಲೆನಾಡಿಗೆ ಬಂದ ಶ್ರೀನಿವಾಸ ತನ್ನ ಬದುಕಿನ ಅಮುಖ್ಯ, ಅರ್ಥಹೀನ ತಾರ್ಕಿಕ ವಿವರಗಳನ್ನು ನೀಡಲು ತನ್ನ ಶಿಕಾರಿಯ ಅನುಭವವನ್ನೂ ವಿವರಿಸುತ್ತಾನೆ. ಹಂದಿಯ ಬೇಟೆಯ ಸಂದರ್ಭದಲ್ಲಿ ಹಂದಿಯೆಂಬ ಭ್ರಮೆಯಿಂದ ಮನುಷ್ಯನನ್ನೂ ಕೊಲೆ ಮಾಡಿ, ಆ ಕೊಲೆಯನ್ನು ವ್ಯವಸ್ಥಿತವಾಗಿ ಮುಚ್ಚಿ ಹಾಕುತ್ತಾನೆ. ಕೊಲೆಯ ಪಾಪಪ್ರಜ್ಞೆ ಅವನನ್ನು ಕಾಡುತ್ತಿರುವಾಗಲೇ ತಾನು ಮಾಡಿದ ಈ ಕೃತ್ಯ ತನ್ನೊಬ್ಬನದೇ ಅಲ್ಲ, ಉಳಿದವರೆಲ್ಲರ ಮೇಲೆ ಇದೆ ಎಂದು ಅನಿಸುತ್ತದೆ.

ಶ್ರೀನಿವಾಸ ಮೈಸೂರಿನಲ್ಲಿದ್ದಾಗ, ಕಾಫಿ ಕ್ಲಬ್ಬಿನಲ್ಲಿ ಕುಳಿತು ಏಕಾಕಿತನ ಹಾಗೂ ಅಭಿವ್ಯಕ್ತಿ ಮಾಧ್ಯಮದ ಭಾಷೆಯ ತೊಡಕಿನ ಪ್ರಶ್ನೆಗಳನ್ನು ಕುರಿತು ಚಿಂತಿಸುತ್ತಿರುವಾಗ ಮೌನವು ಬೆನ್ನು ಹತ್ತಿ ಬಂದಂತೆ ಭಾಸವಾಗುತ್ತದೆ. ಅದೇ ಸಮಯಕ್ಕೆ ವಿಕಾರ ರೂಪದ ಭಿಕ್ಷುಕ ಬಂದು ಇವನೆಡೆಗೆ ಕೈ ಚಾಚುತ್ತಾನೆ. ಭಿಕ್ಷುಕ ಮೂಕನಿರಬೇಕು ಎಂಬ ಅನಿಸಿಕೆಯ ಜೊತೆಗೆ ಅಪರಿಚಿತ ಭಯವೂ ಆವರಿಸುತ್ತದೆ. ಕೂಡಲೇ ಭಿಕ್ಷುಕನನ್ನೂ ಹೊಟೇಲಿನಿಂದ ಹೊರ ಹಾಕುವಂತೆ ಮಾಲೀಕನಿಗೆ ಸೂಚಿಸುತ್ತಾನೆ. ಆಗ ಭಿಕ್ಷುಕನನ್ನು ಹೊರಗೆ ಓಡಿಸುತ್ತಾರೆ. ಕಾಲಾನಂತರದಲ್ಲಿ ನಡೆದು ಹೋದ ಈ ಘಟನೆಗಳನ್ನೂ ತಾನು ಮರೆತರೂ ಈ ಮೌನ ಮಾತ್ರ ತನ್ನನ್ನು ಹಿಂಬಾಲಿಸುವ ಅಪಹಾಸ್ಯವಾಗಿ ಕಾಡುತ್ತದೆ. ಶ್ರೀನಿವಾಸನ ನಿರೂಪಣೆಯಲ್ಲಿ ಕಂಡುಬರುವ ಘಟನೆಗಳು ವ್ಯವಸ್ಥಿತವಾಗಿ ನಿರ್ವಹಿಸಿವೆ ಎಂದೆನಿಸುತ್ತದೆ. ಮೌಲ್ಯಗಳಿಲ್ಲದ ಜಗತ್ತಿನಲ್ಲಿ ನಿರ್ಣಯ ತೆಗೆದುಕೊಳ್ಳಬೇಕಾದ ಮನುಷ್ಯನ ಅಸಹಾಯಕತೆ ತಾನು ಸ್ವತಃ ಭಾಗವಹಿಸಿದ ಕರ್ಮಕ್ಕೂ ಜವಾಬ್ದಾರನಾಗಬೇಕಾದ ಅನಿವಾರ್ಯತೆ. ಈ ಅರಿವಿನಿಂದ ಹುಟ್ಟುವ ಅನಿಶ್ಚಯ ಹಾಗೂ ಗೊಂದಲಗಳಂತಹ ಮೂಲಭೂತ ಸಮಸ್ಯೆಗಳನ್ನೂ ಸ್ವರೂಪ ಕಾದಂಬರಿ ಚರ್ಚಿಸುತ್ತದೆ. ಕಾದಂಬರಿಯ ಕ್ರಮದಲ್ಲಿ ಒಂದು ವೈಚಾರಿಕ ಸುಸಂಬದ್ಧತೆ ಕಂಡು ಬರುತ್ತದೆ. ವ್ಯಕ್ತಿ ತನ್ನ ಮನಸ್ಸಿನ ಒಳಲೋಕವನ್ನು ವಿಶ್ಲೇಷಣೆಗೆ ಒಳಪಡಿಸುವ ಕ್ರಮ

ಔಚಿತ್ಯಪೂರ್ಣವಾಗಿದೆ. ಮನುಷ್ಯನ ಅಸ್ತಿತ್ವವಾದವನ್ನು ಪ್ರಜ್ಞಾಪ್ರವಾಹ ತಂತ್ರದ ಮೂಲಕ ನಿರೂಪಿಸುವ ಲೇಖಕರ ಪ್ರಯತ್ನ ಸ್ವರೂಪದಲ್ಲಿ ಯಶಸ್ವಿಯಾಗಿದೆ.

ನಿಗೂಢ ಮನುಷ್ಯರು ತನ್ನ ಹೆಸರೇ ಸೂಚಿಸುವಂತೆ ಮನುಷ್ಯ-ಮನುಷ್ಯ ಮತ್ತು ಮನುಷ್ಯ ಪ್ರಕೃತಿಗಳ ನಡುವಣ ಸಂಬಂಧದ ನಿಗೂಢತೆಯನ್ನು ಶೋಧಿಸುತ್ತದೆ. ಒಂದು ಮಾನವೀಯ ಘಟನೆಯ ಮುಖಾಂತರ ಇಡೀ ಪರಿಸ್ಥಿತಿಯ ಅಸಂಗತತೆ ಮತ್ತು ಅಸಂಬದ್ದತೆಗಳನ್ನು ಕೃತಿಯಲ್ಲಿ ಕಾಣಬಹುದು. ಅಸಂಗತತೆಯನ್ನು ಒಂದು ತತ್ವವಾಗಿ ಗ್ರಹಿಸಿದಾಗ, ಹುಟ್ಟುವ ಕಾಣ್ಕೆ ತೇಜಸ್ವಿ ಜೀವನದ ದರ್ಶನದ ಪ್ರಮುಖ ಅಂಶವಾಗಿದೆ. ಬದುಕಿನ ನಿರರ್ಥಕ, ನಿಗೂಢತೆ ಮತ್ತು ವಿಧಿಯ ದಿವ್ಯನಿರ್ಲಕ್ಷ್ಯದ ಎದುರಿನಲ್ಲಿ ತೇಜಸ್ವಿಯವರು ಮಾನವೀಯ ಘಟನೆಗಳನ್ನು ನಿರೂಪಿಸುತ್ತಾ ಹೋಗುತ್ತಾರೆ. ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ವಿದ್ಯಾಮಾನಗಳಿಗೆ ಮಿಗಿಲಾದ, ಅವುಗಳ ಆಚೆಗಿನ ಆಯಾಮಗಳನ್ನು ಗ್ರಹಿಸಲು ಸಾಧ್ಯವಾಗಿದೆ. ಅವರ ಚಿಂತನೆ ಮತ್ತು ಬರವಣಿಗೆಗಳು ತಾತ್ವಿಕತೆಯನ್ನು ಹುಟ್ಟುಹಾಕುತ್ತವೆ. ಸೃಷ್ಟಿಯ ನಿಗೂಢತೆ ಮತ್ತು ಒಂದು ಅರ್ಥ ಹಾಗೂ ವ್ಯವಸ್ಥೆಗೆ ಸುಲಭವಾಗಿ ಹೊಂದಿಸಲಾಗದ ವಿಶ್ವಾತ್ಮಕ ವ್ಯೂಹದ ಒಳಗೆ ಮನುಷ್ಯ ಚಟುವಟಿಕೆಗಳ ಇತಿ ಮಿತಿಯನ್ನು ಅರಿಯುವ ಪ್ರಯತ್ನ ಮಾಡುತ್ತಾರೆ. ಮೋಟಾರು ವಾಹನ ಕೆಟ್ಟು, ಅನಿರೀಕ್ಷಿತ, ವಿದ್ಯಾಮಾನಗಳಿಗೆ ಸಿಕ್ಕಿಕೊಂಡ ನಿರೂಪಕನು ತನ್ನ ಮನಸ್ಥಿತಿಯನ್ನು ಹೀಗೆ ಹೇಳುತ್ತಾನೆ.

'ಹೊರಗಡೆ ಮೋಡ ಕವಿದ ಒಂದು ಬಗೆಯ ವಿಚಿತ್ರವಾದ ವಾತಾವರಣ. ಭೂಮಿಯಲ್ಲ ಕುಳಿತಂತೆ ಮೆತ್ತಗಾಗಿರುವ ಕೆಸರು. ಅದರುವ ಜುಂಯ್ಯುಗುಡುವ ನೆಲ, ಮಳೆಯ ತೀವ್ರತೆಗೆ ಮನೆಯ ಎದುರೇ ಏಳುತ್ತಿರುವ ಚಿಲುಮೆ ಮತ್ತು ಒರತೆಗಳು. ವಿಶ್ವದ ಯಾವುದೋ ಒಂದು ಪ್ರಾಚೀನ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಂತೆನಿಸಿತು'.

ಒಂದು ಬಿಡಿ ಘಟನೆಯನ್ನು ಇಡೀ ಬ್ರಹ್ಮಾಂಡದ ಘಟನೆಗಳೊಂದಿಗೆ ಜೋಡಿಸುವ ಹಾಗೂ ವ್ಯಕ್ತಿ ಜೀವ ಘಟಕವನ್ನು ಇಡೀ ವಿಶ್ವಾತ್ಮಕ ವ್ಯವಸ್ಥೆಯೊಂದಿಗೆ ಸಂಶ್ಲೇಷಿಸುತ್ತಾರೆ. ಅದಕ್ಕಾಗಿ ನಿಗೂಢತೆಗಳನ್ನು ಪೇರಿಸುತ್ತಾ ಹೋಗುತ್ತಾರೆ.

ನಿಗೂಢ ಮನುಷ್ಯರು ಕಾದಂಬರಿ, ಸ್ವರೂಪ ಕಾದಂಬರಿಯಂತೆ ಕಿರು ಕಾದಂಬರಿಯಾಗಿದೆ. ಈ ಕಾದಂಬರಿಯ ವಸ್ತುವಿನ್ಯಾಸ, ಪಾತ್ರಕ್ರಿಯೆಗಳ ಮೂಲಕ ಓದುಗರಿಗೆ ವಿಶಾಲವಾದ ಅನುಭವವನ್ನೂ ಕೊಡುತ್ತವೆ. ಸ್ವರೂಪದಲ್ಲಿ ಲೇಖಕ ಮನುಷ್ಯನ ಹುಡುಕಾಟವನ್ನು ಶೋಧಿಸಿದಂತೆ, ಈ ಕಾದಂಬರಿಯಲ್ಲೂ ಮನುಷ್ಯನ ಹುಡುಕಾಟವನ್ನೇ ಕೇಂದ್ರವಾಗಿಟ್ಟುಕೊಂಡಿದ್ದಾರೆ. ಸ್ವರೂಪ ಹಾಗೂ ನಿಗೂಢ ಮನುಷ್ಯರು ಕಾದಂಬರಿಗಳ ಚಲನ ಚಿರವಾಸ್ತವದಿಂದ ಚರವಾಸ್ತವದ ಕಡೆಗೆ ಸಾಗುತ್ತದೆ.

ಜಗನ್ನಾಥ ಹಾಗೂ ಅವನ ಗೆಳೆಯ ರಂಗಪ್ಪ ಇಬ್ಬರು ಅವಿವಾಹಿತರು. ನುಗುಬೀಡಿನಿಂದ ನವಿಲುಗುಂದಿಗೆ ಕಾರಿನಲ್ಲಿ ಪ್ರಯಾಣ ಬೆಳೆಸುತ್ತಾರೆ. ಅರಣ್ಯದ ನಡುವೆ ಅನಿರೀಕ್ಷಿತ ಮಳೆ ಬಂದ ಕಾರಣವಾಗಿ ಊರಗಡಿ ಎಂಬ ಗ್ರಾಮದ ಹತ್ತಿರ ಕಾರು ಕೆಸರಿನಲ್ಲಿ ಸಿಕ್ಕಿಕೊಳ್ಳುತ್ತದೆ. ಅವರು ಮುಂದೆ ಹೋಗಲಾರದೆ, ಅನಿವಾರ್ಯ ರಾತ್ರಿಯೆಲ್ಲ ಕಾರಿನಲ್ಲಿಯೇ ಕಳೆಯುತ್ತಾರೆ. ಕಾರಿನ ಬೆಳಕಿನಲ್ಲಿ ಯಾರೋ ಮನುಷ್ಯರು ಕಂಡದ್ದರಿಂದ ಕೆಸರಿನಿಂದ ಕಾರನ್ನು ನೂಕಲು ಸಹಾಯ ಕೇಳುತ್ತಾರೆ. ಆ ಮನುಷ್ಯರು ರಾಕ್ಷಸ ಆಕಾರವನ್ನು ಹೋಲುತ್ತಿದ್ದು, ಗೋಪಾಲಯ್ಯನ ತೋಟದಲ್ಲಿ ಕೆಲಸ ಮಾಡುವ ಜನರಾಗಿರುತ್ತಾರೆ. ಜಗನ್ನಾಥ-ರಂಗಪ್ಪರ ಕಾರು ಕೆಸರಿನಲ್ಲಿ ಹೂತು ಹೋಗಿದ್ದರಿಂದ ಅದನ್ನು ಎತ್ತಲಾಗದೆ ತೊಂದರೆಗೆ ಸಿಲುಕಿಕೊಳ್ಳುತ್ತಾರೆ. ಗೋಪಾಲಯ್ಯನನ್ನು ಬೇಟಿ ಮಾಡಿದ ನಂತರ ಅವನ ವ್ಯವಹಾರವೆಲ್ಲರೂ ಜಗನ್ನಾಥ ಹಾಗೂ ರಂಗಪ್ಪನವರಿಗೆ ನಿಗೂಢವಾಗಿ ಕಾಣುತ್ತದೆ. ಜಗನ್ನಾಥ ಹಾಗೂ ಗೋಪಾಲಯ್ಯ ಇವರಿಬ್ಬರೂ ತಮ್ಮ ನಿಜಸ್ವರೂಪವನ್ನು ಮರೆ ಮಾಡಿ ನಿಗೂಢವಾಗಿ ಉಳಿಯಲು ಪ್ರಯತ್ನಿಸುತ್ತಾರೆ. ರಂಗಪ್ಪ ಹಾಗೂ ಜಗನ್ನಾಥ ಬಾಲ್ಯದ ಗೆಳೆಯರಾಗಿದ್ದರೂ, ಪರಸ್ಪರರ ಬಗ್ಗೆ ಕೆಲವು ಸಂಗತಿಗಳಲ್ಲಿ ಅಪರಿಚಿತತೆ ಬರುತ್ತಿರುತ್ತದೆ. ಈ ರೀತಿಯ ವ್ಯಕ್ತಿತ್ವದ ಬಹಿರ್ಮುಖತೆಯಲ್ಲಿ ಕಾಣುವ ನಿಗೂಢತೆಯನ್ನು ತೇಜಸ್ವಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಜಗನ್ನಾಥ, ರಂಗಪ್ಪ, ಗೋಪಾಲಯ್ಯರ ನಡುವೆ ಸಂದೇಹದ ವಾತಾವರಣವಿದ್ದುದರಿಂದ ಅವರೆಲ್ಲರೂ ತಮ್ಮ ವರ್ತನೆಗಳಿಂದ ನಿಗೂಢವಾಗಿ ಕಾಣಿಸಿಕೊಳ್ಳುತ್ತಾರೆ.[1]

ಕಾಲೇಜಿನಲ್ಲಿ ಉಪನ್ಯಾಸಕನಾಗಿ ಸೇವೆ ಸಲ್ಲಿಸುತ್ತಿರುವ ಜಗನ್ನಾಥ ಸಾಹಿತ್ಯಿಕ ಬರವಣಿಗೆಯಲ್ಲಿ ತೊಡಗಿಕೊಂಡಿರುತ್ತಾನೆ. ಅವನಿಗೆ ವ್ಯವಸಾಯ ಮಾಡಬೇಕೆಂಬ ಆಸೆಯು ಮೂಡುತ್ತದೆ.[2] ಆ ಕಾರಣದಿಂದ ರಂಗಪ್ಪ ಅವನನ್ನು ಉಗ್ರಗಿರಿಯ ಸಮೀಪದ

ಕಾಡಿನಲ್ಲಿ ಜಮೀನು ತೋರಿಸಲು ಕರೆತಂದಿರುತ್ತಾನೆ. ಆದರೆ, ಗೋಪಾಲಯ್ಯನ ಕಷ್ಟ-ನಷ್ಟ ಕಾಡಿನ ಭಯಾನಕ ಜೀವನವನ್ನು ನೋಡಿ ಜಗನ್ನಾಥನಲ್ಲಿ ಭಯ ಹಾಗೂ ಆತಂಕಗಳು ಹುಟ್ಟುತ್ತವೆ. ಗೋಪಾಲಯ್ಯನ ಗದ್ದೆ ತೋಟದಲ್ಲಿ ಕೆಲಸ ಮಾಡುತ್ತಿರುವ ಕಾಂಪ್ರ, ಲೋರಿ, ಮರಸರ ಮುಂತಾದ ಆಳುಮಕ್ಕಳ ವಿಚಿತ್ರ ಜೀವನ ಶೈಲಿ ಹಾಗೂ ಮೌನದಿಂದಿರುವ ಶಾರಿಯ ಜೀವ ಜಗನ್ನಾಥನಲ್ಲಿ ವಿಸ್ಮಯವನ್ನು ಮೂಡಿಸುತ್ತದೆ.

ಗೋಪಾಲಯ್ಯ ಮತ್ತು ಜಗನ್ನಾಥರ ನಡುವೆ ನಡೆಯುವ ಮುಖಾಮುಖಿ ಸಂವಾದದಲ್ಲಿ ಕೇವಲ ಮೂರು ದಿನಗಳ ಅವಧಿಯಲ್ಲಿ ನಡೆಯುವ ಪ್ರಾಕೃತಿಕ ಜಗತ್ತಿನ ವಿಪ್ಲವಗಳಾದ ಭೂಕಂಪ, ಬಿರುಗಾಳಿ, ಮಳೆ, ಗುಡುಗು, ಮಿಂಚಿನ ಆರ್ಭಟದ ಒತ್ತಡದಲ್ಲಿ ಒಬ್ಬರಿಗೊಬ್ಬರು ತಮ್ಮ ತಮ್ಮ ಸತ್ಯಗಳನ್ನು ಹಂಚಿಕೊಳ್ಳುತ್ತಾರೆ. ಈ ನಡುವೆ ಉಗ್ರಗಿರಿಯ ಕಾಡೊಂದು ಉರುಳಿ ಗೋಪಾಲಯ್ಯನ ತೋಟದ ಮೇಲೆ ಬೀಳುತ್ತದೆ. ಊರನ್ನು ಬಿಟ್ಟು ಹೋಗಬೇಕೆಂದುಕೊಂಡ ಗೋಪಾಲಯ್ಯ - ಹೋಗಲಾರದೆ, ಜಗನ್ನಾಥ ಮತ್ತು ರಂಗಪ್ಪರನ್ನು ಕಳುಹಿಸಿಬರಲು ಸ್ವಲ್ಪ ದೂರ ಅವರೊಡನೆ ಬರುತ್ತಾರೆ. ಹಾದಿಯಲ್ಲಿ ಶಾರಿಯ ಕತೆಯನ್ನು ಹೇಳಿ ತೋಟಕ್ಕೆ ವಾಪಸ್ಸಾಗುತ್ತಾನೆ. ಉಗ್ರಗಿರಿ ಕಾದಂಬರಿಯಲ್ಲಿ ಆದಿಯಿಂದ ಅಂತ್ಯದವರೆಗೆ ಚಿರವಾಸ್ತವದ ಸಂಕೇತವೆಂಬಂತೆ ತೋರುತ್ತದೆ. ಗೋಪಾಲಯ್ಯನಿಗೆ ಮೊದಲು ಮನೆಯ ಹಿಂದಿನ ಮೋಡಗಳ ಮಧ್ಯೆ ಇರುವ ಗಿರಿಯಂತೆ ಕಾಣಿಸಿಕೊಳ್ಳುತ್ತದೆ. ಮುಂದೆ ನಿಧಾನವಾಗಿ ಗೋಪಾಲಯ್ಯನ ಮನೆಯ ಹಿಂದಿನ ಈ ಮೋಡ ಮುಸುಕಿದ ಈ ಬೆಟ್ಟ ತನ್ನ ಸುತ್ತಮುತ್ತ ಭಯ, ಆತಂಕ, ನಿಗೂಢತೆಗಳ ವೇಷವನ್ನು ಕಟ್ಟಿಕೊಳ್ಳುತ್ತದೆ. ಗೋಪಾಲಯ್ಯನ ಮನೆಯಲ್ಲಿ ತಂಗಿದ್ದ ಜಗನ್ನಾಥನಿಗೆ ಬೆಟ್ಟ ಭಯಂಕರವಾಗಿ ಕಂಡು ಮೈ ಜುಂ ಎನಿಸುತ್ತದೆ.

ಒಂದು ದಿನ ಮಧ್ಯೆ ರಾತ್ರಿ ಜಗನ್ನಾಥ ಏಳಿ ಗಿರಿ ಎಚ್ಚೆತ್ತಿದೆ, ಕೇಳಿ ಅದು ಉಸುರುವ ಪಿಸುಮಾತು ; ಇದು ಜಗತ್ತಿನ ಕೊನೆ? ಎಲ್ಲ ಅನುಭವಗಳ ಶಿಖರಃ ಇದು ಸಾವು ಹೌದು, ಇನ್ನೂ ಬೆಳಗಾಗುವುದು ಇಲ್ಲ. ಏಳಿ ಎಚ್ಚರಾಗಿರಿ ಎಂದು ಗೋಪಾಲಯ್ಯ ಎಬ್ಬಿಸಿದಂತೆ ಅನಿಸಿದ್ದರಿಂದ ಜಗನ್ನಾಥ ಎದ್ದು ಕೂರುತ್ತಾನೆ. ಉಗ್ರಗಿರಿ ಮಾತ್ರವಲ್ಲ. ಅದರ ತಪ್ಪಲಿನಲ್ಲಿ ನೆಲಸಿರುವ ಗೋಪಾಲಯ್ಯ ಮತ್ತು ಅವನ ಪರಿವಾರದ ಬದುಕಿನ ರೀತಿ ಕೂಡ ನಿಗೂಢವಾಗಿದೆ. ಗೋಪಾಲಯ್ಯ ಹಲವು ವೇಷಗಳನ್ನು ತೊಟ್ಟು ಅನೇಕ ಹೆಸರುಗಳಿಂದ ಬದುಕಿ ಬಂದವನು.

"ಒಡೆದ ಬದುಕುಗಳನ್ನು ಬದುಕಿ ಸಾಕಾಗಿದೆ ಜಗನ್ನಾಥ! ಈ ವ್ಯಕ್ತಿತ್ವ ವಿದಳನದಲ್ಲಿ ಯಾವ ಸ್ವಾರಸ್ಯವೂ ಇಲ್ಲ. ಇನ್ನು ಬರಲಾರೆ, ಹೆಸರು ಬದಲಾಯಿಸಲಾಗಿದೆ, ಈಗ ನಾನು ಬಂದರೆ ನೆತ್ತಿಯ ಮೇಲೆ ಒಂದು ಗಿರಿ ಸದಾ ಕಾಳನಾಗರದಂತೆ ಹೆಡೆ ಎತ್ತಿಕೊಂಡಿರುತ್ತದೆ" ಎಂದು ಹೇಳುತ್ತಾನೆ.

"ಇದರಿಂದ ಉಗ್ರಗಿರಿಗೂ ಗೋಪಾಲಯ್ಯನಿಗೂ ಯಾವುದೋ ಅವಿನಾಭಾವ ಸಂದಂಭವಿರುವಂತೆ ಜಗನ್ನಾಥನಿಗೆ ತೋರುತ್ತದೆ. ಗೋಪಾಲಯ್ಯ ತನ್ನ ಅನುಭವಗಳನ್ನೂ ಹೇಳುತ್ತಾ ಅಸಂಖ್ಯಾತ ಅನುಭವಗಳು ಎದ್ದೆದ್ದು ಮುಳುಗುವ ಈ ಕಡಲ ಪ್ರಜ್ಞೆ - ನಾನೆಂದರೆ, ಇದನ್ನೆಲ್ಲಾ ಸೇರಿಸಿದ ಜ್ಞಾಪಕ, ಒಂದಕ್ಕೂ ಒಂದರ್ಥವೂ ಇಲ್ಲ, ಜಾಧವ್, ಕಾಮತ್, ನರೋನ, ರಾಯಪ್ಪ - ಹೀಗೆ ನೂರಾರು ಮಂದಿ ಆಗಿ ಹೋಗಿದ್ದಾರೆ. ಈ ದೇಹದಲ್ಲಿ ಇವರೆಲ್ಲರಿಂದ ಅರ್ಥ ಹೊರಡಿಸಬಲ್ಲ ಇನ್ನೊಬ್ಬ ಈ ದೇಹದಲ್ಲಿದ್ದಿದ್ದರೆ, ಆಗ ನನ್ನ ವ್ಯಕ್ತಿತ್ವ ನನಗೆ ಇರುತ್ತಿತ್ತು. ಈಗ ನನ್ನ ಗುರುತು ನನಗೇ ಇಲ್ಲ. ಅನುಭವದ ಆಳಕ್ಕೆ ಇಳಿಯುತ್ತಾ ಬುದ್ಧಿ ಅದರ ಅರ್ಥ ತಿಳಿಯುವ ಸಾಮರ್ಥ್ಯ ಕಳೆದುಕೊಂಡು ಬಿಡುತ್ತದೆ. ಅನುಭವ ಎಂಬುದು ನರಮಂಡಲದ ಮೇಲೆ ಹರಿದಾಡುವ ವಿದ್ಯುತ್ತಾಗಿ ಬಿಡುತ್ತದೆ" ಎನ್ನುತ್ತಾನೆ. ಒಂದು ವಾಸ್ತವ ಪರಿಧಿಯಲ್ಲಿ ಬಂಧಿಯಾಗಿರುವ ಗೋಪಾಲಯ್ಯ ಜಗನ್ನಾಥ ಮತ್ತು ರಂಗಪ್ಪ ಒಬ್ಬರಿಗೊಬ್ಬರು ನಿಗೂಢರಾಗಿದ್ದಾರೆ. ಆದರೆ, ಗೋಪಾಲಯ್ಯ ತನಗೆ ತಾನೇ ನಿಗೂಢವಾಗಿರುವುದು ಈ ಕಾದಂಬರಿಯಲ್ಲಿ ಕಂಡು ಬರುತ್ತದೆ. ಕಾದಂಬರಿಯ ಎಲ್ಲ ಪಾತ್ರಗಳ ರಹಸ್ಯಮಯವಾಗಿ ಕಾಣುವುದರಿಂದಲೇ ನಿಗೂಢತೆ ಹೆಚ್ಚು ಹೆಚ್ಚಾಗಿ ವಿಸ್ತರಿಸುತ್ತಾ ಹೋಗುತ್ತದೆ. ಕಳ್ಳ ಸಾಕಾಣಿಕೆದಾರರೊಡನೆ ಸ್ನೇಹ ಬೆಳೆಸಿಕೊಂಡಿದ್ದ ಶಾರಿ ತನಗೆ ಗೊತ್ತಿರುವ ರಹಸ್ಯಗಳನ್ನೂ ಬಯಲು ಮಾಡಿಬಿಡಬಹುದೆಂಬ ಕಾರಣದಿಂದ ಅವಳ ನಾಲಿಗೆಯನ್ನು ಕತ್ತರಿಸಿ, ದಾರಿಯಲ್ಲಿ ಎಸೆದಿದ್ದಾಗ, ಅವಳನ್ನೂ ಗೋಪಾಲಯ್ಯ ಮನೆಗೆ ತಂದು ಬದುಕಿಸುತ್ತಾನೆ. ಪೋಷಣೆ ಮಾಡುತ್ತಾನೆ. ಎಲ್ಲ ರಹಸ್ಯಗಳನ್ನೂ ತನ್ನಲ್ಲೇ ಅಡಗಿಸಿಕೊಂಡು ಮೌನವಾಗಿರುವ ಶಾರಿ ಉಗ್ರಗಿರಿಯ ಚಿರವಾಸ್ತವದ ನಿಗೂಢವನ್ನು ಧ್ವನಿಸುವ ಪ್ರತಿಮೆಯಂತೆ ತೋರುತ್ತಾಳೆ.

ತೇಜಸ್ವಿಯವರು ಗೋಪಾಲಯ್ಯ, ಶಾರಿ, ಜಗನ್ನಾಥರಂತಹ ನಿಗೂಢ ವ್ಯಕ್ತಿಗಳನ್ನು ನಿರೂಪಿಸುವುದರ ಜೊತೆಗೆ ಬೇರೆ ಬೇರೆ ಗುಣ ಸ್ವಭಾವದ ಅನಾಗರೀಕ ಜಗತ್ತಿನ ಮರಸರ ಕಾಂಪ್ರರಂತಹ ಪಾತ್ರಗಳನ್ನು ಪರಿಚಯಿಸುವುದರ ಮೂಲಕ ಕ್ಷುದ್ರ ಜಗತ್ತನ್ನು ಚಿಂತಿಸಲು ಅನುವು ಮಾಡಿಕೊಡುತ್ತಾರೆ. ಗೋಪಾಲಯ್ಯನ ಕೆಲಸದ ಆಳಾಗಿರುವ ಮರಸರನದು ವಿಚಿತ್ರ ಸ್ವಭಾವವುಳ್ಳರನು. ಶಿಲಾಯುಗದ ಆದಿಮಾನವನ ತದ್ರೂಪದಂತೆ ತೋರುವ ಇವನ ವರ್ತನೆಗಳ್ಳೂ ಕಂಡು ಜಗನ್ನಾಥನಿಗೆ ಒಂದು ರೀತಿಯ ಭಯವುಂಟಾಗುತ್ತದೆ. ಅನುಭವದ ಶೋಧಕ್ಕಾಗಿ ಕಾಡಿನ ಅಂಚಿಗೆ ಬರುವ ಜಗನ್ನಾಥ ಪಡೆಯುವ ತೀಕ್ಷ್ಣ ಸಂವೇದನೆಗಳು ಕಾದಂಬರಿಯಲ್ಲಿ ಉತ್ತಮವಾಗಿ ನಿರೂಪಿತಗೊಂಡಿವೆ.

ಕತೆಯ ಕೊನೆಯಲ್ಲಿ ಜಗನ್ನಾಥ ಮತ್ತು ರಂಗಪ್ಪ ಬದುಕಿನ ನಿಗೂಢವನ್ನು ಬೇಧಿಸಲಾಗದೆ ಇದ್ದುದ್ದನ್ನು ಇದ್ದಲ್ಲಿಯೇ ಬಿಟ್ಟು ಪಲಾಯನ ಮಾಡುವುದು ನಿಗೂಢತೆಯ ಎದುರಿಗೆ ಅನ್ವೇಷಣೆ ವಿಫಲಗೊಳ್ಳುವುದನ್ನು ಸೂಚಿಸುತ್ತದೆ. ಕಾದಂಬರಿಯಲ್ಲಿ ಕಂಡು ಬರುವ ನಿಗೂಢತೆಯ ಸಂಬಂಧಗಳು ಪ್ರಕೃತಿಯ ಅಂಶಗಳಾದ ಉಗ್ರಗಿರಿ, ಎಣ್ಣೆಹೊಳೆ, ಭೂಕಂಪ, ವ್ಯಕ್ತಿ ವ್ಯಕ್ತಿಗಳ ಮುಖಾಮುಖಿಯಲ್ಲಿ ಉಂಟಾಗುವ ಸಂಬಂಧಗಳ ಅನಾವರಣದಲ್ಲಿ ಭ್ರಾಂತಿಗಳಲ್ಲಿ ವ್ಯಕ್ತಿಗಳು ತಮಗೆ ತಾವೇ ನಿಗೂಢರಾಗಿ ಉಳಿಯುತ್ತಾರೆ. ಒಟ್ಟಿನಲ್ಲಿ ಮಾನವಲೋಕದ ನಿಗೂಢತೆ ಹಾಗೂ ಪ್ರಕೃತಿಯ ಭಯಾನಕ ನಿಗೂಢಗಳನ್ನು ಮುಖಾಮುಖಿಯಾಗಿಸಿ ಬದುಕಿನ ಅರ್ಥವನ್ನು ಪರಿಚಯಿಸುವಲ್ಲಿ ನಿಗೂಢ ಮನುಷ್ಯರು ಯಶಸ್ವಿಯಾಗಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಹೆಸರು ಪ್ರಮುಖವಾದುದು. ತಮ್ಮ ವಿಶಿಷ್ಟ ಪ್ರತಿಭೆಯ ನಿರ್ಮಿತಿಯಿಂದಾಗಿ, ಪ್ರತ್ಯೇಕತೆಯನ್ನು ಅನನ್ಯತೆಯನ್ನು ಬೆಳೆಸಿಕೊಂಡಿದ್ದಾರೆ. ಅವರ ಒಟ್ಟು ಸಾಹಿತ್ಯಿಕ ಹಾಗೂ ವೈಚಾರಿಕ ಬರವಣಿಗೆಯಲ್ಲಿ ವ್ಯಕ್ತವಾಗುವ ಅಭಿವ್ಯಕ್ತಿ ಹಾಗೂ ಧೋರಣೆ ಹೊಸತನದಿಂದ ಕೂಡಿದೆ. ತಮ್ಮ ಬರಹಗಳಲ್ಲೆಲ್ಲಾ ಅವರು ತಮ್ಮದೇ ಆದ ವಿಶಿಷ್ಟ ಸಿದ್ಧಾಂತ, ತತ್ವಗಳನ್ನು ಮಂಡಿಸಿ, ಈ ತತ್ವಗಳನ್ನು ಪರಿಶೀಲಿಸಲು ತಮ್ಮದೇ ಆದ ಸೃಜನಶೀಲ ಕತೆ, ನಾಟಕ, ಕಾದಂಬರಿಗಳನ್ನು ಪ್ರಾಯೋಗಿಕ ನೆಲೆಗಳನ್ನಾಗಿ ಮಾಡಿಕೊಂಡಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದ ನವ್ಯಸಂದರ್ಭದಲ್ಲಿ ತೇಜಸ್ವಿಯವರು ಸಾಹಿತ್ಯ ಕೃಷಿಯಲ್ಲಿ ತೊಡಗಿದರು. ಬಹು ಬೇಗನೆ ಕತೆಗಾರರಾಗಿ, ಕಾದಂಬರಿಕಾರರಾಗಿ, ಕನ್ನಡ ಓದುಗರ ಹಾಗೂ ಚಿಂತಕರ ಗಮನ ಸೆಳೆದರು. ಗ್ರಾಮೀಣ ಪ್ರದೇಶದ ಅನುಭವವನ್ನು ಪಡೆಯುತ್ತಾ, ಪ್ರಕೃತಿ ಮತ್ತು ಪರಿಸರದೊಂದಿಗೆ ಬದುಕು ಮಾಡುತ್ತಾ, ವಿಶಿಷ್ಟ ಅನುಭವಗಳನ್ನು ತಮ್ಮದಾಗಿಸಿಕೊಳ್ಳುತ್ತಾ ಆ ಅನುಭವಗಳನ್ನು ಸಾಹಿತ್ಯ ರಚನೆಯಲ್ಲಿ ಬರೆಯುತ್ತಾ, ಅನೇಕಾನೇಕ ಮಹತ್ವದ ಸಂಗತಿಗಳನ್ನು ತಿಳಿಸಿದ್ದಾರೆ. ಮಹಾಕವಿ ಕುವೆಂಪು ಅವರ ಮಗನಾಗಿದ್ದರೂ ಅವರ ಎಲ್ಲ ಪ್ರಭಾವಗಳಿಂದ ಬಿಡಿಸಿಕೊಂಡೇ ಬರೆದಿದ್ದಾರೆ. ಕೆಲವು ಆದರ್ಶಗಳು, ಸಂಸ್ಕಾರ ರೂಪದಿಂದ ಬಂದಿದ್ದರೂ, ಅನುಭವ ಚಿಂತನೆ ಎಲ್ಲ ಸ್ವಂತದ್ದೇ. ಕಾರಂತರ ತರುವಾಯ ಅಂಥ ವೈವಿಧ್ಯಮಯ ಸಾಹಿತ್ಯ ಸೃಷ್ಟಿಯಾದುದು ತೇಜಸ್ವಿಯವರಿಂದಲೇ ಎಂದು ಹೇಳಿದರೆ ತಪ್ಪಾಗಲಾರದು.

ಸೃಷ್ಟಿಶೀಲ ಬರಹಗಾರ ಅನೇಕ ವೇಳೆ ತನ್ನ ಸಿದ್ಧಾಂತ, ತತ್ವ, ತರ್ಕ, ಇತಿಮಿತಿಗಳನ್ನು ತಿಳಿಯಲು ಅತಿರೇಕದ ಗ್ರಹಿಕೆ ಅನಿವಾರ್ಯ ಎನ್ನುತ್ತಾರೆ. ಸಾವು, ದರ್ಶನ, ಮದುವೆ, ಪ್ರೇಮ, ಪ್ರಕೃತಿ, ಬದುಕು ಇತ್ಯಾದಿಗಳ ಬಗ್ಗೆ ತೇಜಸ್ವಿಯವರು ತಮ್ಮದೇ ಆದ ವಿಶಿಷ್ಟ ತಾತ್ವಿಕತೆಯನ್ನು ಹೊಂದಿದ್ದಾರೆ. ಜೀವನದ ಎರಡು ಪ್ರಮುಖ ಹಾಗೂ ವಿರುದ್ಧ ಸಂಗತಿಗಳೆಂದರೆ ಸೃಷ್ಟಿ ಮತ್ತು ಸಾವು. ಇವೆರಡು ಬದುಕಿನಲ್ಲಿ ಬೇರ್ಪಡಿಸಬಲ್ಲ ಯಮಳ ಸ್ಥಿತಿಗಳು. ಈ ವಿಷಯವಾಗಿ ತಮ್ಮ ತಾತ್ವಿಕ ವಿಚಾರಗಳನ್ನು ಮಂಡಿಸುತ್ತಾರೆ ಮತ್ತು ತಾತ್ವಿಕ ಸಿದ್ಧಾಂತಗಳನ್ನು ತಮ್ಮ ಕಾದಂಬರಿಗಳಲ್ಲಿ ಶೋಧನೆ ಹಾಗೂ ಸತ್ಯಾನ್ವೇಷಣೆಗೆ ಒಡ್ಡುತ್ತಾರೆ. ತಮ್ಮ ಕಾದಂಬರಿಗಳಲ್ಲಿ ನಿರೂಪಕ ಅಥವ ಲೇಖಕ ಸಮುದಾಯದ ಒಂದು ಭಾಗವಾಗಿದ್ದು, ತನ್ನ ವಿಶಿಷ್ಟತೆಗಳನ್ನು ಉಳಿಸಿಕೊಂಡು ಸಮುದಾಯದ ಸಂವೇದನೆಗಳ ಜೊತೆ ಅಂತರ್ಗತವಾಗುತ್ತ, ಆತ್ಮ ಸಂವಾದದ ಅಭಿವ್ಯಕ್ತಿ ಮಾಡುತ್ತಾ ಸಾಗುತ್ತಾರೆ.

ತೇಜಸ್ವಿಯವರು ಮೊದಲೆರಡು ಕಾದಂಬರಿಗಳಲ್ಲಿ ಜೀವನ ಮೌಲ್ಯಗಳ ಬಗ್ಗೆ ಅಪಾರ ಕಾಳಜಿ ವಹಿಸುತ್ತಾರೆ, ಶಿಕ್ಷಣ, ಸಾಹಿತ್ಯಸೃಷ್ಟಿ, ವೈಚಾರಿಕತೆ ಬಗ್ಗೆ ಬೇರೆ ಬೇರೆ ಪಾತ್ರಗಳ ಮೂಲಕ ತಿಳಿಸುತ್ತಾರೆ. ನಂತರ ಪ್ರಕಟವಾದ ಕರ್ವಾಲೋ, ಚಿದಂಬರ ರಹಸ್ಯ ಮತ್ತು ಜುಗಾರಿ ಕ್ರಾಸ್ ಕಾದಂಬರಿಗಳು ಕೃಷಿ ಮೂಲ ಸಂಸ್ಕೃತಿಯ ಹಾಗೂ ಸಾಹಿತ್ಯದ ಅಭಿವ್ಯಕ್ತಿಗಳು ಎನ್ನಬಹುದು. ಗ್ರಾಮೀಣ ಭಾರತದಲ್ಲಿ ರೈತಾಪಿ ವರ್ಗ,

ತಮ್ಮ ಕಸುಬು, ಬೆಳೆ, ಮಾರುಕಟ್ಟೆ, ಸ್ಥಳೀಯ ರಾಜಕಾರಣ, ವ್ಯಾಪಾರ - ಇವುಗಳನ್ನೆಲ್ಲಾ ಎದುರಿಸುತ್ತಿರುವ ಸಂಕೀರ್ಣ ಸಮಸ್ಯೆಗಳನ್ನು ಈ ಕಾದಂಬರಿ ಕಟ್ಟಿಕೊಡುತ್ತದೆ. ಈ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಪ್ರವೃತ್ತರಾಗಿರುವ ವಿಜ್ಞಾನದ ಸಂಶೋಧನೆಗಳು. ಅವುಗಳ ಸಫಲತೆ, ಸಮಾಜದ ಬೆಳವಣಿಗೆಗೆ ಕಂಟಕ ಪ್ರಾಯವಾಗಿರುವ ಜಾತಿ ಪದ್ಧತಿ, ಕೋಮು ಸಮಸ್ಯೆ, ಇವುಗಳೆಲ್ಲಾ ಈ ಕಾದಂಬರಿಗಳಲ್ಲಿ ಸಮಕಾಲೀನ ಸಮಸ್ಯೆಗಳಾಗಿ ಕಾಣಿಸಿಕೊಂಡಿವೆ.

ಕರ್ವಾಲೋ ಕಾದಂಬರಿ ೧೯೮೦ರಲ್ಲಿ ಪ್ರಕಟವಾಯಿತು. ಅಭಿವ್ಯಕ್ತಿಯಲ್ಲಿ ಸಾಂಪ್ರದಾಯಿಕ ನಿರೂಪಣ ವಿಧಾನವನ್ನೇ ಅನುಸರಿಸಿದೆ.[4] ಮಲೆನಾಡಿನ ಮೂಡಿಗೆರೆಯ ಸುತ್ತಮುತ್ತಲಿನ ಪ್ರಾಕೃತಿಕ ಪರಿಸರವನ್ನು ಮುಖ್ಯ ಕೇಂದ್ರವಾಗಿಟ್ಟುಕೊಂಡಿದ್ದಾರೆ. ಕಾದಂಬರಿ ವಾಸ್ತವವಾದಿ ನೆಲೆಯನ್ನು ಹೊಂದಿದ್ದರೂ ಕಾದಂಬರಿ ತಾತ್ವಿಕ ನೆಲೆಗಟ್ಟು ಭಿನ್ನವಾಗಿದೆ. ದೈನಂದಿನ ಬದುಕಿನ ಸೂಕ್ಷ್ಮತೆಗಳಿಗೆ ಮನಸ್ಸನ್ನು ತೆರೆದುಕೊಂಡಾಗ ಅದು ನಮ್ಮೆದುರು ಮುಖಾಮುಖಿಯಾಗುವ ವಿಚಿತ್ರವಾದ ರಹಸ್ಯಮಯವಾದ ರೀತಿಗಳನ್ನು ಶೋಧಿಸುವಲ್ಲಿ ಕರ್ವಾಲೋ ಕಾದಂಬರಿ ಭಿನ್ನತೆ ಮತ್ತು ಅಪೂರ್ಣ ಯಶಸ್ಸನ್ನು ಸಾಧಿಸುವಲ್ಲಿ ನಿಗೂಢತೆಯಿಂದ ಮುಕ್ತಾಯವಾಗುತ್ತದೆ.

ಕರ್ವಾಲೋ ಅಂತರಾಷ್ಟ್ರೀಯ ಖ್ಯಾತ ಸಸ್ಯ ಹಾಗೂ ಕೀಟಶಾಸ್ತ್ರಜ್ಞ ಹಾರುವ ಓತಿಯ ಬಗ್ಗೆ ರಹಸ್ಯ ಹಾಗೂ ಕುತೂಹಲ ಕಾದಂಬರಿಯ ಕೇಂದ್ರಬಿಂದುವಾಗಿ ಓದುಗರನ್ನು ಸೆರೆ ಹಿಡಿಯುತ್ತದೆ. ಕರ್ವಾಲೋದ ತಂತ್ರ ವಿಧಾನ, ನಿಗೂಢ ಮನುಷ್ಯ ಕೃತಿಯ ತಂತ್ರ ವಿಧಾನಕ್ಕಿಂತ ಬೇರೆಯಾಗಿದೆ. ನಿರೂಪಕ ಕಾದಂಬರಿಯ ಒಂದು ಪಾತ್ರವೂ ಆಗಿದ್ದಾನೆ. ಆತ ತಾನು ಕಂಡದ್ದನ್ನು ನಿರೂಪಿಸುತ್ತಾ ಹೋಗವುದರ ಜೊತೆಗೆ ಅವುಗಳಿಗೆ ಸಂಬಂಧಿಸಿದಂತೆ ತನ್ನ ಅನಿಸಿಕೆ, ಪ್ರತಿಕ್ರಿಯೆ, ವ್ಯಾಖ್ಯಾನಗಳನ್ನು ವ್ಯಕ್ತಪಡಿಸುತ್ತಾ ಸಾಗುತ್ತಾನೆ. ಮೂಡಿಗೆರೆಯಲ್ಲಿ ಭತ್ತದ ಸಂಶೋಧನಾ ಕೇಂದ್ರದಲ್ಲಿ ಭತ್ತಕ್ಕೆ ಕೀಟಗಳಿಂದ ತಗಲುವ ರೋಗಗಳಿಗೆ ಪರಿಹಾರ ಕಂಡುಹಿಡಿಯಲು ಕರ್ವಾಲೋ ಬರುತ್ತಾರೆ. ಮೂಡಿಗೆರೆಯಲ್ಲಿ ಜೇನು ಪೋಷಕರ ಸಹಕಾರ ಸಂಘದಿಂದ ಮೈಸೂರಿನಲ್ಲಿರುವ ತಮ್ಮ ತಂದೆಗೆ ಜೇನುತುಪ್ಪ ಕೊಂಡು ಕಳುಹಿಸಿಕೊಡಲು ನಿರೂಪಕ ಹೋದಲ್ಲಿಂದ ಕಾದಂಬರಿ ಆರಂಭವಾಗುತ್ತದೆ.

ಈ ವರ್ಷ ಜೇನು ಉತ್ಪಾದನೆ ಅಧಿಕವಾಗಿದೆ. ಇದಕ್ಕೆ ನಿಸರ್ಗದ ವೈಚಿತ್ರ್ಯಗಳೇ ಕಾರಣವಾಗಿದೆ. ವಿಕಾಸ ಪಥದ ಜೀವಿಗಳ ಗತಿಯನ್ನು ಈ ಹುಳುಗಳು ಸೂಚಿಸುತ್ತವೆ. ಈ ಸೊಸೈಟಿಯಲ್ಲಿ ಹಂಗಾಮಿ ಬೀಕೀಪರ್ ಆಗಿರುವ ಮಂದಣ್ಣ ಕರ್ವಾಲೋಗೆ ಆತ ತೋರಿಸುವ ಅದ್ಭುತ ಜಗತ್ತು ಕಾದಂಬರಿಯಲ್ಲಿ ಗಾಢವಾಗಿ ಪರಸ್ಪರ ಮುಖಾಮುಖಿಯಾಗುತ್ತದೆ. ನಿಗೂಢತೆ, ಕುತೂಹಲದ ಮೂಲಕ ಅರ್ಥಪೂರ್ಣವಾದ ಸತ್ಯದ ಅನ್ವೇಷಣೆ ಪ್ರಕಟವಾಗುತ್ತದೆ. ಮಂದಣ್ಣ ಒಬ್ಬ ಅಪ್ರತಿಮ ಪ್ರಕೃತಿ ವಿಜ್ಞಾನಿ. ಆದರೆ, ಅವನಲ್ಲಿ ಅಕಾಡಮಿಕ್ ಶಿಸ್ತಿಲ್ಲ. ಆದರೆ, ಸ್ಥಳೀಯ ಬದುಕಿನ ನಿಗೂಢತೆಗಳು ಅವನಿಗೆ ತಿಳಿದಿವೆ.

ಮಂದಣ್ಣನಿಗೆ ಪ್ರಕೃತಿಯ ಬಗ್ಗೆ ಗಾಢ ಕುತೂಹಲವಿದೆ. ಈ ಕುತೂಹಲದಿಂದಾಗಿ ಕರ್ವಾಲೋಗೆ ಮಂದಣ್ಣ ಆಪ್ತ ಗೆಳೆಯನಾಗುತ್ತಾನೆ. ಕರ್ವಾಲೋ ಕೂಡ ಮಂದಣ್ಣನಂತ ಹುಳಹುಪ್ಪಟೆ ಪ್ರಾಣಿಗಳನ್ನು ಕಂಡು ಅಧ್ಯಯನ ಮಾಡುವ ಪ್ರತಿಭಾವಂತ. ಭತ್ತ ಖಾಯಿಲೆಗಳ ಬಗ್ಗೆ, ಜೀವನದ ಬಗ್ಗೆ, ಸಂಶೋಧನೆಯ ಬಗ್ಗೆ ಅಪಾರವಾದ ಶ್ರದ್ಧೆ ಇದೆ. ಇವುಗಳೆಲ್ಲದರ ವಿಚಿತ್ರ ಘಟನೆಗಳಿಗೆ ಸಿಕ್ಕಾಕಿಕೊಂಡು, ಪೊಲೀಸ್, ಕೋರ್ಟ್ ಅಲೆಯುವ ಹಂತಕ್ಕೆ ತಲುಪುತ್ತಾನೆ. ಅಂತಹ ಸಮಯದಲ್ಲಿ ಕರ್ವಾಲೋರವರು ಮಂದಣ್ಣನ ಬಿಡುಗಡೆಗೆ ಪ್ರಯತ್ನಿಸುತ್ತಾರೆ. ಸಹಾಯ ಮಾಡುತ್ತಾರೆ.

ಕರ್ವಾಲೋಗೆ ಮಂದಣ್ಣನ ಬಗ್ಗೆ ನಿರೂಪಕರಲ್ಲಿ ಈ ರೀತಿ ಹೇಳುತ್ತಾರೆ. ಒಂದು ವಿಷಯದಲ್ಲಿ ಮಂದಣ್ಣನನ್ನು ಮೀರಿಸುವವರು ಯಾರೂ ಇಲ್ಲ. ಅಷ್ಟೊಂದು ಚೆನ್ನಾಗಿ ಗ್ರಹಿಸುತ್ತಾನೆ. ಅವನೊಬ್ಬ ಹುಟ್ಟಾ ನ್ಯಾಚುರಲಿಸ್ಟ್. ಈವರೆಗೂ ಅವನು ಹೇಳಿರೋದು ಒಂದೊಂದು ಅದರ ವಿವರಗಳಲ್ಲಿ ಸುಳ್ಳಾಗಿಲ್ಲ. ಅಷ್ಟೊಂದು ಸೂಕ್ಷ್ಮವಾಗಿ ಗ್ರಹಿಸುತ್ತಾನೆ. ಅದ್ಭುತ ಪ್ರಕೃತಿ ಶಾಸ್ತ್ರಜ್ಞ ಎಂದು ಹೇಳುತ್ತಾರೆ.

ಓತಿಯನ್ನು ಪತ್ತೆ ಹಚ್ಚಲಿಕ್ಕೆ ಅನ್ವೇಷಣ ತಂಡವೊಂದು ರಚಿತವಾಯಿತು. ಐದಾರು ದಿನ ಕಾಡು ಮೇಡು ಅಲೆಯುತ್ತಾ, ಕಾಡಿನ ಚಿತ್ರ ವಿಚಿತ್ರ, ಗಿಡಮರಗಳನ್ನು, ಪಶುಪಕ್ಷಿಗಳನ್ನು ಪ್ರಕೃತಿಯ ಅಪೂರ್ವ ಸೌಂದರ್ಯವನ್ನೂ ನೋಡಿ ಸವಿಯುತ್ತಾ, ಅಸಾಧಾರಣ ಅನುಭವ ಪಡೆಯುವತ್ತ ಸಾಗಿದರು. ಎಲ್ಲರೂ ದಣಿವು ಮತ್ತು ಬೇಸರದಲ್ಲಿದ್ದಾಗ ಕರ್ವಾಲೋ ಓತಿಯ ಹಿಂದಿನ ಇತಿಹಾಸವನ್ನು ಹೇಳಿದರು. "ಈ

ಪ್ರಾಣಿ ಜಾತಿಗಳು ಹುಟ್ಟಿದ್ದು ಬಹಳ ವರುಷಗಳ ಹಿಂದೆ. ಎಷ್ಟು ವರುಷ ಎಂದು ಹೇಳಲು ಸಾಧ್ಯವೇ ಆಗೋಲ್ಲ. ಅಷ್ಟೊಂದು ವರುಷಗಳ ಹಿಂದೆ. ಇವು ಎಂದರೆ ಈ ಜಾತಿಯ ಓತಿಗಳು ಚರಿತ್ರಪೂರ್ವ ಪ್ರಾಚೀನ ಯುಗಗಳಿಗೆ ಸೇರಿದವು. ಇವೇ ದೊಡ್ಡ ದೊಡ್ಡ ಬೃಹದಾಕಾರದ ಪ್ರಾಣಿಗಳಾಗಿ ಬೆಳೆದು ಇಡೀ ಭೂ ಮಂಡಲವನ್ನೆಲ್ಲಾ ವ್ಯಾಪಿಸಿಬಿಟ್ಟಿದ್ದವು. ಆದರೆ, ಇವುಗಳ ಮೆದುಳನ್ನು ಮೀರಿ ಇವುಗಳ ಮೈ ಬೆಳೆದುಬಿಡ್ತು. ಭೌಗೋಲಿಕ ವ್ಯತ್ಯಾಸಗಳಿಗೆ ಹೊಂದಿಕೊಂಡು ಬದುಕಲು ಇವಕ್ಕೆ ಸಾಧ್ಯ ಆಗಲಿಲ್ಲ. ಯಾವುದೋ ಅಗೋಚರ ಕಾರಣಗಳಿಂದಾಗಿ ಇವೆಲ್ಲ ಸರ್ವನಾಶಹೊಂದಿ ನಾಮಾವಶೇಷವಾಗಿ ಹೋದವು. ಆದರೂ ಒಂದೋ, ಎರಡೋ ಪ್ರಾಣಿಗಳು ಭೂಮಿ ಮೇಲೆ ಹಾಗೂ ಇನ್ನೊಂದೆರಡು ನೀರಿನಲ್ಲಿ ಹಾಗೆಯೇ ಹೊಂದಿಕೊಂಡು ಉಳಿದುಬಿಟ್ಟವು. ಆದ್ದರಿಂದ ಕೋಟಿಗಟ್ಟಲೆ ವರುಷದ ಹಿಂದಿನ ಗುಟ್ಟನ್ನೆಲ್ಲಾ ಹೊಟ್ಟೆಯೊಳಗೆ ಇಟ್ಟುಕೊಂಡ ಅಪೂರ್ವ ಜೀವಿಗಳಾಗಿವೆ. ಇದರ ಒಂದು ಮಿಂಚು ನೋಟ ಸಿಕ್ಕರೂ ಸಾಕೆಂದು ಜಗತ್ತಿನಾದ್ಯಂತ ವಿಜ್ಞಾನಿಗಳು ತಮ್ಮ ಕಾಲ, ಜೀವನ, ಹಣ ಎಲ್ಲವನ್ನೂ ಮುಡಿಪಾಗಿಟ್ಟುಕೊಂಡು ಹಂಬಲಿಸಿದ್ದಾರೆ. ಆದರೆ, ಸಾಧ್ಯವಾಗಿಲ್ಲ. ನಿರ್ವಂಶವಾಗಿದೆ ಎಂದೇ ಅಧಿಕೃತವಾಗಿ ತೀರ್ಮಾನಿಸಲಾಗಿದೆ" .

ಕಾದಂಬರಿಯ ಬಹು ಮುಖ್ಯ ಗುಣಗಳಲ್ಲಿ ಮತ್ತೊಂದು ಅಂಶವೆಂದರೆ, ಅದರ ಹಾಸ್ಯ ಶೈಲಿ. ಹಾಸ್ಯ ಮತ್ತು ವಿನೋದ ತೇಜಸ್ವಿಯವರ ಬಹು ಮುಖ್ಯ ಹಾಗೂ ಗಂಭೀರವಾದ ಅಭಿವ್ಯಕ್ತಿಗಳು. ಹಾಸ್ಯ ಶೈಲಿಯಲ್ಲಿ ಬರೆಯುತ್ತಾ, ರೇಗುತ್ತಾ, ತಡವರಿಸುತ್ತಾ ಮನುಷ್ಯ ಸಂಬಂಧಗಳನ್ನು ಜೀವನ ವಿಧಾನಗಳನ್ನು ಇದು ಚಿತ್ರಿಸುತ್ತದೆ. ಕೋಟ್ಯಂತರ ವರ್ಷಗಳ ಹಿಂದಿರುವ ಇಂದಿನ ಪ್ರಾಣಿಗಳ ನಿಗೂಢತೆಯನ್ನು ಹುಡುಕುತ್ತಾ ಅದರ ಜೊತೆ ತಮ್ಮ ಸುತ್ತಲಿನ ಪರಿಸರದಲ್ಲಿ ಜನರ ವಿಕಾಸವಾಗಿರುವ ಮತ್ತು ವಿಕಾಸವಾಗದಿರುವ ಸ್ಥಿತಿಯನ್ನು ಚಿತ್ರಿಸುತ್ತದೆ. ಪ್ರಜ್ಞೆಯ ವಿಸ್ತಾರ ಮತ್ತು ಶೋಧನೆಯ ಸಂಭ್ರಮ ಈ ಕಾದಂಬರಿಯ ಮತ್ತೆರಡು ಉತ್ಕರ್ಷ ಸ್ಥಿತಿಗಳು.

ಜೀವ ವಿಜ್ಞಾನದ ಶೋಧನೆಗೆ ತೊಡಗುವುದು ಈ ಕಾದಂಬರಿಯ ಪ್ರಮುಖ ಅಂಶವಾಗಿದೆ. ಈ ಕೃತಿಯಲ್ಲಿ ಬರುವ ಮಾನವರೆಲ್ಲ ಪ್ರಜ್ಞೆಯ ಸಂಕೇತಗಳಂತೆ ಗೋಚರಿಸಿದರೆ, ಓತಿ ಕಾಲ ದೇಶಗಳ ಆಚಿನ ಯಾವುದೇ ವಿಸ್ಮೃತಿಯ ಸಂಕೇತವಾಗಿ ಕಂಡುಬರುತ್ತದೆ. ನಿರೂಪಕ ಕರ್ವಾಲೋಗೆ 'ಅಲ್ಲಾ ಸಾರ್, ನನಗೊಂದು ಬಹು

ಮುಖ್ಯ ಸಂಶಯ ಬಂದುಬಿಟ್ಟಿದೆ. ಜೀವ ವಿಕಾಸದಲ್ಲಿ ಎಲ್ಲಾ ಬದಲಾವಣೆಯಾಗಿ ಈ ಸರೀಸೃಪಗಳೇ ರೆಕ್ಕೆ ಪುಕ್ಕ ಬೆಳೆಸಿಕೊಂಡು ಬಣ್ಣ ಬಣ್ಣದ ಪಕ್ಷಿ ಸಂಕುಲ ಆಗಿ, ಮಂಗಗಳು ಭೂಮಿಗಿಳಿದು, ದ್ವಿಪಾದಿಯಾಗಿ ಆಯುಧಗಳನ್ನು ಮಾಡಿ ಯಂತ್ರ ಮಾಡಿ, ಯಂತ್ರಗಳನ್ನು ಮಾಡುವ ಯಂತ್ರ ಮಾಡಿ, ಇಷ್ಟೆಲ್ಲಾ ಆಗುತ್ತಿರಬೇಕಾದರೆ, ಈ ಓತಿ ಯಾಕೆ ಹಾಗೇ ಉಳಿದಿದೆಂತಿರಾ? ಅದೇನು ಇದರ ಇಚ್ಛೆ ಮೇಲೆ ಹಾಗೆ ಉಳಿಯಿತೋ ಅಥವಾ ಪರಿಸರ ಅದರ ಮೇಲೆನೊ ಪ್ರಭಾವ ಬೀರಿಲ್ಲವೋ ಎಂದು ಕೇಳಿದೆ. ಏಕೆಂದರೆ, ಈ ಪ್ರಶ್ನೆ ಕ್ಷಣ ಕ್ಷಣಕ್ಕೂ ನನ್ನಲ್ಲಿ ಸಂಶಯ ಹಾಗೂ ಕುತೂಹಲವನ್ನು ಮೂಡಿಸುತ್ತಿದೆ' ಎಂದು ಕೇಳಿದರು. ಕರ್ವಾಲೋ ಈ ಪ್ರಶ್ನೆಯನ್ನು ಕೇಳಿದೊಡನೆ ಬಹಳ ಗಂಭೀರವಾದರು. ನಂತರ ಕರ್ವಾಲೋ 'ಇದೊಂದು ಚಿದಂಬರ ರಹಸ್ಯ. ಯಾಕೆ ಜೀವ ವಿಕಾಸ ಪಥದಲ್ಲಿ ಇವು ಮಾತ್ರ ಬದಲಾಗಲಿಲ್ಲವೆನ್ನುವುದು. ಇದಕ್ಕೆ ಸಮಂಜಸ ಉತ್ತರ ಅದನ್ನು ಹಿಡಿದರೆ, ದೊರಕಬಹುದೇನೊ! ಆದರೆ, ಸ್ಥೂಲವಾಗಿ ನಾವು ಹೀಗೆ ಊಹೆ ಮಾಡಬಹುದು. ಏಕೆಂದರೆ, ಕೆಲವು ಉದಾಹರಣೆಗಳು ನಮಗೆ ವಿಕಾಸ ಪಥದಲ್ಲಿ ಸಿಕ್ಕುತ್ತವೆ. ನೋಡಿ ಮಾನವನ ಪೂರ್ವಜರೂ ಮಂಗಗಳೇ, ಆದರೆ, ಅವು ಮರದಿಂದ ನೆಲಕ್ಕಿಳಿದು ದ್ವಿಪಾದಿಗಳಾಗಿ ಆಯುಧಗಳನ್ನು ಉಪಯೋಗಿಸುವ ಮಾನವರಾದರು. ಆದರೆ, ಗೊರಿಲ್ಲಾ ಮತ್ತು ಚಿಂಪಾಂಜಿಗಳು ಸಹ ನೆಲಕ್ಕೆ ಇಳಿದು, ವಾಸಿಸಲಾರಂಭಿಸಿದವು. ಆದರೆ, ವಾನರಾಗೇ ಉಳಿದುಬಿಟ್ಟವು. ಅವು ಮಾನವರಾಗುವ ದಿಸೆಯತ್ತ ವಿಕಾಸವಾಗಲೇ ಇಲ್ಲ. ಬೇರೆಯೇ ದಿಕ್ಕನ್ನು ಹಿಡಿದುಬಿಟ್ಟವು. ಇದೊಂದು ನಿಜಕ್ಕೂ ಚಿದಂಬರ ರಹಸ್ಯವೇ ಸರಿ. ಕೋಟಿ ಕೋಟಿ ವರುಷಗಳ ಹಿಂದೆ ಏನಾಗಿರಬಹುದೆಂದು ಈಗ ನಾವು ಲೆಕ್ಕ ಹಾಕಿ ಕಲ್ಪನೆ ಮಾಡಬೇಕಾಗಿದೆ' ಎಂದು ಹೇಳಿದರು. ಮನುಷ್ಯ ಸಂಸ್ಕೃತಿ ನಾಗರೀಕತೆಗಳನ್ನು ನಿರ್ಮಿಸತೊಡಗಿದ. ಕೈಗಳ ದೌರ್ಬಲ್ಯ ನಿಗೋದಕ್ಕೆ ಆಯುಧಗಳನ್ನು ನಿರ್ಮಿಸಿದ. ಯುದ್ಧಗಳನ್ನು ಮಾಡಿದ. ಚಿಂಪಾಂಜಿಗಳೊ ಗೊರಿಲ್ಲಾಗಳೊ ತಮ್ಮ ಬಲಾಢ್ಯ ಕೈಗಳನ್ನೇ ಬಳಸಿದ್ದವು. ಇವೆಲ್ಲಾ ಊಹೆ ಅಷ್ಟೇ. ಬ್ರಹ್ಮಾಂಡದ ಚಿದಂಬರ ರಹಸ್ಯವನ್ನು ತಿಳಿಯೋ ನಮ್ಮ ಯತ್ನ. ಮೂಳೆಚೂರುಗಳು, ಶಿಲಾಪದರಗಳಲ್ಲಿ ಸಿಕ್ಕುವ ಪಳೆಯುಳಿಕೆಗಳು, ಉಳಿದು ಇನ್ನು ಜೀವಂತವಾಗಿರುವ ಪ್ರಾಣಿಗಳ ರಚನೆ ಇವನ್ನೆಲ್ಲಾ ಇಟ್ಟುಕೊಂಡು ಆದಷ್ಟು ಕರಾರುವಾಕ್ಕಾಗಿ ಯೋಚಿಸಬೇಕು". ಅವರ ಮಾತುಗಳು ಕಾಲಾತೀತವಾದ ಉಪನಿಷತ್ ರಹಸ್ಯ ಬೋಧಿಸುಂತೆ ಅಲ್ಲಿದ್ದವರ ಅಂತರಂಗಕ್ಕೆ ತಾಕಿದವು. ಹಾರುವ ಓತಿಯ ಬಗ್ಗೆ ಒಂದು ಬಗೆಯ ಭಕ್ತಿಗೌರವಗಳು ವಿಸ್ಮೃತಿಗಳು ಮೂಡತೊಡಗಿದವು.

ಕೊನೆಗೆ ಓತಿಯನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗುತ್ತಾರೆ. ಅದನ್ನು ಹಿಡಿದು ತಮ್ಮದಾಗಿಸಿಕೊಳ್ಳುವಲ್ಲಿ ವಿಫಲರಾಗುತ್ತಾರೆ. ಸ್ವಲ್ಪ ಹೊತ್ತಿನಲ್ಲೇ ದೂರ ಸಾಗಿ ಆ ವಿಚಿತ್ರ ಸರೀಸೃಪ ಅನಂತ ಶೂನ್ಯದಲ್ಲಿ ಲೀನವಾಗುತ್ತದೆ. ಅದಕ್ಕೆ ಕರ್ವಾಲೋ ನಿಟ್ಟುಸಿರು ಬಿಟ್ಟು, ಹೋಗಲಿ ಬಿಡಿ, ಬ್ಯಾಡ್‌ಲಕ್, ಆದರೆ, ಏನೂ ಬೇಸರವಿಲ್ಲ ಎಂದು ಹೇಳಿದರು. ಅದಕ್ಕೆ ನಿರೂಪಕರು ಹಾರೋ ಪ್ರಯತ್ನದಲ್ಲಿ ತಪ್ಪು ದಾರಿ ಹಿಡೀತು ಅಂತ ಕಾಣ್ತದೆ. ಕೈಗಳ ಬದಲು ರೆಕ್ಕೆ ಉಪಯೋಗಿಸಿತು. ಅದಕ್ಕೆ ಅದು ಹಾಗೇ ಉಳೀತು. ಮಿಕ್ಕವು ರೆಕ್ಕೆ ಪುಕ್ಕ ಬಳಸಿಕೊಂಡು ಹಕ್ಕಿ ಆಗಿಬಿಟ್ಟವು ಎಂದರು. ಅದಕ್ಕೆ ತಪ್ಪು ಸರಿ ಹೇಗೆ ಹೇಳ್ತೀರಿ, ನಮಗೆ ಈ ಕ್ಷಣ ಇಲ್ಲಿ ಹೀಗನ್ನಿಸಿದೆ. ಜೀವ ವಿಕಾಸಕ್ಕೆ ಎಲ್ಲಿದೆ ಕೊನೆ ಒಂದು ಕರ್ವಾಲೋ ಹೇಳುವುದರ ಮೂಲಕ ಕಾದಂಬರಿ ಮುಕ್ತಾಯಗೊಳ್ಳುತ್ತದೆ.

ಯಾವುದೋ ಒಂದು ದಿವ್ಯ ಕ್ಷಣದಲ್ಲಿ ಸರಿದ ಕಾಲದ ತೆರೆಯನ್ನು ಮತ್ತೆ ಸರಿಯಕೊಡಗೂಡದೆಂದು ಅಚಲ ನಿರ್ಧಾರದಿಂದ ಬಿಡುಗಣ್ಣಿಂದ ಆ ಓತಿಯನ್ನು ಹಿಡಿದುಕೊಂಡಿದ್ದೆ. ಚಿರವಾಸ್ತವವಾದ ಈ ಪ್ರಾಣಿಯೊಂದಿಗೆ ಚಲನಶೀಲವಾದ ಬದುಕಿನ ಸಾಮಾಜಿಕ ಸಂದರ್ಭವನ್ನು ಲೇಖಕರು ಅನನ್ಯವಾಗಿ ತಳಕು ಹಾಕಿದ್ದಾರೆ. ವಿಸ್ಮೃತಿಯ ತುಣುಕೊಂದು ಮಿಂಚಿ, ವಿಸ್ಮೃತಿಯಲ್ಲಿ ಲೀನವಾಗುವ ಪ್ರಕ್ರಿಯೆ ಕಾದಂಬರಿಯ ವಿನ್ಯಾಸದಲ್ಲಿ ಸಮರ್ಥವಾಗಿ ಮೂಡಿಬಂದಿದೆ. ಸರಳವಾದ ಕಥಾ ಹಂದರವನ್ನೂ ಹೊಂದಿದ್ದು, ಅದು ಬೀರುವ ಪ್ರಭಾವ ಅನನ್ಯವಾದುದು.

ಕರ್ವಾಲೋ ಬದುಕಿನ ವಿಸ್ಮಯವನ್ನು ಕುರಿತ ಕಾದಂಬರಿಯಾಗಿದೆ.[5] ಮನುಷ್ಯ ಪ್ರಕೃತಿ ಮನುಷ್ಯ ಸಮಾಜ, ಮನುಷ್ಯ ಮನುಷ್ಯ ಸಂಬಂಧಗಳ ಸಂಕೀರ್ಣತೆಯಲ್ಲಿ ಅವುಗಳನ್ನು ಕೇವಲ ಬೌದ್ಧಿಕವಾಗಿ ಅರ್ಥೈಸಿಕೊಳ್ಳಲಾಗದ ಬುದ್ಧಿಯನ್ನು ಮೀರಿದ ನಿಗೂಢತೆಯಲ್ಲಿ ನಮ್ಮೆಲ್ಲ ವಿಶ್ಲೇಷಣೆಗಳನ್ನು ಮೀರಿ ನಿಲ್ಲುತ್ತದೆ. ವಿಶ್ಲೇಷಿಸುತ್ತಾ ಹೋದಂತೆ, ಹೆಚ್ಚು ಹೆಚ್ಚು ಜಟಿಲವಾಗುತ್ತ ಹೋಗುತ್ತದೆ. ಬದುಕಿನ ನಿಗೂಢತೆ ನಮ್ಮಲ್ಲಿ ಇತ್ಯಾತ್ಮಕವಾದ ಕುತೂಹಲವನ್ನಾಗಲೀ, ನೇತ್ಯಾತ್ಮಕ ಸಿನಿಕತನವನ್ನಾಗಲೀ ಬೆಳೆಸಬಹುದು. ಕರ್ವಾಲೋ ಕಾದಂಬರಿ ಕೇವಲ ಕನಸುಗಾರಿಕೆಯ ಅಮೂರ್ತ ಬರವಣಿಗೆ ಅಲ್ಲ. ಅನುಭವ-ಅನುಭಾವಗಳನ್ನು ಅರ್ಥಪೂರ್ಣವಾಗಿ ಘರ್ಷಿಸುತ್ತಾ, ವಿಚಾರ ಕುತೂಹಲ ಒಂದಕ್ಕೊಂದು ತೆಕ್ಕೆ ಹಿಡಿಯುತ್ತಾ, ಅಪರೂಪದ ರಚನೆಯಾಗಿದೆ.

ಕರ್ವಾಲೋ ಕೇವಲ ಬದುಕಿನ ವೈದೃಶ್ಯಗಳ ದಾಖಲೆಯಲ್ಲ, ಒಂದು ಸಮಾಜದ ಬದುಕಿನ ಪ್ರಕ್ರಿಯೆಯಲ್ಲಿ ಹೊರಹೊಮ್ಮುವ ವಿವಿಧ ಧ್ವನಿಗಳಿಗೆ ಸದಾ ತೆರೆದುಕೊಂಡು ಒಟ್ಟು ಬದುಕಿನ ಅರ್ಥವನ್ನು ಶೋಧಿಸಹೊರಡುವ ಪ್ರಮಾಣಿಕ ಯತ್ನ. ಈ ಕಾದಂಬರಿಯಲ್ಲಿ ಮುಖ್ಯ ಅಮುಖ್ಯಗಳ, ಸಾಮಾನ್ಯ - ಅಸಾಮಾನ್ಯಗಳ, ಲೌಕಿಕ-ಅಲೌಕಿಕಗಳ ಸರಳ ವರ್ಗೀಕರಣ ಇಲ್ಲ. ಎಲ್ಲ ಪಾತ್ರಗಳಿಗೂ ಎಲ್ಲ ಘಟನೆಗಳಿಗೂ ತಮ್ಮದೇ ಆದ ಅಸ್ತಿತ್ವವಿದೆ.

ಕಾದಂಬರಿಯ ಬಹಳಷ್ಟು ಘಟನೆಗಳು ಹಾರುವ ಓತಿಕ್ಯಾತವನ್ನು ಹಿಡಿಯಲು ಹೋಗುವ ಯಾತ್ರೆ ರೀತಿಯಿದೆ. ಏಕೆಂದರೆ ಒಟ್ಟು ಬದುಕಿನ ಸಂದರ್ಭದಲ್ಲಿ ಯಾತ್ರೆಯೂ ಒಂದು ಅನುಭವ. ಎಷ್ಟೊಂದು ನಾವು ಕಣ್ಣಿಗೆ ಕಂಡೂ ನೋಡದೆ ಬಿಟ್ಟಿದ್ದೇವೋ ಏನೋ ಎಂಬ ನಿರೂಪಕರ ಮಾತು ಈ ಕಾರಣದಿಂದ ಮುಖ್ಯವಾಗುತ್ತದೆ. ಹಾಗಾಗಿ ಹಾರುವ ಓತಿಕ್ಯಾತವನ್ನು ಹಿಡಿಯಹೋಗುವ ಯಾತ್ರೆ ಅದರ ಹಿನ್ನೆಲೆ ನಿರೂಪಕ ಕಾಣದ ವಿವಿಧ ಮುಖಗಳನ್ನು ಆತನಿಗೆ ತೋರಿಸುತ್ತ ಹೋಗುತ್ತದೆ. ಮಂದಣ್ಣ ಹಾರುವ ಓತಿಕ್ಯಾತದ ವಿಷಯವನ್ನು ಕರ್ವಾಲೋರಿಗೆ ತಿಳಿಸುವಾಗ ಇಡಿಯ ಜಗತ್ತೇ ಬೆಚ್ಚಿ ಬೀಳುವಂಥ ಸಮಾಚಾರ ಹೇಳುತ್ತಿದ್ದೇನೆನ್ನುವುದರ ಅರಿವೇ ಅವನಿಗೆ ಇರಲಿಲ್ಲ. ಅದನ್ನು ಹಿಡಿಯುವ ಯಾತ್ರೆ ಕರ್ವಾಲೋ, ನಿರೂಪಕ, ಪ್ರಭಾಕರರಿಗೆ ಗಂಭೀರವಾದಷ್ಟು ಅವನಿಗೆ ಆಗುವುದಿಲ್ಲ. ರಾಮಯ್ಯನ ದೃಷ್ಟಿಯಲ್ಲಿ ಮಂದಣ್ಣ ಹುಳು ಹುಪ್ಪಟೆ ಹಿಡಿದುಕೊಂಡು ಬೀದಿ ತಿರುಗ್ತಾ ಇರೋ ಪೋಲಿ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಅನುಭವದ ಮಿತಿಯಲ್ಲಿ ಪ್ರತಿಕ್ರಿಯಿಸುತ್ತಿದ್ದರು.

ಆದಷ್ಟು ಬೇಗ ಮಂದಣ್ಣನ ಕೇಸು ಮುಗಿದು ನಮಗೆ ಈ ಪ್ರಪಂಚದ ರಹದಾರಿ ಸಿಕ್ಕರೆ ಸಾಕೆನಿಸಿತು. ಯಾವುದೇ ಒಂದು ವಿವರಿಸಲಾಗದ ಕಸಿವಿಸಿ ಹೃದಯದಲ್ಲಿ ಎದ್ದಿತು. ಕರ್ವಾಲೋ ಏಕೆ ಮಂದಣ್ಣನ ಬಗ್ಗೆ ಇಷ್ಟೊಂದು ಕಾಳಜಿ ವಹಿಸಿದರು. ಏಕೆ ಅವನನ್ನು ಜೈಲಿಗೆ ಹೋಗೋದರಿಂದ ತಪ್ಪಿಸಲೇಬೇಕೆಂದು ಹೆಣಗಾಡಿದರು ಎಂಬುದು ಈಗ ನನಗೆ ಅರ್ಥವಾಯ್ತು. ಆದರೆ, ಅದನ್ನು ಯಾರಿಗೂ ತಿಳಿಸದೆ ರಹಸ್ಯವಾಗಿಟ್ಟಿದ್ದು ಅನವಶ್ಯಕ ಎಂದೆನ್ನಿಸಿತು. ಏಕೆಂದರೆ, ಹೇಳಿದರೂ ಅದನ್ನು ತಿಳಿದುಕೊಳ್ಳುವಂಥವರು ಯಾರಿದ್ದರು ಅಲ್ಲಿ? ತಿಳಿದವರಿಗೇನೋ ಕರ್ವಾಲೋ ತಿಳಿಸಿದ ಈ ಹಾರಾಡುವ ಓತಿ ಕೊಹಿನೂರು ವಜ್ರಕ್ಕಿಂತ ಎಷ್ಟೆಷ್ಟೋ ಪಾಲು ಅನರ್ಘ್ಯವಿರಬಹುದು. ಆದರೆ,

ಮಿಕ್ಕವರಿಗೆ ಇದೊಂದು ಹುಚ್ಚಿನ ಮುನ್ಸೂಚನೆಯಾಗಿ ಮಾತ್ರ ಕಾಣುತ್ತದೆ. ಆರರ ಮುಂದೆ ಒಂಭತ್ತು ಸೊನ್ನೆ ಹಾಕಿ ಅಷ್ಟು ಹಿಂದಿನ ಪ್ರಾಣಿಯೊಂದನ್ನು ಹುಡುಕಲಿಕ್ಕಾಗಿ ನಾವು ಹೆಣಗುತ್ತಿದ್ದೇವೆ ಎಂದು ಪೊಲೀಸರಿಗೆ ತಿಳಿಸಿದರೆ, ಪಾಪ ಎಂದು ನಮ್ಮ .ಬಗ್ಗೆ ಕನಿಕರ ಸೂಚಿಸಿಯಾರು ಮಾತ್ರ! ಎಂಬ ಲೇಖಕರ ಮಾತುಗಳು ಮುಖ್ಯವಾದವುಗಳು.

ಕರ್ವಾಲೋ ಮತ್ತು ಮಂದಣ್ಣರ ಸಂದರ್ಭಗಳನ್ನು ಕುರಿತಂತೆ ಪೊಲೀಸರಿಗೆ ನಾಗರಾಜನಿಗೆ, ಊರಿನ ದೊಡ್ಡ ಕುಳಗಳಿಗೆ, ಅನುಮಾನದ ತಾತ್ಸಾರಗಳಿದ್ದವು. ನಿರೂಪಕನಿಗೆ ಇದು ಕೆಲವೊಮ್ಮೆ ಕಸಿವಿಸಿ ಹುಟ್ಟಿಸುತ್ತಿತ್ತು. ಮಂದಣ್ಣನ ಜೊತೆ ಕರ್ವಾಲೋ ಗೆಳೆತನಕ್ಕೆ ಎಂತೆಂಥದೋ ವಿಚಿತ್ರ ಮಾಧ್ಯಮಗಳಿರಬಹುದು ಎಂಬ ನಿಗೂಢತೆಯೂ ಕಾಡಿತು.

ಲಂಕೇಶ್ ಮತ್ತು ಅನಂತಮೂರ್ತಿಗಿಂತ ಭಿನ್ನವಾದ ಬದುಕನ್ನು ಬದುಕಿ, ಆವರಿಸಿಕೊಂಡ ಪರಿಸರವನ್ನು ಗೂಢವಾಗಿ, ಗಾಢವಾಗಿ ತಟ್ಟಿದ ತೇಜಸ್ವಿಯವರು ವಿಸ್ಮಯ ಸೃಷ್ಟಿಕರ್ತ. ಬಿಡಿಬಿಡಿಯಾದ ಅನುಭವಗಳನ್ನು ವಿಶ್ಲೇಷಣೆಗೆ ಒಳಪಡಿಸಿ, ನೋಡುವ ತೇಜಸ್ವಿ ಕೊನೆಗೆ ಒಂದು ಇಡಿಯಲ್ಲಿ ಸಂಶ್ಲೇಷಿಸುತ್ತಾರೆ. ಅದರ ಮೂಲಕ ಸಮಷ್ಟಿ ಪ್ರಜ್ಞೆಯ ಅರಿವನ್ನು ಮರು ನಿರೂಪಿಸುತ್ತಾರೆ. ಇದನ್ನು ನಾವು ಗ್ರೀಕಿನ ಪ್ಲೇಟೋ, ಅರಿಸ್ಟಾಟಲ್‌ರ ತತ್ವಶಾಸ್ತ್ರೀಯ ಚಿಂತನೆಯಲ್ಲಿ ಕಾಣಬಹುದು. ವೈಚಾರಿಕತೆ, ವೈಜ್ಞಾನಿಕತೆ, ನಿಗೂಢತೆ, ಕುತೂಹಲ ಮುಂತಾದವುಗಳಲ್ಲಿ ವಿಹರಿಸುವ ತೇಜಸ್ವಿ ಕಂಡದ್ದನ್ನು ಬರೆದರು. ಕ್ಯಾಮರಾದಲ್ಲಿ ಸೆರೆ ಹಿಡಿದು ತೋರಿದರು.

ಸಾಹಿತ್ಯವನ್ನು ಬರೆಯುವ, ಸಾಹಿತಿಯಾಗಬೇಕೆನ್ನುವ ಹಟವಿಲ್ಲದಿದ್ದ ತೇಜಸ್ವಿ ಬದುಕಿದಂತೆ ಬರೆದವರು. ಬರೆದಂತೆ ಬದುಕಿದವರು. ನಿಸರ್ಗದ ಅನುಸಂಧಾನದಲ್ಲಿ ಎಲ್ಲವನ್ನೂ ಸಂಪೂರ್ಣವಾಗಿ ಹೊರಗೆಳೆದು ತೋರಿದ, ಅಗತ್ಯವಿದ್ದಷ್ಟು ಅನುಭವಗಳಿಗೆ ಒಪ್ಪಿಕೊಂಡು ನಿಲುಕಿದ್ದು, ನಿಲುಕಿದ್ದರ ಕುರಿತು ಅಚ್ಚರಿಪಟ್ಟು ಬರೆದ ವಿಶಿಷ್ಟ ಲೇಖಕ. ತೇಜಸ್ವಿಯವರ ಬದುಕಿನ ಪ್ರಧಾನ ಅಂಶಗಳೆಂದರೆ, ಅವರಲ್ಲಿದ್ದ ಶೋಧ ಪ್ರವೃತ್ತಿ. ಬದುಕಿನ ಬಗೆಗಿದ್ದ ಬೆರಗು ಮತ್ತು ವಿಸ್ಮಯ. ತೇಜಸ್ವಿಯವರ ಬೆರಗು ವಿಸ್ಮಯ. ಅವರ ಎಲ್ಲ ಬಗೆಯ ಬರವಣಿಗೆಗಳಲ್ಲಿ ಈ ಅಂಶಗಳು ಎದ್ದು ಕಾಣುತ್ತವೆ. ಈ ಶೋಧ ಪ್ರವೃತ್ತಿಯಿಂದಲೇ ಅವರ ಕಾದಂಬರಿಗಳ ನಡೆಗೆ ವಿಶಿಷ್ಟತೆ ಇದೆ. ಅದಕ್ಕಿಂತ ಮಿಗಿಲಾಗಿ,

ಬದುಕಿನ ನಿಗೂಢ ಸತ್ಯಗಳನ್ನು ಹುಡುಕುವ ನಿರಂತರ ಪ್ರಕ್ರಿಯೆ ಅವರ ಕೃತಿಗಳಲ್ಲಿ ಸಾಧಿತವಾಗಿದೆ. ಅದು ಪ್ರಕೃತಿ ನಿಗೂಢದ ಶೋಧವಾಗಿಯೂ, ಪ್ರಕೃತಿಯ ಭಾಗವೇ ಆದ ಮಾನವ ಮನಸ್ಸುಗಳ ಶೋಧವಾಗಿಯೂ ರೂಪ ಪಡೆಯುವುದು ವಿಶೇಷವಾಗಿದೆ.

ಬದುಕಿನ ಬಗೆಗಿದ್ದ ಬೆರಗು ಮತ್ತು ವಿಸ್ಮಯಗಳು ತೇಜಸ್ವಿಯವರನ್ನು ಕನ್ನಡ ನಾಡಿನ ಅತ್ಯಂತ ಪ್ರಮುಖ ಪರಿಸರ ವಿಜ್ಞಾನಿಯನ್ನಾಗಿ ರೂಪಿಸಿವೆ. ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಪರಿಸರ ಶಾಸ್ತ್ರಗಳಂತಹ ಶಾಸ್ತ್ರಗಳನ್ನು ಓದಿ ಅವುಗಳಿಂದ ಪ್ರಭಾವಿತರಾದವರಲ್ಲ. ಬದುಕನ್ನು ನೋಡಿ ಅರಿತು ಈ ಭೂಮಿಯಲ್ಲಿರುವ ಪ್ರತಿಯೊಂದು ಜೀವಿಗೂ ಅಂದರೆ, ಕ್ರಿಮಿ ಕೀಟ ಸೇರಿದಂತೆ ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದೆ. ಒಂದರ ಬದುಕು ಮತ್ತೊಂದರ ಬದುಕಿನೊಡನೆ ಬೆಸೆದುಕೊಂಡಿದೆ. ಒಂದರ ಅಳಿವು ಮತ್ತೊಂದರ ಅಳಿವಿಗೆ ನಾಂದಿಯಾಗುತ್ತದೆ ಎಂಬ ಚಿರಂತನ ಸತ್ಯವನ್ನು ತಮ್ಮ ಬೆರಗುಗಣ್ಣುಗಳಿಂದ ಅನುಭವದಿಂದ ಕಂಡುಕೊಂಡವರು.

ಜುಗಾರಿಕ್ರಾಸ್ ೧೯೯೪ರಲ್ಲಿ ಪ್ರಕಟವಾಯಿತು. ಕುತೂಹಲ ಸಂಕೀರ್ಣತೆ ನಿಗೂಢತೆಯನ್ನು ಒಳಗೊಂಡ ವಿಶಿಷ್ಟ ಕಾದಂಬರಿ. ದೇವಪುರದ ಜೀವನಕ್ರಮದಲ್ಲಿ ಅಂತರ್ಗತವಾಗಿರುವ ಜೂಜುಕೋರುತನದ ರೂಪಕವಾದ ಜುಗಾರಿ ಕ್ರಾಸ್ ಕೇವಲ ನಾಲ್ಕು ರಸ್ತೆಗಳನ್ನು ಸಂಧಿಸುವ ಸ್ಥಳವಾಗದೇ ಒಂದು ಕಾಲಘಟ್ಟದ ಜೀವನ ಕ್ರಮವೇ ಆಗಿ ವಿಸ್ತರಿಸುವುದು ಕಾದಂಬರಿಯ ವೈಶಿಷ್ಟ್ಯ. ಇಲ್ಲಿನ ರಾಜಕೀಯ ಓಸಿ, ಲಾಟರಿ, ಏಲಕ್ಕಿ ವ್ಯಾಪಾರ, ದೋಣಿ ಹೊಳೆಯ ಕೆಂಪು ಕಲ್ಲು, ಗುರುರಾಜ ಕವಿಯ ಕಾವ್ಯ ಎಲ್ಲವೂ ಜುಗಾರಿಕ್ರಾಸ್‌ನ್ನು ಪಡೆದುಕೊಂಡಿದೆ. ಕೇವಲ ೨೪ ಗಂಟೆಗಳಲ್ಲಿ ನಡೆಯುವ ಘಟನಾವಳಿಗಳೇ ಇಡೀ ಕಾದಂಬರಿಯ ಭೌತಿಕ ಕಾಲದ ವಿಸ್ತರಣೆ, ಘಟನೆ, ನೆನಪು, ಪುರಾಣಗಳನ್ನು ಪಡೆದುಕೊಂಡು ವಿಸ್ತಾರದ ಹರವನ್ನು ಪಡೆದಿದೆ.

ಮಲೆನಾಡಿನ ಸುಂದರ ಚಿತ್ರಣಗಳು, ಮಹತ್ವದ ಈ ಕಾದಂಬರಿಯಲ್ಲಿ ಅಡಗಿದೆ. ಚಿದಂಬರ ರಹಸ್ಯ ಕಾದಂಬರಿಯ ಮುಂದುವರಿಕೆಯಂತೆ ಕಾಣುವ ಈ ಕಾದಂಬರಿ ಕಾಡಿನ ನಾಶದ ಹಿಂದಿರುವ ಒಳಸಂಚಿನ ಕರಾಳ ಮುಖವನ್ನು ಪರಿಚಯಿಸುತ್ತದೆ. ಜುಗಾರಿ ಕ್ರಾಸ್ ಎರಡು ಕಾರಣಗಳಿಂದ ನಮ್ಮ ಗಮನ ಸೆಳೆಯುತ್ತದೆ. ಮೊದಲನೆಯದು ಕಾದಂಬರಿಕಾರರು ಕೃತಿಗಳನ್ನೇ ಕಟ್ಟಿರುವ ಕ್ರಮ. ಎರಡನೆಯದು

ಪತ್ತೇದಾರಿ ಸಾಹಿತ್ಯದ ಕುತೂಹಲ. ಹಾಸ್ಯ ಸಾಹಿತ್ಯದ ವಿನೋದ ಶೈಲಿ ಹಾಗೂ ನೇರ ಅನುಭವ ಕಥನದ ಸರಳತೆ ಇವುಗಳನ್ನು ಕೃತಿಯ ರಚನೆಯಲ್ಲಿ ಸಮರ್ಥವಾಗಿ ನಿರೂಪಿಸಿದ್ದಾರೆ. ಇದು ನಿಜವಾಗಿಯೂ ಸಹ್ಯಾದ್ರಿ ಕಾಡುಗಳ ತಪ್ಪಲಿನಲ್ಲಿ ನಡೆಯುತ್ತಿರುವ ವಾಸ್ತವದ ಸಾಮಾಜಿಕ ಕಾದಂಬರಿ ಹಾಗೂ ಸಾಮಾಜಿಕ ವಿಷಾದಕರ ಸತ್ಯಗಳನ್ನು ಅನ್ವೇಷಿಸುವ ಪ್ರಯತ್ನವು ಹೌದು.

ಮಲೆನಾಡಿನ ದಟ್ಟ ಕಾಡಿನ ನಡುವೆ ನಾಲ್ಕಾರು ದಾರಿ ಕೂಡುವ ಒಂದು ಸರ್ಕಲ್ಲೇ **ಜುಗಾರಿ ಕ್ರಾಸ್**. ಆದರೆ, ಈಗ ಅದು ನಾಗರೀಕತೆಗೆ ಸಿಕ್ಕಿ ನಾನಾ ಕಾರಣಗಳಿಂದ ಜಗತ್ತಿನ ಅನೇಕ ಭಾಗಗಳಿಗೆ ಸಂಪರ್ಕ ಕಲ್ಪಿಸುವ ತಾಣವಾಗಿ ಜಾಗತೀಕರಣಗೊಂಡಿದೆ. ಸುತ್ತಮುತ್ತಲಿನ ಪರಿಸರದ ದೇವಪುರ, ಮೇದರಹಳ್ಳಿ ಇತ್ಯಾದಿ ಊರುಗಳ ಜನರ ಬದುಕು ಒಂದು ಕಾಲಕ್ಕೆ ಸರಳ ಹಾಗೂ ನಿರಾತಂಕದಿಂದ ಕೂಡಿತ್ತು. ಈಗ ಆತಂಕ, ತಲ್ಲಣ ಕೂಡಿ ಸಂಕೀರ್ಣವಾಗಿಬಿಟ್ಟಿದೆ. ಕೈ ಕಸುಬುಗಳೆಲ್ಲಾ ಮಾಯವಾಗಿ ಪ್ಲಾಸ್ಟಿಕ್ ಚೀಲದ ಕಾರಣದಿಂದ ಅವಸಾನದ ಹಾದಿ ಹಿಡಿದಿದೆ. ದೇವಪುರ ಒಂದು ಕಾಲಕ್ಕೆ ಏಲಕ್ಕಿ ವ್ಯಾಪಾರಕ್ಕೆ ಪ್ರಸಿದ್ಧ ಕೇಂದ್ರವಾಗಿತ್ತು. ಆದರೆ, ದೇವಪುರದ ಅದೃಷ್ಟವೋ, ದುರಾದೃಷ್ಟವೋ, ಆಧುನಿಕತೆಯ ಎಲ್ಲ ಸೌಲಭ್ಯಗಳು ನಿರ್ಮಾಣವಾದವು. ಫೋನ್ ಬಂದ ನಂತರ ಅನೇಕ ರೀತಿಯ ಕುತೂಹಲಗಳಿಗೆ ಎಡೆಮಾಡಿಕೊಟ್ಟಿತು. ಅದೃಶ್ಯ ಬಾಸ್ ಇಲ್ಲಿನ ನಿಯಂತ್ರಕ. ಅಲ್ಲಿಯ ಜನ ತಮ್ಮ ಜೀವನವನ್ನು ಹಣೆ ಬರಹವನ್ನು ಅಮೂರ್ತ ದೈವಕ್ಕೆ ಒಪ್ಪಿಸಿಕೊಂಡಿದ್ದಾರೆ. ದೇವಪುರದ ಜನರ ಆಧ್ಯಾತ್ಮಿಕತೆಯ ಅಮೂರ್ತತೆ ಮತ್ತು ಭೂಗತ ಜಗತ್ತಿನ ಅಮೂರ್ತತೆ ಒಂದೇ ನಾಣ್ಯದ ಎರಡು ಮುಖಗಳಂತೆ ಆಗಿದೆ. ಸಿದ್ದಪ್ಪ ಇದ್ದಕ್ಕಿದ್ದಂತೆ ಕಾಣೆಯಾಗುವುದು, ಮೂಕಿ ದ್ಯಾವಮ್ಮನ ಗಂಡ ಹುಚ್ಚನಾಗುವುದು, ರಾಮಾನುಜ ಕೊಲೆಯಾಗುವುದು, ಸುರಂಗದಲ್ಲಿ ಕುಂಟರಾಮ ತಿರುಗುವುದು ಎಲ್ಲ ನಿಗೂಢತೆಯಿಂದ ಕೂಡಿದೆ. ಇಂಥ ಅಮೂರ್ತ ಜಾಲವನ್ನು ಬೇಧಿಸಲು ಹೊರಟಿರುವವರು ಹುಚ್ಚರಾಗುತ್ತಾರೆ. ಇಲ್ಲವೆ, ನಾಮಾವಶೇಷವಾಗುತ್ತಾರೆ. ಇಂತ ಪರಿಸರದಲ್ಲಿ ಸತ್ಯದ ಹುಡುಕಾಟಕ್ಕೆ ಹೊರಟ ಗೌರಿ ಮತ್ತು ಸುರೇಶ ಅನೇಕ ಸಂಕಟಗಳನ್ನು ಸಂದಿಗ್ಧತೆಯನ್ನು ಎದುರಿಸುತ್ತಾರೆ.

ಒಂದು ದಿನ ಸುರೇಶ ಮತ್ತು ಗೌರಿ ಯಾಲಕ್ಕಿ ಮಾರಲೆಂದು ದೇವಪುರಕ್ಕೆ ಹೋಗಲು ಜುಗಾರಿಕ್ರಾಸ್‌ಗೆ ಬರುತ್ತಾರೆ. ಖುದ್ದೂಸ್ ಎಕ್ಸ್‌ಪ್ರೆಸ್ ಹತ್ತಿ ಮೇದರಹಳ್ಳಿ

ದಾಟಿದಾಗ ಇಬ್ಬರು ಅಪರಿಚಿತ ಪ್ಯಾಂಟುಧಾರಿಗಳು ಬಸ್ಸಿಗೆ ಹತ್ತುತ್ತಾರೆ. ದೌಲತರಾಮ ಮತ್ತು ಕರುಣಾಕರ ಕುಟ್ಟಿ ಎಂಬಿಬ್ಬರು ೩೭ನೇ ಮೈಲಿ ಕಲ್ಲಿನ ಹತ್ತಿರದ ಮಾವಿನ ಮರದ ಪಕ್ಕದಲ್ಲಿದ್ದ ಲಂಟಾನದ ಪೊದೆಯಲ್ಲಿ ಬಿಳಿಯ ಪ್ಲಾಸ್ಟಿಕ್‌ನಲ್ಲಿ ಸುತ್ತಿಟ್ಟಿದ್ದ ಒಂದು ಪ್ಯಾಕೆಟ್ ಒಯ್ಯುವ ಸಲುವಾಗಿ ಬರುತ್ತಾರೆ. ೩೭ನೇ ಮೈಲಿಕಲ್ಲಿನ ಸಮೀಪ ದ್ಯಾವಮ್ಮನ ಮಗಳು ಹೋಗಿ ಬರುವ ವಾಹನಗಳಿಗೆಲ್ಲಾ ಹೂವು ಮಾರುತ್ತಿರುತ್ತಾಳೆ. ಇವಳನ್ನು ನೋಡಿದ ದೌಲತರಾಮ ಮತ್ತು ಕರುಣಾಕರಕುಟ್ಟಿಯವರ ಮನಸ್ಸಿನಲ್ಲಿ ತಳಮಳ ಉಂಟಾಗುತ್ತದೆ. ಬಹಳ ಹೊತ್ತು ಕಾಯುತ್ತಿದ್ದರಿಂದ ಸಹನೆಯು ಮೀರುತ್ತದೆ. ದೌಲತರಾಮ ಒಂದು ನೋಟು ತೆಗೆದು ಹುಡುಗಿಗೆ ಕೊಟ್ಟು ಕೈಲಿದ್ದ ಹೂವುಗಳನ್ನು ಕಿತ್ತುಕೊಳ್ಳುತ್ತಾನೆ. ನಂತರ ಪ್ಯಾಕೆಟನ್ನು ತೆಗೆದುಕೊಂಡು ಕಾರಿನಲ್ಲಿ ಕುಳಿತುಕೊಳ್ಳುತ್ತಾನೆ. ಕಾರನ್ನು ತೆಗೆದುಕೊಂಡು ಹೋಗುವಾಗ ಪೊಲೀಸ್ ಜೀಪೊಂದು ಇವರನ್ನು ದಾಟಿ ಹೋಗುತ್ತದೆ. ಈ ಕಾರು ಕಣ್ಣಾನೂರಿನಿಂದ ಕದ್ದುತಂದ ಕಾರಾಗಿರುತ್ತದೆ. ಇಂತಹ ಕಾರಿನಲ್ಲಿ ಹೋಗುವುದು ಅಪಾಯವೆನಿಸಿ, ಕಾರನ್ನು ತಿರುವಿನಲ್ಲಿ ಬಿಟ್ಟು ಬಿಟ್ಟು ದೇವಪುರವನ್ನು ತಲುಪಿ, ಖುದ್ದೂಸ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣ ಬೆಳೆಸುತ್ತಾರೆ.

ಗೌರಿ ಇವರಿಬ್ಬರನ್ನೂ ನೋಡಿದಾಗ ಅವಳಲ್ಲಿ ಅನುಮಾನ ಬರುತ್ತದೆ. ಅಷ್ಟರಲ್ಲಿ ಪೊಲೀಸ್ ಜೀಪೊಂದು ಮುಂದೆ ಹೋದಾಗ ಸೂಕ್ಷ್ಮವಾಗಿ ನೋಡುತ್ತಿದ್ದ ಗೌರಿಗೆ ಅವರ ಚಲನವಲನಗಳ ಬಗ್ಗೆ ಅನುಮಾನ ಮೂಡುತ್ತದೆ. ತಾವು ತಂದ ಪ್ಯಾಕೆಟ್ಟಿನಲ್ಲಿ ನಿಜವಾಗಿ ಏನಿದೆ ಎಂಬ ಚಿಂತೆ ಅವರನ್ನು ಕಾಡುತ್ತದೆ. ಪೊಲೀಸರ ಕೈಗೆ ಸಿಕ್ಕರೆ ಸತ್ತ ಹಾಗೆಯೇ ಎಂದು ತಿಳಿದು ತಪ್ಪಿಸಿಕೊಂಡು ಹೋಗಲು ಯೋಚಿಸುತ್ತಾರೆ. ಅಲ್ಲಿ ಪೊಲೀಸ್ ಜೀಪ್ ನಿಂತಿರುವುದು ಕಾಣುತ್ತದೆ. ಅಷ್ಟರಲ್ಲಿ ಬಸ್ಸಿನ ಓಲಾಟದಲ್ಲಿ ಕೊಂಚ ಜರುಗಿದವನಂತೆ ಸುರೇಶನ ಕಡೆಗೆ ಜರುಗಿ ಏಲಕ್ಕಿ ಚೀಲದ ಹಗ್ಗವನ್ನು ಬಿಚ್ಚಿ ಕುಟ್ಟಿ ತಂದಿದ್ದ ಪ್ಯಾಕೆಟನ್ನು ಏಲಕ್ಕಿ ಮೂಟೆಯಲ್ಲಿ ಹಾಕುತ್ತಾನೆ. ಅನಂತರ ಚೀಲ ಅದೇ ರೀತಿ ಕಟ್ಟಿ ಯಾರಿಗೂ ಗೊತ್ತಾಗದಂತೆ ನೈಸರ್ಗಿಕ ಕ್ರಿಯೆ ಮುಗಿಸಲೆಂಬಂತೆ ಹೊರಟು ಹೋಗುತ್ತಾರೆ.

ನಂತರ ರಾಯಚೂರು ಕಡೆಯ ಬೊಳಮ್ಮನೆಂಬ ಮುದುಕಿ ವಾಂತಿ ಮಾಡಿಕೊಳ್ಳುತ್ತಾಳೆ. ಇದನ್ನು ಕಂಡು ಎಲ್ಲರೂ ಓಡಿ ಹೋಗುತ್ತಾರೆ. ಆ ವೇಳೆಗೆ ದೌಲತರಾಮ ಮತ್ತು ಕರುಣಾಕರಕುಟ್ಟಿ ಮರಳಿ ಬಂದಾಗ ಬಸ್ಸಿಗೆ ಬಸ್ಸೇ

ಖಾಲಿಯಾಗಿರುತ್ತದೆ. ಏಲಕ್ಕಿ ಮೂಟೆ ಹೊತ್ತ ಸುರೇಶ ಮತ್ತು ಗೌರಿ ಅಬ್ಬಾಸಾಲಿಯ ವಿನಂತಿಯ ಮೇರೆಗೆ ಅವನ ಅಂಗಡಿಯ ಕಡೆ ಕಾಫಿ ಕುಡಿಯಲು ಹೋದರು. ದೌಲತರಾಮ, ಕುಟ್ಟಿ ತಮಗೆ ಪ್ಯಾಕೆಟ್ ತರಲು ಹೇಳಿದ ಲಾಟರಿ ಟಿಕೇಟಿನ ಶಾಸ್ತ್ರಿಯ ಹತ್ತಿರ ಬಂದರು. ಕುಟ್ಟಿಗೆ ಶಾಸ್ತ್ರಿಯೇ ಪೊಲೀಸರಿಗೆ ಸೂಚನೆಯನ್ನು ಕೊಟ್ಟಿದ್ದಾನೆ ಎಂಬ ಅನುಮಾನವು ಮೂಡಿತು. ನಿಜಕ್ಕೂ ಶಾಸ್ತ್ರಿ ಹಾಗೆ ಮಾಡಿರಲಿಲ್ಲ. ಈಗ ಮೂರು ಜನರು ಸೇರಿ ಏಲಕ್ಕಿ ಮೂಟೆ ಹುಡುಕಲು ಮಂಡಿಗಳತ್ತ ಹೊರಟರು.

ಹುಚ್ಚೇಗೌಡರ ಮಂಡಿಯಲ್ಲಿ ಕೈಲಾಸ್ ಬಾರ್‌ನ ಕುನ್ನಿ ಸುರೇಶನ ಏಲಕ್ಕಿಗೆ ಒಂದು ಕಿಲೋಗೆ ಒಂದು ಸಾವಿರ ರೂಪಾಯಿ ಎಂದು ಕೂಗಿ ಐವತ್ಮೂರು ಸಾವಿರ ರೂಪಾಯಿಗೆ ಹರಾಜು ಪಡೆದ. ಗೌರಿ ಸುರೇಶ ಕುನ್ನಿಯೊಂದಿಗೆ ದೇವಪುರಕ್ಕೆ ಶ್ರೀಮಂತ ಕುಳವೆಂದು ಹೆಸರಾಗಿದ್ದ ಜೀವನಲಾಲ್‌ನ ಜುವೆಲರಿ ಮಾರ್ಕೆಟಿಗೆ ಬಂದರು. ಅಲ್ಲಿ ಸುರೇಶನಿಗೆ ಅರವತ್ತು ಸಾವಿರ ರೂಪಾಯಿಯ ಚೆಕ್ಕು ದೊರಕಿತು. ಆದರೆ, ಅದರಲ್ಲಿ ನಿಜವಾಗಿ ಬರದದ್ದು ಒಂದು ಲಕ್ಷ ಅರವತ್ತು ಸಾವಿರ. ಸುರೇಶ ಇದನ್ನು ಗಮನಿಸಿರಲಿಲ್ಲ. ಗಮನಿಸಿದ್ದರೆ,ತನಗೆ ಅರಿವಿಲ್ಲದಂತೆ ತಾನು ಕಾಲಿಟ್ಟಿದ್ದ ಜಟಿಲ ರಹಸ್ಯ ಒಂದರ ಬಗ್ಗೆ ಅರಿವಾಗುತ್ತಿತ್ತು. ಚೆಕ್ ಮುರಿಸಿ, ನಗದು ಪಡೆಯಲು ಏಜೆಂಟರ ಬಳಿಗೆ ಹೋದರು. ಮನ್ಮಥ ಬೀಡಾ ಸ್ಟಾಲ್ ಮಾಲೀಕ ಶೇಷಪ್ಪ ದೇವಪುರದ ಚೆಕ್ಕುಗಳಿಗೆಲ್ಲ ಕಮಿಷನ್ ಏಜೆಂಟ್ ಆಗಿದ್ದ. ಸುರೇಶ ನೀಡಿದ ಚೆಕ್ಕನ್ನು ಕಂಡು ಶೇಷಪ್ಪ ಗಾಬರಿಗೊಂಡ. ಆಗ ಶೇಷಪ್ಪ ದಂಪತಿಗಳಿಗೆ ಹಿಂದಿನ ಕತೆಯನ್ನು ಸವಿವರವಾಗಿ ವಿವರಿಸಿದ. ನಂತರ ಶೇಷಪ್ಪ ಹಣವನ್ನು ನೀಡಿದ. ಸುರೇಶ ಮತ್ತು ಗೌರಿ ಅವನು ಕೊಟ್ಟ ಹಣ ಎಷ್ಟಿದೆ ಎಂಬುದನ್ನೂ ಎಣಿಸಲಿಕ್ಕೆ ಹೋಗದೆ ಮತ್ತೆ ತಪ್ಪು ಮಾಡಿದರು.

ಸ್ನಾಕ್‌ಬಾರಿನ ಫ್ಯಾಮಿಲಿ ರೂಮ್‌ನಲ್ಲಿ ಕುಳಿತು ಗೌರಿ ಹಣ ಎಣಿಸಿ, ನೋಡಿದರೆ, ಅದು ಒಂದು ಲಕ್ಷದ ಐವತ್ತಾರು ಸಾವಿರದ ಎಂಟುನೂರು ರೂಪಾಯಿ ಇರುವುದನ್ನು ಕಂಡು ಇಬ್ಬರು ಗಾಬರಿಗೊಂಡರು. ಅರ್ಥವಾಗದ ಪ್ರಶ್ನೆಯೊಂದು ಮೂಡಿತು. ಶೇಷಪ್ಪನೊಂದಿಗೆ ಈ ಕುರಿತು ಚರ್ಚಿಸಲು ಹೋದಾಗ ಅವನಿಗೆ ಯಾರೋ ಚೂರಿ ಹಾಕಿದ್ದಾರೆಂದು ತಿಳಿಯಿತು. ವಿಚಿತ್ರ ಮಾನಸಿಕ ತೊಳಲಾಟದಲ್ಲಿ ಬಿದ್ದರು. ತಮ್ಮ ಏಲಕ್ಕಿ ಮೂಟೆಗೆ ಎರಡೂವರೆ ಕೆ.ಜಿ. ತೂಕ ಹೆಚ್ಚು ಬಂದಿದ್ದರ ಹಿಂದೆ ಯಾವುದೋ ಕೈವಾಡವಿರುವ ರಹಸ್ಯದ ಕಲ್ಪನೆ ಮನದಲ್ಲಿ ಬಂದಿತು. ಶಾಪಿಂಗ್

ಮುಗಿಸಿ, ಬೆನ್ನು ಹತ್ತಿದವರನ್ನು ಗೊಂದಲಕ್ಕೆ ಸಿಲುಕಿಸುವ ದೃಷ್ಟಿಯಿಂದ ಜುಗಾರಿಕ್ರಾಸ್‌ಗೆ ಹೋಗುವ ಬಸ್ಸನ್ನು ಹತ್ತದೆ, ರೈಲಿನಲ್ಲಿ ಪ್ರಯಾಣ ಬೆಳೆಸಿದರು. ರೈಲು ಮುನ್ನಡೆಯುತ್ತಿದ್ದಾಗ ಯಾರೋ ರೈಲಿನ ಬಾಗಿಲನ್ನು ತೆರೆಯುವ ಪ್ರಯತ್ನದ ದಡಬಡ ಶಬ್ದವಾಯಿತು. ಬಾಗಿಲು ತೆರೆದೊಡನೆ ಸುರೇಶನಿಗೆ ಆಶ್ಚರ್ಯವಾಯಿತು. ರಾಜಪ್ಪ ಹೆಗಲಿಗೆ ಚೀಲ ಹಾಕಿಕೊಂಡು ಒಳಗೆ ಬಂದ. ರಾಜಪ್ಪನ ಹತ್ತಿರ ಗುರುರಾಜ ಪಂಡಿತ ಬರೆದ ಕಾವ್ಯವೊಂದಿತ್ತು. ಕಾವ್ಯದ ಎಲ್ಲ ವಿವರವನ್ನೂ ದಂಪತಿಗಳು ಕೇಳಿದರು. ಸುರೇಶನಿಗೆ ಈ ಹಿಂದೆ ಓದಿದ್ದ ಜೀರಾಜ ಕವಿಯ ನೆನಪಾಗುತ್ತದೆ. ಈ ಕಾವ್ಯ ಓದುತ್ತಾ ಹೋದಂತೆ ಅದು ಕೇವಲ ಉತ್ತುಂಗ ರಾಜ ಜೈನಮುನಿಯು ಕೈವಲ್ಯ ಪದವಿ ಪಡೆದ ಕಥೆಯಾಗಿರದೆ, ಅದರೊಳಗೆ ಏನೂ ನಿಗೂಢ ಅರ್ಥ ಇದೆ ಎಂದೆನಿಸುತ್ತದೆ. ನರ್ತಕಿಯ ಹೆಸರು ಇರಬೇಕಾದ ಕಡೆ ನದಿಯ ಹೆಸರು ಇರಬೇಕಾಗಿತ್ತು. ಆದರೆ, ಆ ಹೆಸರಿರಬೇಕಾದ ಕಡೆ ಹುಳ ತಿಂದಿರುವ ಜಾಗವಿತ್ತು. ಇದು ಉದ್ದೇಶಪೂರ್ವಕ ಎನಿಸಿ ರಾಜಪ್ಪನ ಮೇಲೆ ಅನುಮಾನ ಶುರುವಾಗುತ್ತದೆ. ಬಹಳಷ್ಟು ಯೋಚಿಸಿದ ಮೇಲೆ ರತ್ನಮಾಲಾ ಎಂಬ ಎರಡು ಅರ್ಥವಿರುವ ಹೆಸರು ದೊರೆಯುತ್ತದೆ. ಈ ಹೆಸರಿನಲ್ಲಿ ಓದುತ್ತಾ ಹೋದಂತೆ ಅದು ಕಾವ್ಯದ ಧಾಟಿಯಲ್ಲಿ ಬರೆದ ರಹಸ್ಯ ದಾಖಲೆ ಎನಿಸುತ್ತದೆ. ಕಾವ್ಯ ಒಂದರ್ಥದಲ್ಲಿ ಉತ್ತುಂಗ ರಾಜನಿಗೆ ರತ್ನಮಾಲಾ ನರ್ತಕಿಯು ಕೆಂಪು ಮಾಣಿಕ್ಯವನ್ನು ಕೊಟ್ಟ ಕಥೆಯಾದರೆ, ಇನ್ನೊಂದು ಅರ್ಥದಲ್ಲಿ ರತ್ನಮಾಲಾ ದೋಣಿಹೊಳೆಯ ಮೂಲದಲ್ಲೆಲ್ಲೋ ಸಹ್ಯಾದ್ರಿಯ ಶೃಂಗ ಶಿಲೆಯಲ್ಲಿ ಕೆಂಪು ರತ್ನ ಹೊಳೆಯುವ ಜಾಗವನ್ನು ನಿರ್ಧರಿಸುವ ನೀಲ ನಕ್ಷೆಯಾಗಿರುತ್ತದೆ. ಅರಿವಿಲ್ಲದೆ ಕೆಂಪು ರತ್ನವನ್ನು ಕಂಡು ಹಿಡಿಯುವುದು ಅಸಾಧ್ಯವೆನಿಸಿತು. ನಂತರ ಮಾತನಾಡುತ್ತಾ ರಾಜಪ್ಪ ನನಗೆ ನಿಮ್ಮ ಬಳಿಯಿರುವ ಹಣವನ್ನೆಲ್ಲ ನೀಡಿ ಈ ಕಾವ್ಯವನ್ನು ತೆಗೆದುಕೋ ಎಂದು ಹೇಳುತ್ತಾನೆ. ಗೌರಿ ತಾನು ಮಾರಿದ ಏಲಕ್ಕಿಯ ಹಣದಿಂದ ರಾಜಪ್ಪನಲ್ಲಿದ್ದ ಗುರುರಾಜ ಪಂಡಿತನ ದ್ವಿ ಸಂಧಾನ ಕಾವ್ಯದ ಹಸ್ತಪ್ರತಿಯನ್ನು ಕೊಂಡುಕೊಳ್ಳುತ್ತಾಳೆ. ಹಣ ಆಸ್ತಿಯ ಬಗ್ಗೆ ಅವಳಲ್ಲಿ ಆಸೆಯಿಲ್ಲ. ಆದರೆ, ನಿಗೂಢತೆಯನ್ನು ಕಂಡು ಹಿಡಿಯುವುದು ಅವಳ ಕುತೂಹಲದಲ್ಲಿ ಒಂದು. ನಾಗರೀಕ ಜಗತ್ತಿನಲ್ಲಿ ನಡೆಯುವ ಶಿಕಾರಿಯನ್ನು ಕಾದಂಬರಿ ನಿರೂಪಿಸುತ್ತಾ, ಕೆಡುಕಿನ ನಿಗೂಢತೆಯನ್ನು ಅನಾವರಣಗೊಳಿಸುತ್ತದೆ. ರಹಸ್ಯಮಯವಾಗಿ ನಡೆಯುವ ಅಪರಾಧ ಕತೆ ಒಂದೆಡೆ ಇದ್ದರೆ ಪತ್ತೆದಾರ ಅದನ್ನು ಪತ್ತೆ ಹಚ್ಚಿ ಬಯಲು ಮಾಡುವ ಇನ್ನೊಂದು ಕತೆ ಇಲ್ಲಿದೆ.

ರೈಲು ಕಮರಿ ಸ್ಟೇಷನ್‌ಗೆ ಬಂದಾಗ ಕಾಫಿ ಕುಡಿಯುತ್ತಿರುವಾಗ ತಮ್ಮನ್ನು ಯಾರೋ ಹಿಂಬಾಲಿಸುತ್ತಿದ್ದಾರೆ ಎನಿಸತೊಡಗಿತು. ಸುರಂಗ ಬಂದೊಡನೆ ಸುರೇಶ ಮತ್ತು ಗೌರಿ ರೈಲಿನಿಂದ ಜಿಗಿದು ಕೆಳಗೆ ಬೀಳುತ್ತಾರೆ. ಆ ಕತ್ತಲಲ್ಲಿ ಒಬ್ಬರಿಗೊಬ್ಬರು ಕಾಣದಷ್ಟು ಕತ್ತಲಾಗಿರುತ್ತದೆ. ಸುರಂಗದಲ್ಲಿ ಹಳಿಯೊಂದಿಗೆ ನಡೆಯುತ್ತಿದ್ದಾಗ ಕುಂಟ ರಾಮನ ಭೇಟಿಯಾಗುತ್ತದೆ. ಅವನು ಭೂಗದ ಜಗತ್ತಿನ ಅಪಾಯಗಳನ್ನು ಹಾಗೂ ತಾನು ಪಾರಾಗಿ ಬಂದ ಅನುಭವವನ್ನೂ ಹೇಳುತ್ತಾನೆ. ಕೆಂಪು ರತ್ನ ಇರುವ ಜಾಗಕ್ಕೂ ಕರೆದೊಯ್ಯುತ್ತಾನೆ. ಅಲ್ಲಿಂದ ಸುರೇಶ ಮತ್ತು ಗೌರಿ ಸುರಂಗದಿಂದ ಹೊರಗೆ ಬಂದು ಒಳಹಾದಿ ಹಿಡಿದು ಮುಖ್ಯ ರಸ್ತೆಗೆ ಬರುತ್ತಾರೆ. ಆ ವೇಳೆಗೆ ಮೂವರು ಮುಸುಕುಧಾರಿಗಳು ಸುರೇಶ ಮತ್ತು ಗೌರಿಯನ್ನು ಹಿಡಿದುಕೊಳ್ಳುತ್ತಾರೆ. ಕೈಯಲ್ಲಿದ್ದ ಪ್ಲಾಸ್ಟಿಕ್ ಚೀಲವನ್ನು ಕಸಿದುಕೊಳ್ಳುತ್ತಾರೆ. ಅರವತ್ತು ಸಾವಿರ ಕೊಡಬೇಕೆಂದು ಕೇಳಿದಾಗ, ಅಷ್ಟು ಹಣವನ್ನು ಕೊಟ್ಟು ಈ ಪುಸ್ತಕವನ್ನು ತೆಗೆದುಕೊಂಡೆವು ಎಂದು ಹೇಳುತ್ತಾನೆ. ಮುಸುಕುಧಾರಿಗಳು ಹಣವಿಲ್ಲದ ಸಿಟ್ಟಿಗೆ ಪ್ಲಾಸ್ಟಿಕ್ ಚೀಲವನ್ನು ಹೊಳೆಯಲ್ಲಿ ಎಸೆಯುತ್ತಾರೆ. ಅಲ್ಲಿಂದ ಅವರು ಹೊರಟುಹೋಗುತ್ತಾರೆ. ಮುಸುಕುಧಾರಿಗಳು ಹೋಗುತ್ತಿದ್ದಂತೆ ರಾಜಪ್ಪ ಸುರೇಶ ಮತ್ತು ಗೌರಿ ಇದ್ದಲ್ಲಿಗೆ ಬರುತ್ತಾನೆ. ಖಾಸಗಿ ಪತ್ತೆದಾರನಾದ ರಾಜಪ್ಪ ಖೋಟಾನೋಟು ಮಾಡುವ ಜೀವನಲಾಲ್‌ನನ್ನು ಹಿಡಿಯಲು ಹೋಗಿ ಶೇಷಪ್ಪನ ಪರಿಚಯ ಮಾಡಿಕೊಂಡಿರುತ್ತಾನೆ. ಗೌರಿ ಮತ್ತು ಸುರೇಶನನ್ನು ರಕ್ಷಿಸಲು ಅವರ ಹಿಂದೆಯೇ ಬಂದಿರುತ್ತಾನೆ. ನಿಜವಾದ ಹಸ್ತಪ್ರತಿ ಪತ್ತೆ ಹಚ್ಚುತ್ತೇನೆ. ಅಲ್ಲಿಯವರೆಗೆ ಆ ನದಿಯ ಹೆಸರು ಮರೆಯಬಾರದು ಎಂದು ಹೇಳುತ್ತಾನೆ. ಆ ವೇಳೆಗೆ ಕ್ಯಾಪ್ಟನ್ ಖುದ್ದೂಸ್ ಎಕ್ಸ್‌ಪ್ರೆಸ್ ಬರುತ್ತದೆ. ಬಸ್ಸನ್ನು ಹತ್ತಿ ಊರಿನ ಕಡೆಗೆ ಪ್ರಯಾಣ ಬೆಳೆಸುತ್ತಾರೆ.

ಜಾಗತೀಕರಣ ಪ್ರಭಾವದಿಂದ ಊರು, ಊರಿನ ಜನರನ್ನು, ಊರಿನ ಕಸಬನ್ನು ಬಲಿ ತೆಗೆದುಕೊಂಡಿತು. ಜಾಗತೀಕರಣ ಎಂಬ ಮೋಹವು ಜಗತ್ತಿನ ಮೇಲೆ ಬೀರುವ ವಿಶ್ವರೂಪದ ಪರಿಣಾಮವನ್ನು ಕಾದಂಬರಿಕಾರರು ವಿಷಾದದಿಂದ ನಿರೂಪಿಸುತ್ತಾರೆ. ನೆಮ್ಮದಿಯ ಬದುಕಿನ ಸಾಧ್ಯತೆಗಳನ್ನು ಸೂಕ್ಷ್ಮತರದ ಶೋಧನೆಗೂ ಒಳಗುಮಾಡಿ ಈ ಮೂಲಕ ಕಾಡನ್ನು ಆವರಿಸುವ ಭೂಗತ ಲೋಕವೊಂದು ಅನಾವರಣಗೊಳ್ಳುತ್ತದೆ.

ತೇಜಸ್ವಿಯವರ ಕಥೆ ಕಾದಂಬರಿಗಳನ್ನು ಅಭ್ಯಾಸ ಮಾಡಿದಾಗ ಅವರ ಆಸಕ್ತಿ ವ್ಯಕ್ತಿಯಿಂದ ಸಮಾಜಕ್ಕೆ ಮನುಷ್ಯ ಸಮಾಜದಿಂದ ಪರಿಸರಕ್ಕೆ ಚಲಿಸುವುದನ್ನು ಕಾಣುತ್ತೇವೆ. ಈ ಮೂರು ಒಂದನ್ನೊಂದು ಬಿಟ್ಟಿಲ್ಲ. ಈ ಮೂರು ಕಾಲದಿಂದ ಕಾಲಕ್ಕೆ ವ್ಯತ್ಯಾಸವನ್ನು ಪಡೆದುಕೊಂಡಿವೆ. ಅವರ ಬರವಣಿಗೆಯ ರಚನಾ ವಿನ್ಯಾಸದಲ್ಲೂ ಕೆಲವು ಬದಲಾವಣೆ ಪಡೆದುಕೊಂಡಿವೆ. ಜುಗಾರಿಕ್ರಾಸ್ ಕಾದಂಬರಿಯ ಮುಖ್ಯ ಸಂಗತಿಯೆಂದರೆ ಇಡೀ ಮನುಷ್ಯ ಸಮಾಜ ಇಡೀ ವಿಶ್ವ ವ್ಯವಸ್ಥೆಯೊಂದಿಗೆ ತಳಕು ಹಾಕಿಕೊಂಡಿರುವಂತದ್ದು. ಈ ಕಾದಂಬರಿಯಲ್ಲಿ ಕಾದಂಬರಿಕಾರರು ವಿಶ್ವವನ್ನು ಪರಿಭಾವಿಸುವ ಕ್ರಮವೇ ಆಗಿದೆ. ಎಲ್ಲ ಘಟನೆಗಳು ಕೇವಲ ಇಪತ್ನಾಲ್ಕು ಘಂಟೆಗಳ ಅವಧಿಯಲ್ಲಿ ಸಂಭವಿಸಿದ ಹಾಗೆ ಕಂಡರೂ, ಇಲ್ಲಿನ ಸನ್ನಿವೇಷ, ಸಂದರ್ಭಗಳು ನಮ್ಮ ಊಹೆ ತರ್ಕಗಳಿಗೆ ಮೀರಿದ ಸಾಧ್ಯತೆಗಳಿವೆ. ಯಾರು ಯಾರನ್ನು ನಿಯಂತ್ರಿಸುತ್ತಿದ್ದಾರೆ? ಎಲ್ಲರನ್ನೂ ನಿಯಂತ್ರಿಸುವ ಒಬ್ಬ ಬಾಸ್ ಇದ್ದಾರೆಯೇ? ಈ ಎಲ್ಲ ಚಟುವಟಿಕೆಗಳ ಆದಿ ಯಾವುದು, ಅಂತ್ಯ ಯಾವ ಕಡೆಗೆ! ಮುಂತಾದ ಅಂಶಗಳು ನಮ್ಮ ಗಮನಕ್ಕೆ ಬರುತ್ತವೆ. ಒಮ್ಮೆ ಶೋಧ ಪ್ರಾರಂಭವಾದರೆ, ಅದು ತಮ್ಮನ್ನು ಎಲ್ಲಿಯವರೆಗೆ ಕರೆದುಕೊಂಡು ಹೋಗಬಹುದು ಎಂಬ ತಾತ್ವಿಕ ಪ್ರಶ್ನೆ ಹಾಗೂ ನಿಗೂಢತೆ ಇದೆ.

ಜುಗಾರಿಕ್ರಾಸ್‌ನಲ್ಲಿ ಹಲವು ಬಗೆಯ ಪತ್ತೇದಾರಿಕೆಯೂ, ರೋಚಕವೆನಿಸುವ ಶೋಧಗಳು ಇವೆ. ಬಗೆದಷ್ಟೂ ಸಂಕೀರ್ಣವಾದ ಜೀವನಜಾಲ ಇಲ್ಲಿದೆ. ಮನುಷ್ಯನ ನಿಯಂತ್ರಿಸಲಾರದ, ಮನುಷ್ಯನ ಸದ್ಯದ ತಿಳಿವಳಿಕೆಯ ಆಚೆಗೂ ಇರುವ ಆಯಾಮಗಳ ಬಗ್ಗೆ ಒಂದು ಬಗೆಯ ಬೆರಗು, ವಿಸ್ಮಯ, ಕುತೂಹಲವನ್ನೊಳಗೊಂಡಿದೆ. ಜುಗಾರಿಕ್ರಾಸ್‌ನಲ್ಲಿ ಇವತ್ತಿನ ನಾಗರೀಕತೆಯ ಎಲ್ಲ ಮುಖ್ಯ ಸಂಕೀರ್ಣ ಪ್ರಶ್ನೆಗಳ ಜಿಜ್ಞಾಸೆಯಿದೆ. ಅಣ್ಣನ ನೆನಪುವಿನಲ್ಲಿ ತೇಜಸ್ವಿಯವರು ಲ್ಯಾಟಿನ್ ಕಾದಂಬರಿಕಾರ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವಿಜ್‌ನ One hundred years of Solitude ಕಾದಂಬರಿಯನ್ನು ವಿಶೇಷವಾಗಿ ಉಲ್ಲೇಖಿಸುತ್ತಾರೆ.[7] ತೇಜಸ್ವಿಯವರೇ ಹೇಳುವಂತೆ ಮಲೆಗಳಲ್ಲಿ ಮದುಮಗಳು ಕನ್ನಡದಲ್ಲೆಲ್ಲೂ ಕಾಣದ ಅಸಾಧಾರಣ ಬರವಣಿಗೆ. ಮಹಾಕಾವ್ಯಗಳ ಅಂತಃಸತ್ವವನ್ನು ಸಮರ್ಥವಾಗಿ ಪ್ರತಿನಿಧಿಸುವಂಥ ಮಾಧ್ಯಮವಾಗಿ ಕಾದಂಬರಿ ಪ್ರಕಾರವನ್ನು ಅದರಲ್ಲಿ ನಿರೂಪಿಸಿದ್ದಾರೆಂದು ನಿರ್ವಿವಾದವಾಗಿ ಹೇಳಬಹುದು. ಕುವೆಂಪು ಅವರಿಗೆ ಅಂದಿನ ಮಲೆನಾಡು, ಮಲೆಗಳಲ್ಲಿ ಮದುಮಗಳು

ಕಾದಂಬರಿಯ ಒಳವಾಸ್ತವದ ನಿರೂಪಣೆಗೆ ಕಾರಣವಾಗಿದ್ದರೆ, ತೇಜಸ್ವಿಯವರ ಜುಗಾರಿಕ್ರಾಸ್ ಇಂದಿನ ನವ ಮಲೆನಾಡಿನ ಒಳವಿನ್ಯಾಸವನ್ನು ನಿರ್ದೇಶಿಸುತ್ತದೆ.

ಒಂದು ಸರ್ಕಲ್ ಎಂಬ ವಾಸ್ತವವಾದೀ ನೆಲೆಯ ಭೌಗೋಳಿಕ ವಿವರಣೆಯ ಮೊದಲ ವಾಕ್ಯದಿಂದ ಕಾದಂಬರಿ ಪ್ರಾರಂಭವಾದರೂ ಬಹುಬೇಗ ತನ್ನ ಸದ್ಯದ ವಸ್ತು ವಿವರಗಳನ್ನು ಮೀರಿದ ಒಂದು ಪುರಾಣ ರೂಪಕವಾಗಿ ಬೆಳೆಯುತ್ತದೆ. ಸರ್ಕಲ್ಲಿಗೆ ಜುಗಾರಿಕ್ರಾಸ್ ಎಂದು ಹೆಸರಿಟ್ಟಿರುವುದು. ಊರಿನ ಹೆಸರು ದೇವಪುರ ಎಂದಿರುವುದು ಕೇವಲ ಕಾಕತಾಳೀಯವಾಗಿರಲಿಕ್ಕಿಲ್ಲ ಎಂದು ಅನಿಸುತ್ತದೆ. ಜುಗಾರಿಕ್ರಾಸ್ ನ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುವವರು ಯಾರು? ಎಲ್ಲೋ ಯಾರೋ ಒಬ್ಬ ಬಾಸ್ ಕುಳಿತುಕೊಂಡು ತಮ್ಮ ಹಣೆ ಬರಹವನ್ನು ನಿಯಂತ್ರಿಸುವ ಅವನಿಗೆ ಇಲ್ಲಿರುವವರೆಗೆ ಅಪಾರ ಶ್ರದ್ಧೆ. ಓ.ಸಿ. ರಾಜಕೀಯ, ಏಲಕ್ಕಿ ವ್ಯಾಪಾರ, ಎಲ್ಲ ಬಗೆಯ ಕಾಳದಂಧೆ ಎಲ್ಲ ವಿಷಯಕ್ಕೂ ಇದು ನಿಜ.

ದಿನ ಕಳೆದ ಹಾಗೆ ದೇವಪುರದ ಹಣೆಬರಹ ಪಗಡೆ ದಳ ಉರುಳಿಸುವ ಬಾಸ್ ದೂರ ದೂರವಾಗುತ್ತಾ ಹೋದ. ಸಕಲೇಶಪುರದಲ್ಲಿ ಎಷ್ಟು ಬೋದಿನಾಯಕನೂರಿನಲ್ಲೆಷ್ಟು, ಮಡಿಕೇರಿಯಲ್ಲೇನಾಯ್ತು ಎಂದು ಪಿಸುಮಾತಿನಲ್ಲಿ ವಿಚಾರ ತಿಳಿದುಕೊಂಡು ತಮ್ಮ ಅವತ್ತಿನ ನಸೀಬು ಲೆಕ್ಕ ಹಾಕುತ್ತಿದ್ದರು. ದೇವಪುರದ ಜುಗಾರಿಕ್ರಾಸ್ ಮಂದಿಗೆ ಡೆಲ್ಲಿಯಿಂದ ನ್ಯೂಯಾರ್ಕಿನಿಂದ ಲಂಡನ್ನಿನಿಂದ ಚಂದ್ರಮಂಡಲದವರೆಗೆ, ವಿಶ್ವದ ಅಗಾಧ ಶೂನ್ಯದಿಂದ ಆಗಾಗ ಕನಕ್ಷನ್ ಸಿಕ್ಕಿ ಹುಕುಂಗಳು ಬರತೊಡಗಿದಾಗ ಹಠತ್ತಾಗಿ ಒಮ್ಮೊಮ್ಮೆ ಗಾಬರಿಯಾಗುತ್ತಿತ್ತು. ತಾವು ಯಾರು? ಯಾಕೆ ಹೀಗಾಡುತ್ತಿದ್ದೇವೆ? ತಾವು ಹಿಡಿದಿರುವ ದಾರಿಯ ಕೊನೆಯಾವುದು? ಗೌತಮ ಬುದ್ಧನ ರೀತಿ ಒಂದೇ ಒಂದು ಕ್ಷಣ ಚಿಂತಾಕ್ರಾಂತರಾಗುತ್ತಿದ್ದರು.

ಒಮ್ಮೆ ಯಾರಿಗೋ ಹೋಗಬೇಕಾದ ಕರೆ, ಇವನಿಗೆ ಸಿಕ್ಕಿ, ಸಿದ್ದಪ್ಪ ಫೋನ್ ಆಲಿಸುತ್ತಿದ್ದ ಹಾಗೇ ಬಾಯಿ ಕಳೆದುಕೊಂಡು ಬಿಡುಗಣ್ಣಾದನಂತೆ! .... ಕೊನೆಗೆ ತಲೆ ತಲೆ ಚಚ್ಚಿಕೊಂಡು ಗೋಳಾಡಿ ಬೆಳಗಿನ ಝಾವ ಮನೆಬಿಟ್ಟು ಹೋದವನನ್ನು ಮತ್ತೆ ಯಾರು ನೋಡಿರಲಿಲ್ಲವಂತೆ! ಇದಕ್ಕೆ ಊರಿನವರ ಪ್ರಕ್ರಿಯೆಃ

ಕನ್ನಡ ಗ್ರಂಥಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಲ್ಲಿ ನಡೆಯುವ ಅರ್ಥವಾಗದ ಕ್ರಿಯಾಪರಂಪರೆಗಳಲ್ಲಿ ಸಿದ್ದಪ್ಪನ ಅಂತರ್ಧಾನ ಅವರಿಗೆ ಒಂದು ಕ್ಷಣ ಕಳವಳ ಹುಟ್ಟಿಸಿದ್ದೇನೋ ನಿಜ. ಆದರೆ, ಒಮ್ಮೆ ತಮ್ಮ ಹಣೆಬರಹವನ್ನು ಅಮೂರ್ತಕ್ಕೆ ಒಪ್ಪಿಸಿದ ಮೇಲೆ ಎಲ್ಲಾ ಯಾರದೋ ಲೀಲೆಯಲ್ಲಿವೆ? ಯಾರ ಲೀಲೆ? ಯಾರು ಬಾಸ್? ಮಂಜುನಾಥನೋ, ಅಯ್ಯಪ್ಪನೋ, ತಿಮ್ಮಪ್ಪನೋ, ಯಾರೋ ಒಬ್ಬ ಯಾರೋ ತಿಳಿಯದ ಬಾಸ್ ಎಲ್ಲೋ ಕುಳಿತುಕೊಂಡು ತಮ್ಮ ಬುದ್ಧಿಗೆ ಎಂದೆಂದೂ ಅಗ್ರಹ್ಯವಾದ ತರ್ಕದಿಂದ ತಮ್ಮ ಭವಿಷ್ಯ ನಿರ್ಧರಿಸುತ್ತಾನೆ. ಅವನ ಪಾಲಿಗೆ ಕೋರ್ಟ್, ಕಚೇರಿ, ಕಾನೂನು ಇವೆಲ್ಲ ತಮ್ಮ ಬದುಕಿನ ಅಂತಿಮ ಶೂನ್ಯವನ್ನು ಮರೆಯುವ ಪ್ರಯತ್ನ ಅಷ್ಟೇ. ತಾನು ನಿಯಂತ್ರಿಸಲಾಗದ ಅಮೂರ್ತದ ಅಗಾಧತೆಯ ಎದುರು ಮನುಷ್ಯನ ಕ್ರಿಯೆಗಳು ಅರ್ಥಹೀನವಾಗಿಯೂ, ಹಾಸ್ಯಾಸ್ಪದವಾಗಿಯೂ ಕಾಣುತ್ತದೆ. ಇಲ್ಲಿನ ಕ್ರಿಯಾಪ್ರಪಂಚ ವೇಗವಾಗಿ ಚಲಿಸುತ್ತದೆ. ಜುಗಾರಿಕ್ರಾಸ್‌ನ ಭೂಗತ ಜಗತ್ತಿನ ಚಟುವಟಿಕೆಗಳ ಚಿತ್ರವನ್ನೂ ಕಟ್ಟಿಕೊಡುವಾಗ ಕಾದಂಬರಿ ಪುರಾಣ ಸೃಷ್ಟಿಯ ಹಲವು ಸಾಧ್ಯತೆಗಳನ್ನು ಸೂರೆಗೊಳ್ಳುವ ಮಹತ್ವಾಕಾಂಕ್ಷೆಯನ್ನು ತಿಳಿಸುತ್ತದೆ. ಮೊದಲನೆಯದಾಗಿ ಈ ಜಗತ್ತು ತನ್ನದೇ ಆದ ಒಳತರ್ಕಗಳ, ವಿಧಿ ನಿಷೇಧಗಳ ಗೊತ್ತು ಗುರಿ ಉದ್ದೇಶಗಳ, ಒಳ ಸಂಬಂಧಗಳ ಸ್ವಯಂಪೂರ್ಣ ಜಗತ್ತಾಗಿ ಕಾಣುತ್ತದೆ. ಕೇವಲ ಹೊರಗಿನಿಂದ ನೋಡುವವರಿಗೆ ಅಲ್ಲದೆ, ತನ್ನ ಪ್ರಜೆಗಳಿಗೆ ಅದು ತನ್ನ ಗುಟ್ಟನ್ನು ಸಂಪೂರ್ಣವಾಗಿ ಬಿಟ್ಟುಕೊಡುವುದಿಲ್ಲ. ಎರಡನೆಯದಾಗಿ ಈ ಜಗತ್ತಿನ ವ್ಯಕ್ತಿಗಳಿಗೆ ನಿಶ್ಚಿತ ಪಾತ್ರಗಳಿವೆ. ಆದರೆ, ಆ ಪಾತ್ರಗಳು ವಿಧಿ ಲಿಖಿತ. ಮೂರನೆಯದಾಗಿ ಒಮ್ಮೆ ಈ ಜಗತ್ತಿಗೆ ಅವರು ಬಂದರೆಂದರೆ, ಅದರಿಂದ ಅವರಿಗೆ ಬಿಡುಗಡೆಯಿಲ್ಲ. ಈ ಜಗತ್ತಿನ ಎಲ್ಲ ನಿಯಮಗಳಿಗೆ ಬದ್ಧರು. ಬಾಸ್‌ನ ನಿಯಮಗಳಿಗೆ ಅನುಸಾರವಾಗಿ ಅವನ ಇಚ್ಛೆಗೆ ದಕ್ಕೆ ಬಾರದಂತೆ ನಡೆಯುವುದೇ ಅವರ ಧರ್ಮ.

129843

ಜುಗಾರಿಕ್ರಾಸ್ ಕಾಳದಂಧೆಗಳ ಸ್ವರೂಪವನ್ನು ಶಾಸ್ತ್ರಿ ಸೂಚಿಸಿರುವ ಕ್ರಮ ತುಂಬಾ ಅರ್ಥಪೂರ್ಣವಾಗಿದೆ. ನಾನೇ ಪಾಕೆಟ್ ಬಿಚ್ಚಿ ನೋಡಿದ್ರೂ ನಂಗೇನೂ ಗೊತ್ತಾಗ್ತಿರಲಿಲ್ಲ. ನೀನು ಕೇಳಿದ ಪ್ರಶ್ನೆಗೆ ಈ ಜನ್ಮದಲ್ಲಿ ಉತ್ತರ ಸಿಗೋದಿಲ್ಲ ಅನ್ನೋದು ಮಾತ್ರ ಚೆನ್ನಾಗಿ ತಿಳಿದಿರು. ಮೊನ್ನೆ ಕೇರಳದ ಬೀಚಿನಿಂದ ಯುರೇನಿಯಂ ಸಾಗಿಸ್ತಿದ್ದೋವರನ್ನ ಹಿಡಿದರಲ್ಲ, ಅದೇನು ಬೆಲೆ ಉಂಟ? ಇರಾಕಿಗೆ ಹೋಗ್ತಿತ್ತು ಅಂತಾರೆ, ಇರಾನಿಗೆ ಹೊಗ್ತಿತ್ತು ಅಂತಾರೆ, ಪಾಕಿಸ್ತಾನಕ್ಕೆ ಹೋಗ್ತಿತ್ತು ಅಂತಾರೆ. ಅದು ಎಲ್ಲಿಗೆ ಹೋಗ್ತಿತ್ತು? ಯಾಕೆ ಹೋಗ್ತಿತ್ತು? ಅದರ ಬೆಲೆ ಏನು? ಇವೆಲ್ಲಾ ಯಾವ

ಬ್ರಹ್ಮನಿಗೂ ಗೊತ್ತಾಗೋಲ್ಲ. ಅದು ಎಲ್ಲಿಗೆ ತಲುಪಬೇಕೋ ಅಲ್ಲಿಗೆ ತಲುಪಿದ ಮೇಲೆ ಅದಕ್ಕೆ ಬೆಲೆ!

ಜುಗಾರಿಕ್ರಾಸ್ ದೇವಪುರದ ಜೀವನಕ್ರಮದಲ್ಲಿ ಅಂತರ್ಗತವಾಗಿರುವ ಜೂಜುಕೋರತನಕ್ಕೆ ಒಂದು ರೂಪಕವಾಗಿದೆ. ಲಕೋಟೆ ಅಥವಾ ದೂರವಾಣಿ ಸಂದೇಶದ ಮೇಲೆ ಇಲ್ಲಿನ ಚಟುವಟಿಕೆಗಳು ನಡೆಯಬೇಕು. ಆರ್ಥಿಕ ವ್ಯವಹಾರದ ಏಲಕ್ಕಿ ವ್ಯಾಪಾರ ಜೂಜಾಗಿದೆ. ಏಲಕ್ಕಿ ಬೆಲೆ ಯಾವ ಕಾರಣಕ್ಕಾಗಿ ಏರುತ್ತದೆ, ಯಾವ ಕಾರಣಕ್ಕಾಗಿ ಇಳಿಯುತ್ತದೆ ಎನ್ನುವುದನ್ನು ತಜ್ಞರು, ಪರಿಣತರು, ಸರ್ಕಾರ ಅಥವಾ ಏಲಕ್ಕಿ ಮಂಡಳಿ ಯಾರಿಗೂ ಪತ್ತೆ ಮಾಡಿ ಹೇಳಲಿಕ್ಕೆ ಸಾಧ್ಯವೇ ಇಲ್ಲ. ಏಲಕ್ಕಿ ಎಂದರೆ, ಅನೇಕ ಅರ್ಥಗಳುಂಟು. ಗಾಂಜ, ಅಫೀಮು, ಕೆಂಪುಕಲ್ಲು, ಗಂಧ ಏನಾದರೂ ಆಗಬಹುದು. ದೋಣಿ ಹೊಳೆದಂಡೆಯಲ್ಲಿ ಸಿಗುವ ಕೆಂಪುಕಲ್ಲುಗಳು ದೇವಪುರದ ಜೀವನಕ್ಕೆ ಮತ್ತಷ್ಟು ನಿಗೂಢತೆಯನ್ನು ಮಾಡುತ್ತದೆ. ಅದು ಸಿಗುವ ನಿರ್ಧಿಷ್ಟ ಜಾಗ ಯಾರಿಗೂ ಖಚಿತವಾಗಿ ಗೊತ್ತಿಲ್ಲ. ಆದರೆ, ದೇವಪುರದ ಎಲ್ಲ ಚಟುವಟಿಕೆಗಳೂ ಯಾರಿಗೂ ಶೋಧಿಸಲಾಗದ ಅಮೂಲ್ಯ ನಿಧಿಯತ್ತ ಮುಖ ಮಾಡಿಕೊಂಡಿರುತ್ತದೆ. ಈ ನಿಧಿಯ ಶೋಧಕ್ಕೂ ಗುರುರಾಜ ಕವಿಯ ಒಂದು ಹಳಗನ್ನಡ ಕಾವ್ಯದ ಸಂಶೋಧನೆಗೂ ತಳಕು ಹಾಕಿಕೊಂಡು ಅನೇಕ ರೋಚಕ ಅಂಶಗಳನ್ನು ತಿಳಿಸುತ್ತದೆ. ಗುರುರಾಜ ಪಂಡಿತ! ಇವನ ಹೆಸರು ಇಲ್ಲಿಯವರೆಗೆ ಕೇಳಿರಲಿಲ್ಲ. ಇವನ ಪುಸ್ತಕ ಎಡಿಟ್ ಮಾಡಿಸಿ ಪ್ರಕಟಿಸಿ, ಯಾರಿಗೆ ಏನಾಗಬೇಕಾಗಿದೆಯೋ ದೇವರಿಗೇ ಗೊತ್ತು. ಈ ವಿಷಯದಲ್ಲಿ ಸುರೇಶನಿಗೆ ಗೊಂದಲಗಳು ಅನುಮಾನಗಳು ಇರುವ ಜೊತೆಗೆ ನಿಗೂಢತೆಯೂ ಇರಬೇಕು ಎಂದೆನಿಸಿತು.

ಈ ಗುರುರಾಜ ಕವಿಯ ವಿಚಿತ್ರ ಕಣ್ಣು ಯಾವ ಕ್ಲಾಸಿಗೆ ಯಾರು ಪಠ್ಯ ಪುಸ್ತಕ ಮಾಡುತ್ತಾರೆಂದು ಒಂದೂವರೆ ಲಕ್ಷಕೊಟ್ಟು ರಾಜಪ್ಪನ ಕೈಲಿ ಎಡಿಟ್ ಮಾಡಿಸುತ್ತಿದ್ದಾರೆ? ಇವನು ಯಾಕೆ ಇದನ್ನು ಹೊತ್ತುಕೊಂಡು ಜುಗಾರಿಕ್ರಾಸ್‌ನಲ್ಲಿ ತಿರುಗುತ್ತಿದ್ದಾನೆ! ರಾಜಪ್ಪ ತಾನು ಬಂದಿದ್ದಕ್ಕೆ ಕೊಟ್ಟ ವಿವರಣೆ ಸುರೇಶನಿಗೆ ಅಷ್ಟೊಂದು ಸಮಾಧಾನ ತರಲಿಲ್ಲ. ಬೆಳಗಿನಿಂದ ಸುರೇಶನಿಗಾದ ರಹಸ್ಯಮಯ ಅನುಭವಗಳ ಸಂದರ್ಭದಲ್ಲಿ ಸುರೇಶ ಚಿಂತಿಸುತ್ತಿದ್ದುದರಿಂದಲೋ ಏನೋ ಅವನ ಕೈಯಲ್ಲಿದ್ದ ಗುರುರಾಜ ಕವಿಯ ಕಾವ್ಯ ಕೂಡ ಏನೋ ರಹಸ್ಯವನ್ನೊಳಗೊಂಡಿದ್ದಂತೆ ನಿಗೂಢವಾಗಿ ತೋರತೊಡಗಿತು.

ಈ ಕಾವ್ಯವನ್ನು ಸೂಕ್ಷ್ಮವಾಗಿ ಓದುತ್ತಾ ಹೋದಂತೆ, ಅದು ಕಾವ್ಯದ ಸೋಗಿನಲ್ಲಿ ಬರೆದ ರಹಸ್ಯ ದಾಖಲೆ ಎಂದು ಸುರೇಶನಿಗೆ ಹೊಳೆಯಿತು. ಗುರುರಾಜ ಕವಿಯ ಕಾವ್ಯ ಒಂದು ಅರ್ಥದಲ್ಲಿ ಉತ್ತುಂಗ ರಾಜನಿಗೆ ರತ್ನಮಾಲಾ ನರ್ತಕಿಯು ತನ್ನ ಶಿಖೆಯಲ್ಲಿನ ಕೆಂಪು ಮಾಣಿಕ್ಯವನ್ನು ಕೊಟ್ಟ ಕಥೆಯಾದರೆ, ಇನ್ನೊಂದು ಅರ್ಥದಲ್ಲಿ ರತ್ನಮಾಲ ಅಥವಾ ದೋಣಿ ಹೊಳೆಯ ಮೊಲದಲ್ಲೆಲ್ಲೋ ಸಹ್ಯಾದ್ರಿಯ ಶೃಂಗ ಶಿಖೆಯಲ್ಲಿ ಕೆಂಪು ರತ್ನ ದೊರೆಯುವ ಜಾಗ ನಿರ್ದೇಶಿಸುವ ನೀಲನಕ್ಷೆಯಾಗಿತ್ತು.

ಉತ್ತುಂಗ ರಾಜನ ಜ್ಞಾನೋದಯದ ಕಥೆಯನ್ನು ರೂಪಿಸುವ ಕೈವಲ್ಯ ಪ್ರಾಪ್ತಿಯ ಸಾಧ್ಯತೆಗಳನ್ನು ಸೂಚಿಸುವ ಜೈನ ಪೂರಾಣ, ಜುಗಾರಿ ಕ್ರಾಸ್‌ನ ಕಾಳ ವ್ಯವಹಾರದ ಒಂದು ರಹಸ್ಯ ದಾಖಲೆಯ ಕೇವಲ ಸಾಹಿತ್ಯಿಕ ಪೌರಾಣಿಕ ಪರಿವೇಶವಿರಬಹುದು ಎಂಬ ಯೋಚನೆ ಸುರೇಶನನ್ನು ಅಧೀರನನ್ನಾಗಿ ಮಾಡುತ್ತದೆ. ಒಮ್ಮೆ ಶೇಷಪ್ಪ ಕೆಂಪು ಕಲ್ಲನ್ನು ತೋರಿಸಿದಾಗ ಕೆಂಪು ಕಲ್ಲು ಎಂದರೆ ಕೇವಲ ಅದು ಬರಿಯ ಹೆಸರಷ್ಟೆ. ಅದು ಸಾಕ್ಷಾತ್ ಘನೀಭವಿಸಿದ ಬೆಂಕಿ, ಅಗ್ನಿಶಿಲೆ! ಆ ಕೋಣೆಯ ನಸುಗತ್ತಲಲ್ಲಿ ಬೆಂಕಿಕಟ್ಟಿ ಗೀಚಿದ ತಕ್ಷಣ ಉದ್ಭವಿಸುವ ಬೆಂಕಿಯಂತೆ. ಡಬ್ಬಿ ಮುಚ್ಚಳ ಮೇಲುತ್ತಿದ್ದ ಹಾಗೆ ಜ್ವಾಲೆಯಂತೆ ಅದು ಅವರ ಕಣ್ಎದುರು ಕಂಗೊಳಿಸಿತು. ಅವಕ್ಕಾಗಿ ಗೌರಿ ಮತ್ತು ಸುರೇಶ ಉಗುಳು ನುಂಗುತ್ತಾ ಆ ರಕ್ತವರ್ಣದ ಬೆಂಕಿಯನ್ನು ದಿಟ್ಟಿಸಿದರು. ತೇಜಸ್ವಿಯವರು ತಮ್ಮ ಸಾಹಿತ್ಯ ಕೃತಿಗಳಲ್ಲಿ ವೈಜ್ಞಾನಿಕ ಬಳಕೆಯಿಂದ ಒಂದು ಅವ್ಯಕ್ತದ ಹುಡುಕಾಟದಲ್ಲಿ ತೊಡಗುತ್ತಾರೆ. ವ್ಯಕ್ತವಾಗದ ವಿರರಗಳ ಮೂಲಕ ಅವ್ಯಕ್ತ ದತ್ತ ಹೊರಡುತ್ತಾರೆ. ವ್ಯಕ್ತಿ ವಿವರಗಳು ಅವರ ಕೃತಿಗಳಲ್ಲಿ ವಿಜ್ಞಾನದ ವಿವರಗಳಿಂದ ಪ್ರಾರಂಭಿಸಿ ನಿಧಾನಕ್ಕೆ ವಿಸ್ತರಿಸುತ್ತಾ, ಪ್ರಾಣಿ, ಪರಿಸರ, ಜಗತ್ತನ್ನು ಒಳಗೊಳ್ಳುತ್ತದೆ. ಅದರ ನಡುವೆ ಬದುಕುವ ಮನುಷ್ಯನ ಪ್ರಪಂಚವು ಒಳಗೊಳ್ಳುತ್ತದೆ.

ಚಿದಂಬರ ರಹಸ್ಯ

ಸ್ವರೂಪ, ನಿಗೂಢ ಮನುಷ್ಯರು ಕಾದಂಬರಿಗಳಿಗಿಂತ ತೀರಾ ಭಿನ್ನವಾದ ಕಾದಂಬರಿ ಚಿದಂಬರ ರಹಸ್ಯ. ೧೯೮೫ರಲ್ಲಿ ಈ ಕೃತಿ ಪ್ರಕಟವಾಯಿತು. ಹಿಂದಿನ ಕಾದಂಬರಿಗಳು ತಮ್ಮ ನಿಗೂಢತೆಯಿಂದ ವೈಚಾರಿಕತೆಯಿಂದ ಕೇವಲ ಸಾಹಿತ್ಯಾಸಕ್ತರ

ಸೊತ್ತಾದರೆ, ಚಿದಂಬರ ರಹಸ್ಯ ಹೆಚ್ಚು ಸಾಮಾಜಿಕವಾಗುತ್ತಾ ಸತ್ಯಗಳ ಮುಖಗಳ ಹೊಳೆಯಿಸುತ್ತಾ, ಜನಸಾಮಾನ್ಯ ಹಾಗೂ ಚಿಂತನಪರ ಕಾದಂಬರಿಯಾಗಿದೆ. ಕೆಸರೂರಿನ ವೈವಿಧ್ಯಮಯ ಬದುಕು ಮತ್ತು ಅದರ ನಿಶ್ಚಿತ ಅವನತಿಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಗ್ರಾಮ ಜೀವನವೊಂದರ ವಿಘಟನೆಯನ್ನು ಒಳಗೊಂಡಿರುವ ಈ ಕಾದಂಬರಿ ಒಂದು ಊರಿನ ಕಥೆಯೂ ಹೌದು. ಒಂದು ನಾಡಿನ ಕಥೆಯೂ ಹೌದು. ಒಂದು ಸಮಾಜದ ಕಥೆಯೂ ಹೌದು. ಇಡೀ ರಾಷ್ಟ್ರದ ಅವನತಿಯ ಕಥೆಯೂ ಹೌದು.

ಮಳೆಗಾಲದ ನಾಲ್ಕು ತಿಂಗಳು ಮಾತ್ರ ಕೆಸರೂರಷ್ಟೇ. ಅನಂತರ ಸದಾ ತಣ್ಣಗಿರುವ ಕಾಡಿನಿಂದ ಸುತ್ತುವರೆದಿರುವ ಒಂದು ಅಪ್ಸರ ಲೋಕ. ಈ ಪುಟ್ಟ ಊರು ಕರ್ನಾಟಕದ ಸ್ವಿಝರ್‌ಲ್ಯಾಂಡ್. ಈ ಗ್ರಾಮ ಏಲಕ್ಕಿ ಬೆಳೆಗೆ ತುಂಬ ಪ್ರಸಿದ್ಧಿಯಾಗಿದೆ. ಕೆಸರೂರಿನಲ್ಲಿ ಒಂದು ಜ್ಯೂನಿಯರ್ ಕಾಲೇಜು, ಏಲಕ್ಕಿ ಸಂಶೋಧನಾ ಕೇಂದ್ರ, ಸಹಕಾರಿ ಬ್ಯಾಂಕ್, ಪೊಲೀಸ್ ಸ್ಟೇಷನ್, ಬ್ಲಾಕ್ ಡೆವಲಪ್‌ಮೆಂಟ್ ಆಫೀಸ್, ಮುಂತಾದ ಕಚೇರಿಗಳಿವೆ. ಹಿಂದೂ ಮುಸ್ಲಿಂ, ಕ್ರಿಶ್ಚಿಯನ್ ವಿವಿಧ ಧರ್ಮದ ಜನರು ತಮ್ಮದೇ ಆದ ಹಲವಾರು ಆಶೋತ್ತರ-ಸಮಸ್ಯೆ-ಸಂಶಯಗಳೊಂದಿಗೆ ಈ ಊರಿನಲ್ಲಿ ಜೀವನ ಸಾಗಿಸುತ್ತಿದ್ದಾರೆ. ಕಾಲೇಜಿನಲ್ಲಿ ಓದುತ್ತಿರುವ ರಾಮಪ್ಪ, ಚಂದ್ರ, ರಮೇಶ, ಜೋಸೆಫ್ ಅಂಗಾರ, ಅವರೆಲ್ಲಾ ಜಾತಿ-ಮತ-ಧರ್ಮಗಳ ಪರಂಪರೆಯಿಂದ ಹೊರಬಂದು, ಹಲವು ಕನಸುಗಳೊಂದಿಗೆ ಜೀವನ ಮಾಡಬೇಕೆಂದಿರುತ್ತಾರೆ. ಈ ಹುಡುಗರೆಲ್ಲಾ ದಾರಿಯಲ್ಲಿ ಹೋಗಿ ಬರುವ ಹುಡುಗಿಯರನ್ನೆಲ್ಲಾ ವಿವಿಧ ರೀತಿಯಲ್ಲಿ ಪ್ರಯತ್ನ ಮಾಡಿ ಪ್ರೀತಿಸಿದರು, ಪ್ರೀತಿಸಿ, ಸುಸ್ತಾಗಿ ಹೋಗಿದ್ದರು. ಸೂಟು ಬೂಟು ಹಾಕಿ ಟೈ ಕಟ್ಟಿ ಅನೇಕ ರೀತಿಯಲ್ಲಿ ಪೋಜುಗಳಲ್ಲಿ ನಿಂತು ಏನೇನೋ ಮಾಡಿದರು. ಒಬ್ಬ ಹುಡುಗಿಯನ್ನು ಒಲಿಸಿಕೊಳ್ಳಲಾಗಲಿಲ್ಲ. ಹುಡುಗಿಯರ ಪ್ರೀತಿಯ ವಿಚಾರವು ಇವರ ಪಾಲಿಗೆ ಚಿದಂಬರ ರಹಸ್ಯವಾಯಿತು. ಇದರಿಂದ ಇವರು ಜೀವನದಲ್ಲಿ ನಿರಾಶರಾದರು. ಇಂತಹ ಸಂದರ್ಭದಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕ ರಾಮಚಂದ್ರ ವರ್ಗವಾಗಿ ಕೆಸರೂರಿನ ಕಾಲೇಜಿಗೆ ಬಂದರು. ಇದೇ ಸಂದರ್ಭದಲ್ಲಿ ಈ ಹುಡುಗರಿಗೆಲ್ಲಾ ರಾಮಚಂದ್ರನ ಮಾರ್ಗದರ್ಶನ ದೊರೆತ ನಂತರ ಸಮಗ್ರ ಬದಲಾವಣೆಗೆ ಒಂದು ಕ್ರಾಂತಿಯೇ ಆಗಬೇಕೆಂದು ಯೋಚಿಸಿದರು.

ಚಿದಂಬರವೆಂದರೆ ಆಕಾಶ ಮತ್ತು ಮನಸ್ಸು ಎಂಬ ಅರ್ಥವಿದೆ. ಇಲ್ಲಿ ಸಮಸ್ಯೆ ಆಕಾಶ ಮತ್ತು ಮನಸ್ಸಿನಷ್ಟೇ ರಹಸ್ಯವಾದುದು. ಕೆಸರೂರು ಕ್ಷುದ್ರತೆಗೆ ಸಂಕೇತವಾದ ಊರಾಗಬಹುದು. ಈ ಕ್ಷುದ್ರತೆಯ ಹಿಂದಿರುವ ಸತ್ಯವನ್ನು ಹುಡುಕುವುದು ಈ ಕಾದಂಬರಿಯ ಮುಖ್ಯ ಆಶ್ಯವಾಗಿದೆ. ಸತ್ಯವನ್ನು ಹುಡುಕುವಲ್ಲಿ ವ್ಯಕ್ತಿಗಳು, ಪರಿಸರ, ಜಾತಿ, ರಾಜಕಾರಣ, ಧರ್ಮ, ದ್ವೇಷ, ವೈಷಮ್ಯ ಎಲ್ಲವೂ ತೊಡಗುತ್ತದೆ. ಕೆಸರೂರಿನ ಹೈಬ್ರಿಡ್ ಏಲಕ್ಕಿ ಗಿಡದ ಬಗ್ಗೆ ಸಂಶೋಧನೆ ಮಾಡುತ್ತಿದ್ದ ಜೋಗಿಹಾಳರು ಆಕಸ್ಮಿಕವಾಗಿ ಸಾವನ್ನಪ್ಪುತ್ತಾರೆ. ಈ ಸಾವಿನ ಹಿಂದಿನ ಸತ್ಯ ಹಾಗೂ ರಹಸ್ಯ ಪತ್ತೆ ಹಚ್ಚಲು ಏಲಕ್ಕಿ ಬೋರ್ಡಿನ ಇಂಟಲಿಜೆನ್ಸಿ ಆಫೀಸರಾಗಿ ಶಾಮನಂದನ ಅಂಗಾಡಿ ಬರುತ್ತಾರೆ. ಕೆಸರೂರಿಗೆ ಬಂದ ನತಂರ ಹಲವಾರು ಸಮಸ್ಯೆಗಳು ಸೇರಿಕೊಂಡಿದೆ ಎಂದು ಗೊತ್ತಾಗುತ್ತದೆ. ಕೆಸರೂರಿನ ಹೈಬ್ರಿಡ್ ತಳಿ ರಹಸ್ಯವನ್ನು ಅನ್ವೇಷಿಸಲು ಹೊರಡುತ್ತಾನೆ, ಕೆಸರೂರಿನ ಬದುಕು ಅತ್ಯಂತ ಜಟಿಲವೂ, ರಹಸ್ಯಾತ್ಮಕವೂ ಆದ ವೈರುಧ್ಯಗಳಿಂದ ಕೂಡಿರುವುದು ತಿಳಿಯುತ್ತದೆ. ಊರಿನ ರಾಜಕಾರಣಕ್ಕೂ, ಏಲಕ್ಕಿ ಸಂಶೋಧನಾ ಕೇಂದ್ರಕ್ಕೂ ಪರಿಸರ ನಾಶಕ್ಕೂ ಶೋಷಣೆ ದೌರ್ಜನ್ಯಗಳಿಗೆ ಪರಸ್ಪರ ಸಂಬಂಧವಿರುತ್ತದೆ.

ಏಲಕ್ಕಿ ಸಂಶೋಧನಾ ಕೇಂದ್ರದ ಮುಖ್ಯಸ್ಥರಾಗಿದ್ದ ಡಾ।ಜೋಗಿಹಾಳರ ಸಾವಿನ ನಂತರ ಪಾಟೀಲರು ಸಂಶೋಧನಾ ಕೇಂದ್ರದ ಅಧಿಕಾರಿಯಾಗಿ ವರ್ಗವಾಗಿ ಬಂದರು. ಇವರು ಜೋಗಿಹಾಳರ ಎಲ್ಲ ಸಂಶೋಧನೆಗಳನ್ನು ತಲೆಕೆಳಗು ಮಾಡಿ, ಎಲ್ಲವನ್ನೂ ಕಲಸುಮೇಲೋಗರ ಮಾಡಿ, ಇಲ್ಲಿ ಏನು ಬೇಕಾದರೂ ನಡೆಯುತ್ತದೆ ಎಂಬ ನಿಲುವಿಗೆ ಬಂದರು. ಸಂಶೋಧನಾ ಕೇಂದ್ರದ ಸಹೋದ್ಯೋಗಿಗಳು ಮತ್ತು ಸಿಬ್ಬಂದಿಯವರ ವಿಚಿತ್ರ ವರ್ತನೆ, ರಾಜ್ಯದ ಹಾಗೂ ಸ್ಥಳೀಯ ರಾಜಕೀಯ ಪುಡಾರಿಗಳ ಕೈವಾಡ. ಆ ಕ್ಯಾಂಪಸ್ಸಿನಲ್ಲಿ ಆವರಣದಲ್ಲಿ ಉದ್ಭವಿಸಿದ ವೆಂಕಟೇಶ್ವರ ದೇವಾಲಯ ಮುಂತಾದ ಬೆಳವಣಿಗೆಗಳು ಕೆಸರೂರಿನ ಸಂಘರ್ಷಕ್ಕೆ, ಅವನತಿಗೆ ಕಾರಣವಾಗುತ್ತವೆ.

ಜೀವನದ ಸ್ವರೂಪವೇನು? ಅನುಭವ ಮತ್ತು ಅವುಗಳಿಗೆ ಮೂಲಾಧಾರವಾದ ಮಾನವ ನಡವಳಿಕೆಯ ಸ್ವರೂಪವೇನು? ಎಂಬುದೇ ನಿಜವಾದ ಚಿದಂಬರ ರಹಸ್ಯ. ಇದನ್ನು ನನ್ನ ಬರಹ ಮೂಲಕ ಅನ್ವೇಷಿಸುವುದೇ ನನ್ನ ಗುರಿ. ಮನುಷ್ಯನ ಪ್ರಜ್ಞೆ ಸ್ವತಂತ್ರವೋ? ಭ್ರಮೆಯೋ? ಇಡೀ ಗ್ರಹತಾರೆ, ನೀಹಾರಿಕೆಗಳ ವಿಶ್ವವೇ ತಮ್ಮ ತಮ್ಮ ನಿಯಮಕ್ಕೆ ಅನುಸಾರವಾಗಿ ವರ್ತಿಸುತ್ತವೆ. ಪ್ರತಿಯೊಂದು ಅಣು, ಪರಮಾಣು,

ಇಲೆಕ್ಟ್ರಾನ್, ಪ್ರೋಟನ್‌ಗಳು ತಮ್ಮ ನಿಯಮಗಳ ಸರಹದ್ದುವಿನಲ್ಲಿ ಸುತ್ತುತ್ತವೆ. ಇವುಗಳಿಂದ ಹೊಮ್ಮಿದ ಈ ಪ್ರಜ್ಞೆ ನಿಯಮಾತೀತವೆ? ನಿಜವಾಗಿ ಸ್ವತಂತ್ರವೆ? ಎಂಬ ಚಿದಂಬರ ರಹಸ್ಯವನ್ನು ಅರಿಯುವುದಕ್ಕಾಗಿ ತಾನು ಈ ಹುಚ್ಚಾಟದಲ್ಲಿ ಭಾಗಿಯಾಗಿರುವೆ ಎಂದು ಸಾಹಿತಿ ಜಯರಾಮ ಹೇಳುತ್ತಾರೆ. ಜಯರಾಮನು ಕೆಸರೂರಿನ ಸುತ್ತಲ ಪ್ರದೇಶದಲ್ಲಿ ವಿಚಾರವಾದಿ ಲೇಖಕನಾಗಿದ್ದನು. ಮೂಢನಂಬಿಕೆಗಳ ವಿರುದ್ಧ ಸಮರ ಸಾರಿದ ವಿಚಾರವಾದಿಗಳ ಅಧ್ಯಕ್ಷನೂ ಆಗಿದ್ದನು. ಜಯರಾಮ ಮತ್ತು ರಾಮಚಂದ್ರ ಇವರು ಅಂಗಾಡಿಗೆ ಪೂರ್ವಪರಿಚಿತರಾಗಿದ್ದರು. ಜೋಗಿಹಾಳ ಸಾವಿನಲ್ಲಿ ತಮ್ಮದೇ ಆದ ಆಲೋಚನೆಯನ್ನು ಮಾಡುತ್ತಾರೆ.

ರಾತ್ರಿಯಾದ ಕೂಡಲೇ ಕೆಸರೂರು ಪಂಚಾಯಿತಿಯ ಅಧ್ಯಕ್ಷರಾದ ಕೃಷ್ಣೇಗೌಡರ ಮನೆಯಮೇಲೆ ಕಲ್ಲು ಬೀಳುತ್ತಿರುತ್ತವೆ. ಕೃಷ್ಣೇಗೌಡರಿಗೆ ಸಹಿಸಲಗಾಧವಾದ ಹಿಂಸೆಯಾಯಿತು. ಈ ವಿಷಯದಲ್ಲಿ ಮೊದಲು ಕಾಲೇಜು ಹುಡುಗರ ಮೇಲೆ ಅನುಮಾನಪಟ್ಟರೆ, ಅನಂತರ ತನ್ನ ತೋಟದ ಕೂಲಿಗಾರರೇ ಈ ಕೆಲಸ ಮಾಡುತ್ತಿರಬಹುದು ಎನಿಸುತ್ತದೆ. ಕೆಲವರ ಗುಮಾನಿ ಹೊಲಗೇರಿಯ ಹರಿಜನರ ಮೇಲೆಯೂ ಬಂತು. ಅನಂತರ ಪ್ರತಿವರ್ಷ ಕೆಸರೂರಿಗೆ ವಲಸೆ ಬರುವ ಗೋಸಾಯಿಗಳ ಮೇಲೆ ಕೇಂದ್ರವಾಗಿ, ಕೊನೆಗೆ ಭೂತ ಪಿಶಾಚಿ ಮುಂತಾದ ಅಮಾನುಷ ಶಕ್ತಿಗಳ ಕೈವಾಡ ಇರಬೇಕೆಂಬ ಊಹಾಪೋಹಗಳಿಗೆ ದಾರಿಯಾಯಿತು. ಇದನ್ನು ಪತ್ತೆ ಮಾಡುವುದಕ್ಕೆ ಕಾಲೇಜು ಹುಡುಗರ ಗುಂಪನ್ನು ನೇಮಿಸಲಾಯಿತು.

ಮೀನಿನ ವ್ಯಾಪಾರಕ್ಕಾಗಿ ಬಂದ ಸುಲೇಮಾನ್ ಬ್ಯಾರಿ ಕೆಲವೇ ದಿನಗಳಲ್ಲಿ ಕೋಟ್ಯಾಧೀಶನಾದನು. ಕಳ್ಳಸಾಕಾಣಿದಾರ ಚಿನ್ನದ ಗಟ್ಟಿ ಮೀನಿನ ಚೀಲದಲ್ಲಿ ಸಿಕ್ಕಿತೆಂದು ಹೇಳಿದರೆ, ಕಳ್ಳನೋಟು ಪ್ರಿಂಟ್ ಮಾಡಿಸಿಕೊಂಡು ಕೊಲೆ ಮಾಡಿಸುತ್ತಾನೆ ಎಂದು ಜನ ಮಾತಾಡಿಕೊಳ್ಳುತ್ತಿದ್ದರು. ಊರಲ್ಲೆಲ್ಲಾ ಅನೇಕ ಮಸೀದಿಗಳನ್ನು ಸ್ಥಾಪಿಸಿ, ಕೆಸರೂರಿನ ಪ್ರಭಾವಿ ವ್ಯಕ್ತಿಯಾಗಿ ಮಾರ್ಪಟ್ಟನು. ಸುಲೇಮಾನ್ ಬ್ಯಾರಿಯ ಬಲಗೈ ಬಂಟನಾದ ಅಬ್ಬಾಸ್ ಬ್ಯಾರಿ ಮತಾಂತರಗೊಂಡವರ ಪ್ರಾಬಲ್ಯದಿಂದ ದಿನದಿನಕ್ಕೂ ಮುಸ್ಲಿಮರ ಸಂಖ್ಯೆಯನ್ನು ಬೆಳೆಸಿದನು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದ ಕೃಷಿ ವಿಜ್ಞಾನಿ ಡಾ। ಜೋಗಿಹಾಳ ಅವರು ದ್ರಾಕ್ಷಿ ಹಾಗೂ ಸೇಬಿನ ಕೃಷಿಯಲ್ಲಿ ಯಶಸ್ವಿ ಸಂಶೋಧನೆ ಸಾಧಿಸಿದ್ದರು. ಏಲಕ್ಕಿ ತಳಿಯ ಅಭಿವೃದ್ಧಿಗೆ ಪರಿಣಾಮಕಾರಿಯಾದ ಸಂಶೋದನೆಯನ್ನು ಮಾಡಿ, ಕೊಸರೂರು ಹೈಬ್ರಿಡ್ ಎಂಬ ಹೊಸ ತಳಿಯನ್ನು ಕಂಡು ಹಿಡಿದರು. ಒಂದು ಎಕರೆಗೆ ಮೂರು ಲಕ್ಷ ರೂಪಾಯಿಗಳಷ್ಟು ಆದಾಯ ಬರುವ ಪ್ರಗತಿಯನ್ನು ಸಾಧಿಸಿದ್ದರು. ಒಂದು ಎಕರೆಗೆ ಮೂರುಲಕ್ಷ ರೂಪಾಯಿಗಳಷ್ಟು ಆದಾಯ ಬರುವ ಪ್ರಗತಿಯನ್ನು ಸಾಧಿಸಿದದರು. ಈ ಸಾಧನೆಗೆ ಏಷ್ಯಾ ಖಂಡದ ನೊಬೆಲ್ ಪ್ರಶಸ್ತಿಯೆಂದೇ ಹೆಸರಾದ ಮ್ಯಾಗ್‌ಸೇಸೆ ಪ್ರಶಸ್ತಿಗೆ ಅಯ್ಕೆ ಮಾಡುವಷ್ಟರಲ್ಲಿ ಕೆಸರೂರಿನ ಸಂಶೋಧನ ಕೇಂದ್ರದಲ್ಲಿ ನಿಗೂಢವಾಗಿ ಸಾವನ್ನಪ್ಪಿದ್ದರು.

ಕೆಸರೂರಿನ ಸುತ್ತ ಹರಡಿಸುವ ಲಂಟಾನಾ ಜಿಗ್ಗಿನಲ್ಲಿ ಇರುವ ದೂಪದ ಮರದ ಬುಡದಲ್ಲಿ ಕೆಸರೂರು ಹೈಬ್ರೀಡ್ ತಳಿ ಇರುವುದೆಂಬ ಮಾಹಿತಿ ಡಾ। ಪಾಟೀಲರ ಗಮನಕ್ಕೆ ಬಂತು. ಈ ರಹಸ್ಯವನ್ನು ಬಯಲು ಮಾಡಲು ಗೋಸಾಯಿಗಳನ್ನು ಆಶ್ರಯಿಸಿದನು. ಈ ವಿಚಾರ ಬ್ಯಾರಿಗೆ ತಿಳಿದು, ಬ್ರೀಡರ್ ಮಹಮದ್‌ನೇ ಕಾರಣ ಎಂದು ತಿಳಿದು, ಅವನನ್ನು ಮುಗಿಸುವ ಪ್ರಯತ್ನ ಮಾಡುತ್ತಾನೆ. ಮಹಮ್ಮದನನ್ನು ಕೊಂದು ಸಾಕ್ಷ್ಯಾಧಾರಗಳನ್ನು ಮರೆಮಾಡಬೇಕೆಂದಿದ್ದ ಬ್ಯಾರಿಯ ಪ್ರಯತ್ನ ವಿಫಲಗೊಳ್ಳುತ್ತದೆ. ಇದರ ಹಿನ್ನೆಲೆಯಲ್ಲಿ ಹಿಂದುಗಳ ಕುತಂತ್ರವಿದೆಯೆಂದು ಸುಲೇಮಾನ್ ಬ್ಯಾರಿಯವರು ನಂಬಿದರೆ, ಮುಸ್ಲಿಮರು ಮಸಲತ್ತು ಮಾಡಿ, ಯಾರೋ ನಾಲ್ವರ ಪ್ರಾಣ ತೆಗೆದರೆಂಬ ವದಂತಿ ಹಿಂದೂಗಳಲ್ಲಿ ಹುಟ್ಟುತ್ತದೆ. ದೂಪದ ಮರದ ಪತ್ತೆ ಕಾರ್ಯಕ್ಕೆ ಗೋಸಾಯಿಗಳ ಹಾಗೂ ಪಾಟೀಲರ ತಂಡ ಹೋರಟಾಗ ಸುಲೇಮಾನ್ ಬ್ಯಾರಿ ಇಡೀ ಕಾಡಿಗೆ ಬೆಂಕಿ ಹಾಕಿ ಅವರನ್ನು ಮುಗಿಸುವ ವ್ಯವಸ್ಥೆ ಮಾಡುತ್ತಾನೆ. ಪಾಟೀಲರಿಗೆ ಸಿಡಿಮದ್ದು ತಗುಲಿ ಗಾಯಗೊಂಡು ಆಸ್ಪತ್ರೆ ಸೇರುತ್ತಾರೆ. ಮಸೀದಿಯ ಸಮೀಪ ಬಾಂಬ್ ಇರಿಸಿ ಪಾಟೀಲರ ಕೊಲೆ ಪ್ರಯತ್ನ ನಡೆಯಿತು ಎಂಬ ಸುದ್ಧಿ ಊರಿನಲ್ಲಿ ಹರಡಿತು. ಇತ್ತ ಹಿಂದೂಗಳೇ ಮುಸ್ಲಿಮರು ಸಾಯಲಿ ಎಂದು ಬಾಂಬ್ ಇಟ್ಟಿದ್ದಾರೆ ಎಂದು ವದಂತಿಯೂ ಹುಟ್ಟಿತು. ಕೆಸರೂರಿನ ಮತೀಯ ದ್ವೇಷದ ದಳ್ಳುರಿಯ ನಡುವೆಯೂ ರಮೇಶನು ರಫಿಕ್ ಮತ್ತು ಜಯತಿಯರ ರಕ್ಷಣೆಗೆ ಮುಂದಾಗುತ್ತಾನೆ. ಆಗಲೇ ಕಾಡಿಗೆ ಬೆಂಕಿ ಬಿದ್ದಿರುತ್ತದೆ. ಈ ಕಾಡ್ಗಿಚ್ಚಿನಲ್ಲಿ ಸಿಕ್ಕಿದರೆ ಬದುಕಿ ಉಳಿಯುವ ಸಂಭವ ಇಲ್ಲ ಎಂಬುದನ್ನು ಅರಿತ ರಫಿಕ್ ಜಯಂತಿ ನೆಲದಲ್ಲಿ ತೆವಳಿ ಮುಂದೆ

ಸಾಗುತ್ತಾರೆ. ಅವರಿಗೆ ಎದುರಾದ ಪರ್ವತದ ಸಮೀಪ ದೊಡ್ಡ ಮರದ ಬುಡದಲ್ಲಿ ಅಪರೂದ ಏಲಕ್ಕಿ ತಳಿ ಇವರ ಕಣ್ಣಿಗೆ ಕಾಣುತ್ತದೆ. ತಮ್ಮ ಶಕ್ತಿ ಸಾಮರ್ಥ್ಯದಿಂದ ಪರ್ವತ ಶಿಖರಕ್ಕೆ ಬರುತ್ತಾರೆ. ಆ ವೇಳೆಗಾಗಲೇ ದ್ವೇಷಾಸೂಯೆಗಳಿಂದ ಕೊಳೆತು ನಾರುವ ಕೆಸರೂರು ಸಂಪೂರ್ಣವಾಗಿ ದಟ್ಟ ಹೊಗೆಯಿಂದ ಆವರಿಸಿತ್ತು. ಕೆಸರೂರಿನ ಜೇನುಗುಡ್ಡದ ಮೇಲ್ಭಾಗ ಮಾತ್ರ ಹೊಗೆಯಿಂದ ಮುಕ್ತವಾಗಿತ್ತು. ಕೆಸರೂರಿನ ಜನರೆಲ್ಲರೂ ಈಗಲಾದರೂ ಓಡಿ ಹೋಗಿ ಜೇನುಗುಡ್ಡದ ತುದಿ ಸೇರಿಕೊಂಡರೆ ಸಾವಿನಿಂದ ಪಾರಾಗಬಹುದೆಂದು ಜಯಂತಿ ಹೇಳಿದಳು. ನಮಗೆ ಕಾಣಿಸುತ್ತಿದೆ, ಅವರಿಗೆ ಹೇಗೆ ಕಾಣುತ್ತದೆ ಈ ದಟ್ಟ ಹೊಗೇಲಿ ಎಂದು ರಫಿಕ್ ಹೇಳಿದನು.

ಮತಾಂಧ ವ್ಯಕ್ತಿಗಳ ಕುತಂತ್ರಗಳಿಗೆ ಸಿಕ್ಕಿ ಸರ್ವನಾಶವಾದ ಊರಿನಲ್ಲಿ ಬದುಕಿ ಉಳಿಯುವವರು ಜಾತ್ಯಾತೀತ ರಫಿಕ್ ಮತ್ತು ಜಯಂತಿ ಮಾತ್ರ. ಕೆಸರೂರಿನ ಏಲಕ್ಕಿಗೆ ಅಂಟಿದ ಖಾಯಿಲೆಗೆ ಹೇಗೆ ಔಷಧಿ ಸಿಗುವುದಿಲ್ಲವೋ ಹಾಗೆಯೇ ಇಲ್ಲಿನ ಬದುಕಿಗೆ ಅಂಟಿದ ಮೂಲಭೂತವಾದ ಸಾಂಪ್ರದಾಯಗಳಿಗೆ ಸುಲಭದ ಪರಿಹಾರವಿಲ್ಲ ಎಂಬುದು ಕಾದಂಬರಿಯಿಂದ ವಿದಿತವಾಗುತ್ತದೆ.

ತೇಜಸ್ವಿ ತಮ್ಮ ಸಾಹಿತ್ಯದಲ್ಲಿ ವಿಧಿ, ಕರ್ಮಜಾಲ, ಬ್ರಹ್ಮಾಂಡ, ಹಣೆಬರಹ, ಗ್ರಹಗತಿ ಮುಂತಾದ ಪದಗಳನ್ನು ಬಳಸುತ್ತಾರೆ. ಈ ಪದಗಳಿಗೆ ಯಾವುದೇ ಮತಧರ್ಮದ ಸೋಂಕು ಇಲ್ಲದಿರುವುದನ್ನೂ ಕಾಣಬಹುದು. ಬದುಕಿನ ಅಗಾಧತೆ, ವೈಶಾಲ್ಯ, ನಿಗೂಢತೆ, ನಮ್ಮ ಗ್ರಹಿಕೆಗಳಿಗೆ ಸುಲಭವಾಗಿ ಸಿಕ್ಕದ ವಿಶ್ವ ರಚನೆಯ ವಿಸ್ಮಯಗಳನ್ನು ಸೂಚಿಸಲು ಇಂಥ ಪದಗಳನ್ನು ಬಳಸುತ್ತಾರೆ. ಅವರ ಬರವಣಿಗೆ ಕೇವಲ ಮನುಷ್ಯ ಕೇಂದ್ರಿತವಲ್ಲ, ಮನುಷ್ಯನ ಸಮಾಜಿಕ, ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಚಟುವಟಿಕೆಗಳನ್ನು ತುಂಬಾ ಸೂಕ್ಷ್ಮವಾಗಿ ಸಂಕೀರ್ಣವಾಗಿ ವಿಶ್ಲೇಷಿಸುತ್ತಾರೆ. ಮನುಷ್ಯನನ್ನೇ ಸೃಷ್ಟಿಯ ಕೇಂದ್ರವೆಂಬಂತೆ ಹಾಗೂ ಸೃಷ್ಟಿಯನ್ನು ಕೇವಲ ಮನುಷ್ಯನ ದೃಷ್ಟಿಕೋನದಿಂದ ನೋಡುವುದಿಲ್ಲ. ಮನುಷ್ಯ ಒಟ್ಟಾರೆ ಜೀವಜಾಲ ವ್ಯವಸ್ಥೆಯ ಒಂದು ಅಂಗವಾಗಿ ಮೂಡಿ ಬರುತ್ತಾನೆ.

ಚಿದಂಬರ ರಹಸ್ಯ ಚಿಂತನಪರ ಹಾಗೂ ಅನುಭವಪರ ಕಾದಂಬರಿಯ ಜೊತೆಗೆ ಕೆಸರೂರಿನ ಅವನತಿಯನ್ನು ಚಿತ್ರಿಸುವ ಕಾದಂಬರಿಯಾಗಿದೆ. ಅವನತಿಯನ್ನು ಚಿತ್ರಿಸುವ

ಕಾದಂಬರಿಗಳು ಕನ್ನಡದಲ್ಲಿ ಅನೇಕ ಇವೆ. ಆದರೆ, ಅವನತಿಯನ್ನು ಚಿತ್ರಿಸುವ ಬಗೆಯಲ್ಲಿ ತೇಜಸ್ವಿಯವರು ಹೊಸತನವನ್ನು ತೋರಿದ್ದಾರೆ. ಈ ಕಾದಂಬರಿ ಹಲವು ರೀತಿಯಲ್ಲಿ ವಿಶಿಷ್ಟವಾಗಿದೆ. ಕಾದಂಬರಿಯಲ್ಲಿ ಕಂಡುಬರುವ ತಿಳಿ ಹಾಸ್ಯ-ಚೇಷ್ಟೆ, ಲೇವಡಿ, ಕುಹಕ, ಸಿನಿಕ, ಕಟುಕತನ, ಎಲ್ಲವೂ ತೇಜಸ್ವಿಯವರ ಬರವಣಿಗೆಗೆ ಹೊಸ ಆಯಾಮವನ್ನು ತಂದುಕೊಟ್ಟಿದೆ. ತೆಳವಾಗದೆ, ಜನಪ್ರಿಯವಾಗಬಲ್ಲ ಈ ಮಾದರಿಯ ಬರವಣಿಗೆ ಕನ್ನಡ ಅಧ್ಯಯನಕ್ಕೆ ಹೊಸ ದನಿಗಳನ್ನು ಕೊಟ್ಟಿದೆ. ಕೆಸರೂರಿನ ಅವನತಿಯನ್ನು ತಿಳಿದುಕೊಳ್ಳುವಲ್ಲಿ ಅನೇಕ ಪ್ರಶ್ನೆಗಳು ಎದುರಾಗುತ್ತವೆ. ಕೆಸರೂರಿನ ಅವನತಿಗೆ ಚರಿತ್ರೆಯ ನಿರ್ದಯ ಓಟ ಕಾರಣವೋ? ಕೆಸರೂರಿನ ವಿದ್ಯಮಾನಗಳನ್ನು ನಿಯಂತ್ರಿಸುವ ಹಲವು ಮುಖಂಡರ ವರ್ತನೆ ಕಾರಣವೋ? ಮನುಷ್ಯರ ಕ್ರಿಯೆಗೆ ಅವರ ಸ್ವಭಾವ ಕಾರಣವೋ? ಬಾಹ್ಯ ಒತ್ತಡಗಳು ಕಾರಣವೋ; ಮನುಷ್ಯನ ಪ್ರಜ್ಞೆ, ಸ್ವತಂತ್ರ್ಯವಾದದ್ದೋ, ಪರಿಸರಕ್ಕೆ ಬದ್ಧವಾದದ್ದೋ ಎಂಬ ಅನೇಕ ಪ್ರಶ್ನೆಗಳನ್ನು ಕಾದಂಬರಿಯ ಹಲವು ಪಾತ್ರಗಳು ಚರ್ಚಿಸುತ್ತವೆ.

ಚಿದಂಬರ ರಹಸ್ಯ ಮೇಲು ನೋಟಕ್ಕೆ ಶಾಮನಂದನ ಅಂಗಡಿಯ ಪತ್ತೇದಾರಿಕೆಯ ಕಥೆಯಂತೆ ತೋರುತ್ತದೆ. ತನಿಖೆ ಆರಂಭಿಸಿದ ಕೆಲವೇ ದಿನಗಳಲ್ಲಿ ಏಲಕ್ಕಿ ಬೆಳೆ ಕುಸಿಯುತ್ತಿರುವುದಕ್ಕೆ ಕೆಸರೂರಿನ ಹಲವಾರು ಸಮಸ್ಯೆಗಳು ತಳಕು ಹಾಕಿಕೊಂಡಿರುತ್ತವೆ. ಒಂದು ಘಟ್ಟದಲ್ಲಿ ಅಂಗಾಡಿಗೆ ಹೀಗೆ ಅನ್ನಿಸುತ್ತದೆ.

ಕೆಸರೂರಿನ ಏಲಕ್ಕಿ ಸಮಸ್ಯೆಯನ್ನು ಇಡೀ ಕೆಸರೂರಿನ ಸಂಸ್ಕೃತಿಯೊಂದಿಗೆ ಅರ್ಥ ಮಾಡಿಕೊಳ್ಳಬೇಕೆ? ಈ ಸಾವಿರಾರು ಸಮಸ್ಯೆಗಳ ಶರಧಿಯ ತಳಕ್ಕೆ ಮುಳುಗಿ ಇದರ ಮೂಲ ಸಮಸ್ಯೆ ಏನೆಂದು ನೋಡಲಿಕ್ಕೆ ನಾನೇನು ಅವತಾರ ಪುರುಷನೆ? ನನ್ನನ್ನು ಏನು ಕೆಲಸಕ್ಕೆ ಸಂಬಳ ಕೊಟ್ಟು ಕಳುಹಿಸಿದ್ದಾರೋ? ಅಷ್ಟು ಮಾಡಿರೆ ಸಾಕು, ಆದರೂ ಇವೆಲ್ಲಾ ಸಮಸ್ಯೆಗಳೂ ಒಂದರೊಗೊಂದು ಸಂಯೋಜನೆಗೊಂಡಂತೆ ಸೇರಿ ಹೋಗಿದ್ದರೇನಪ್ಪಾ ಮಾಡೋದು? ಎಲ್ಲಾ ಸಮಸ್ಯೆಗಳೂ ಒಂದು ಮಾನವೀಯ ಸನ್ನಿವೇಶದ ತುಣುಕುಗಳು.

ಅಂಗಾಡಿಗೆ ಏಲಕ್ಕಿ ಬೆಳೆ ಕುಸಿತದ ಬಗ್ಗೆ, ಇದಕ್ಕೆ ತಳಕು ಹಾಕಿಕೊಂಡ ಜೋಗಿಹಾಳರ ಸಂಶೋಧನೆ ಬಗ್ಗೆ ಮತ್ತು ಅವರ ಸಾವಿನ ಬಗ್ಗೆ ಹೆಚ್ಚಿನ ಯೋಚನೆಯಾದರೆ, ಜ್ಯೂನಿಯರ್ ಕಾಲೇಜಿನ ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಡಾ।

ರಾಮಚಂತ್ರನಿಗೆ ಚಿಕ್ಕಮಗಳೂರು ಜಿಲ್ಲೆಯೇ ಒಂದು ಸಮಸ್ಯೆಯಾಗಿ ಕಾಡುತ್ತಿತ್ತು. ಈ ಜಿಲ್ಲೆಗೆ ಏನಯ್ಯ ಶಾಪ? ಇಷ್ಟೊಂದು ಸುಂದರವಾಗಿದೆ, ಕಾಡುಗಳಿದ್ದಾವೆ, ಮಳೆ ಇದೆ, ಬೆಳೆ ಇದೆ, ತಣ್ಣಗೆ ಜೀವನೋಪಾಯ ಸಾಗಿಸ್ತಾರೆ. ಆದರೆ, ಯಾವುದೋ ಒಂದು ಭಯಾನಕ ಕೊರತೆ ಇಲ್ಲಿ ಹಗ್ಗ. ಇಲ್ಲಿ ಹೊರಗಿನಿಂದ ಬಂದು ಬದುಕು ಆರಂಭಿಸಿದೊಡನೆ ಅದು ಅನುಭವಕ್ಕೆ ಬರ್ತದೆ. ಅಂಗಾಡಿಯ ತನಿಖೆಗೆ ಸಹಕರಿಸುವ ಸಾಹಿತಿ ಜಯರಾಮನ ಕಾಳಜಿಗಳು, ಉದ್ದೇಶಗಳು ಭಿನ್ನವಾಗಿ ಇರುತ್ತವೆ. ಕ್ವೆಸ್ಟ್ ಫಾರ್ ಟ್ರೂಥ್, ಸತ್ಯಾನ್ವೇಷಣೆ, ನನ್ನದು ನಿಜವಾದ ಅರ್ಥದಲ್ಲಿ ಚಿದಂಬರ ರಹಸ್ಯವನ್ನು ಬೇಧಿಸುವುದು. ಜೋಗಿಹಾಳರು ಖೂನಿಯಾದರೋ ಇಲ್ಲವೋ ಅನ್ನುವ ಅಂಗಾಡಿಯ ಸತ್ಯಾನ್ವೇಷಣೆಗಿಂತ ಭಿನ್ನವಾದದ್ದು ಕೆಸರೂರಿನ ಹೈಬ್ರಿಡ್ ರಹಸ್ಯವನ್ನು ಭೇಧಿಸುವ ಪಾಟೀಲರ ಸತ್ಯಾನ್ವೇಷಣೆಗಿಂತ ಭಿನ್ನವಾದದ್ದು. ಜೀವನದ ಸ್ವರೂಪ ಏನು ಇದೇ ನನ್ನ ಚಿದಂಬರ ರಹಸ್ಯ.

ಕೆಸರೂರಿನ ಬದುಕು ಅತ್ಯಂತ ಜಟಿಲವೂ ರಹಸ್ಯಾತ್ಮಕವೂ ಆದ ವಿರೋಧಭಾಸಗಳಿಂದ ತುಂಬಿತ್ತು.[1] ಊರ ರಾಜಕಾರಣಕ್ಕೂ ಏಲಕ್ಕಿ ಸಂಶೋಧನಾ ಕೇಂದ್ರಕ್ಕೂ ಪರಿಸರ ನಾಶಕ್ಕೂ ಶೋಷಣೆ ದೌರ್ಜನ್ಯಗಳಿಗೂ ಪರಸ್ಪರ ಸಂಬಂಧವಿತ್ತು. ಪ್ರತಿಯೊಬ್ಬರೂ ಕೆಸರೂರಿನ ವಿದ್ಯಮಾನಗಳನ್ನು ತಮ್ಮ ಲಾಭಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಅಲ್ಲಿನ ವಿದ್ಯಾಮಾನಗಳು ಕೆಸರೂರಿನ ಬದುಕಿಗೊಂದು ವಿಲಕ್ಷಣ ಚಲನೆಯನ್ನು ತಂದುಕೊಟ್ಟಿತ್ತು. ಕೆಸರೂರಿನ ವಿದ್ಯಮಾನಗಳಿಂದ ರೋಸಿಹೋಗಿದ್ದ ಪಾಟೀಲರಿಗೆ ಸದ್ಯದಲ್ಲೇ ಕೆಸರೂರು ನಾಶವಾಗುವುದರ ಬಗ್ಗೆ ಯಾವ ಅನುಮಾನಗಳು ಇರಲಿಲ್ಲ.

ಒಂದು ಸಸ್ಯ ಅವನತಿ ಹಾದಿ ಹಿಡೀತೆನ್ನಿ. ಅದರಿಂದ ಬದುಕುತ್ತಿರುವ ಕೀಟ ಸ್ತೋಮ, ಅವುಗಳನ್ನೇ ಆಹಾರ ಮಾಡಿಕೊಂಡಿದ್ದ ಪಕ್ಷಿಗಳು, ಅವುಗಳಿಂದಲೇ ಬೀಜ ಪ್ರಸರಣವಾಗುತ್ತಿದ್ದ ವೃಕ್ಷ ಸಂಕುಲ, ಅದರ ಆಧಾರದ ಮೇಲೆ ಹೆಪ್ಪುಗಟ್ಟಿ ಮಳೆ ಸುರಿಸುವ ಮೋಡ ಮತ್ತು ಇವುಗಳೆಲ್ಲದರ ಆಧಾರದ ಮೇಲೆ ಬದುಕೋ ಮನುಷ್ಯ. ಇಡೀ ವಿಶ್ವ ಈ ತರ ಒಂದಕ್ಕೊಂದಕ್ಕೆ ಬಿಗಿದುಕೊಂಡಿರೋ ಸಮತೋಲನದಲ್ಲಿ ನಿಂತಿರೋ ಬಲೆ. ಈ ರುದ್ರ ನಾಟಕದ ತೀರ್ಮಾನ ಆಗಿದ್ದು, ಎಲ್ಲೋ ಯಾರಿಗೆ ಗೊತ್ತು. ಸುಲೇಮಾನ್ ಬೇರೆ ಕೈಲಿ ಲಂಚ ತಿಂದು ಕಾಡು ಮಾರಿಕೊಂಡ್ರಲ್ಲಾ ಆಗಲೂ

ಇದ್ದೇ ಇರಬಹುದು. ಕೆಸರೂರಿನ ಅವನತಿಗೆ ಸುಲೇಮಾನ್ ಬೇರಿಯ ಆಗಮನವಷ್ಟೇ ಕಾರಣವಾಗಿರಲಿಲ್ಲ. ವರ್ಗಬೇಧ ಜಾತಿಬೇಧಗಳಲ್ಲಿ ಮೈ ಮರೆತಿದ್ದ ಕೆಸರೂರಿಗೆ ಸುಲೇಮಾನ್‌ಬೇರಿಯ ಚಟುವಟಿಕೆಗಳು ಅರ್ಥವಾಗಲಿಕ್ಕೆ ಬಹಳ ಕಾಲ ಬೇಕಿತ್ತು. ಈ ಕೆಸರೂರಿಗೆ ಏನು ದುರಂತ ? ಯೋಚಿಸಿದಷ್ಟೂ ಅಂಗಾಡಿಗೆ ಇದೊಂದು ಅಗಮ್ಯ ಸಮಸ್ಯೆಯಾಗಿ ಕಂಡಿತ್ತು. ಪ್ರಕೃತಿಯಲ್ಲಿ ಆಗಿಹೊದ ಪ್ರಯೋಗಗಳ ಬಗ್ಗೆ ವಿವರಿಸುತ್ತಾ ಪಾಟೀಲರು ನಮ್ಮ ಪಾಲಿಗೆ ಭೂಮಿ ಹಾಳಾಗುತ್ತದೆಯೇ ಹೊರತು ಅದರ ಪಾಲಿಗಲ್ಲ. ಈಗಾಗಲೇ ಪ್ರಕೃತಿ ಎಷ್ಟೊಂದು ಪ್ರಯೋಗ ಮಾಡಿದೆಯೋ ಎಷ್ಟೊಂದು ತರತರದ ಪ್ರಾಣಿಗಳು ಸಸ್ಯಸಮೂಹ ಈ ಭೂಮಂಡಲದ ಮೇಲೆ ಆಗಿಹೋದವು. ನಿನಗೇ ತಿಳಿದಂತೆ ಒಂದು ಕಾಲಕ್ಕೆ ಜಲಚರಗಳೂ, ಆಮೇಲೆ ಸರೀಸೃಪಗಳು, ಮಹೋರಗಗಳು, ಸಸ್ತನಿಗಳೂ ಒಂದೆರಡೇ ಪ್ರಯೋಗವೇನಯ್ಯಾ ನಾವು ಇಲ್ಲಿ ಬದುಕೋಕೆ ನಾಲಾಯಕ್ ಅಂತನ್ನಿಸಿದರೆ, ನಾವು ಇಲ್ಲಿಂದ ನಿರ್ಗಮಿಸ್ತೀವಿ. ನಾಮಾವಶೇಷ ಆಗ್ತೀವಿ. ಆದರೆ, ನಿಧಾನವಾಗಿ ಪ್ರಕೃತಿ ಇನ್ನೊಂದು ತರದ ಪ್ರಯೋಗಕ್ಕೆ ಕೈ ಹಾಕ್ತದೆ. ಮತ್ತೆ ಭೂ ಮಂಡಲದ ಸ್ಮಶಾನದಿಂದ್ಲೇ ಇನ್ನೇನೋ ಒಂದು ಚೈತನ್ಯ ಚಿಮ್ಮತ್ತೆ ಅಷ್ಟೆ' ಗಾಢ ನಿಗೂಢವಾದ ತಾತ್ವಿಕ ತಿಳುವಳಿಕೆಯನ್ನು ಪಾಟೀಲರು ಹೇಳುತ್ತಾ ಕ್ರಿಯಾಶೀಲರನ್ನಾಗಿ ಮಾಡುತ್ತಾರೆ. ಕೆಸರೂರು ಹೇಬ್ರಿಡ್ ತಳಿಯನ್ನು ತೋರಿಸಲು ಅವರು ಸಹಾಯಕರನ್ನು ಕರೆದುಕೊಂಡು ಹೋಗುತ್ತಾರೆ. ಆಗ ಕತೆ ಕಟ್ಟಿಕೊಂಡು ಅದಕ್ಕೇ ಸಾಕ್ಷ್ಯಾಧಾರ ಹುಡುಕ್ತಾ ಚಿದಂಬರ ರಹಸ್ಯ ಬೇಧಿಸೋದಕ್ಕೆ ಆಗೋಲ್ಲ ನನಪಿರ್ಲಿ. ನಿಮಗೆ ಸಿಕ್ಕೋ ಸಾಕ್ಷ್ಯಾಧಾರಗಳೇ ಬೇರೆಯೋರಿಗೆ ಬೇರೆ ಕತೆಗಳಿಗೆ ಸಾಕ್ಷ್ಯಾಧಾರ ಆಗಿರ್ತದೆ. ಅತಿಬುದ್ಧಿಯ ಅವಿವೇಕ ಮಾಡ್ತಿದ್ದೀರಾ, ನನ್ನ ಹತ್ರ ಕಾಲು ಉಳುಕಿದರೂ ಗಾಳಿ ತಾಗಿದೆ, ಭೀತಿ ಮೆಟ್ಕೊಂಡಿದೆ ಅಂತಾ ಬರ್‍ತಾರೆ. ಅವ್ರೊಂದು ತರದ ಅಜ್ಞಾನದ ಅವಿವೇಕಿಗಳಾದರೆ, ನೀವಿನ್ನೊಂದು ತರದೋರು ಎಂದು ಬಯ್ಯುತ್ತಾ ಎಲ್ಲರನ್ನೂ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುತ್ತಾರೆ. ಈ ಮಾತುಗಳು ಎಲ್ಲಾ ಪಾತ್ರಗಳಿಗೂ ಅನ್ವಯಿಸುತ್ತದೆ. ಅಂಗಾಡಿ, ರಾಮಚಂದ್ರ, ಜಯರಾಮ, ಇವರೆಲ್ಲರೂ ತಮ್ಮ ವಿಚಾರಪೂರ್ವ ಚರ್ಚೆಯ ಚಕ್ರವ್ಯೂಹದಲ್ಲೇ ಸಿಕ್ಕಿಕೊಂಡಿದ್ದರೂ ಅದರಿಂದ ಹೊರಬಂದು ತಮ್ಮನ್ನು ಕ್ರಿಯೆಗೆ ಒಡ್ಡಿಕೊಳ್ಳುತ್ತಾರೆ. ವಿಚಾರವಾದಿ ಸಂಘದ ಕ್ರಾಂತಿಕಾರಿ ಹುಡುಗರೂ ಅತ್ಯಂತ ಹಾಸ್ಯಾಸ್ಪದ ಗೊಂದಲಗಳಿಗೆ ಸಿಕ್ಕಿಹಾಕಿಕೊಂಡರೂ ಏನನ್ನಾದರೂ ಸಾಧಿಸಲೇಬೇಕೆಂಬ ಛಲದಲ್ಲಿ ಕ್ರಿಯಾಶೀಲರಾಗುತ್ತಾರೆ.

ಹಿಂದೂವಾದಿಗಳು, ಮುಸಲ್ಮಾನರೂ, ಹರಿಜನರೂ, ಗೋಸಾಯಿಗಳೂ, ತಮ್ಮ ದಾಳಗಳನ್ನು ಉರುಳಿಸುತ್ತಲೇ ಇರುತ್ತಾರೆ.

ಜೂನಿಯರ್ ಕಾಲೇಜು ಹುಡುಗರ ವೈಚಾರಿಕತೆ, ರಾಮಾಚಾರಿಯ ಲೈಂಗಿಕ ಆಸಕ್ತಿಯ ತೀವ್ರ ಆಕಾಂಕ್ಷೆಯಿಂದ ಹಲವು ಬಗೆಯ ತಿರುವು ಪಡೆದುಕೊಳ್ಳುವ ಕೆಸರೂ ರಾಜಕಾರಣ, ಊರ ರಾಜಕಾರಣಕ್ಕೂ ಬಲಿ ಬಿದ್ದ ಏಲಕ್ಕಿ ಕೇಂದ್ರದ ಸಂಶೋಧನೆ, ಎಲ್ಲವನ್ನೂ, ಜೋಗಿಹಾಳ್ ವಿಶಯಕ್ಕೆ ತಂದು ನಿಲ್ಲಿಸುವ ವಿದ್ಯಾವಂತ ಹರಟೆ ಇವುಗಳಲ್ಲಿ ಸತ್ಯ ಶೋಧನೆಯ, ಕ್ರಿಯಾಶೀಲತೆಯ, ನೈತಿಕ ಕಳಕಳಿಯ, ಸಾಮಾಜಿಕ ಪ್ರಜ್ಞೆಯ ವಿಕಾರಗೊಳ್ಳುವ ಅರಿವಿನ ಸ್ಫೋಟಗಳಿಗೆ, ಎಚ್ಚರವಾಗುವ ಕ್ಷಣಗಳಿಗೆ, ಅರ್ಥಪೂರ್ಣವಾಗಿ ಮುಖಾಮುಖಿಯಾಗಿಸುತ್ತಾರೆ.

೧೯೭೭ರಲ್ಲಿ ಅವರು ಮತ್ತು ಅವರ ಗೆಳೆಯರು ಸಂಘಟಿಸಿದ **ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ** ಕರ್ನಾಟಕ ಸಾಂಸ್ಕೃತಿಕ ಲೋಕದ ಬಹುದೊಡ್ಡ ಮೈಲಿಗಲ್ಲು. ಎಪ್ಪತ್ತರ ದಶಕದಲ್ಲಿ ಮತ್ತು ಎಂಭತ್ತರ ಆದಿ ಭಾಗದಲ್ಲಿ ಕರ್ನಾಟಕದ ಜನಪರ ಚಳುವಳಿಗಳಲ್ಲಿ ಗುರುತಿಸಿಕೊಂಡಿದ್ದ ತೇಜಸ್ವಿ ಅನಂತರ ಚಳುವಳಿಯಿಂದ ದೂರ ಸರಿದರೂ, ಜನಪರ ಚಳುವಳಿಗಳ ಸಂಪೂರ್ಣ ಸಂಪರ್ಕವನ್ನು ಎಂದೂ ಕಳೆದುಕೊಳ್ಳಲಿಲ್ಲ. ಕನ್ನಡ ನಾಡಿನ ಯುವ ಜನಾಂಗವನ್ನು ಜ್ಞಾನ ಸಾಗರದ ಕಡೆಗೆ ಕರೆದೊಯ್ಯುವ ಮಹಾಕಾಯಕಕ್ಕೆ ತಮ್ಮನ್ನು ತಾವು ಸಿದ್ಧಗೊಳಿಸಿಕೊಂಡರು. ಅವರ ಸೃಷ್ಟಿಶೀಲ ಸಾಹಿತ್ಯದಲ್ಲಿ ಸಾಮಾಜಿಕ ಕಳಕಳಿ, ವೈಚಾರಿಕ ಪ್ರಜ್ಞೆ, ವೈಚಾರಿಕ ಮನೋಧರ್ಮಗಳನ್ನೂ ಕಾಣಬಹುದು. ಈ ಎಲ್ಲ ಕಾರಣಗಳಿಂದ ಅವರು ಹೊಸ ಜನಾಂಗದ **ಹೈಟೆಕ್ ಗೈಡಾಗಿದ್ದಾರೆ.**

ತಮ್ಮ ಜೀವನದ ಬಹುಪಾಲು ಕಾಲವನ್ನು ಮಲೆನಾಡಿನ ಕಾಡುಗಳ ನಡುವೆ ಕಳೆದ ತೇಜಸ್ವಿ ಆ ಮೂಲಕವೇ ಜಗತ್ತನ್ನು ಗ್ರಹಿಸಲು ಯತ್ನಿಸಿದರು. ವರ್ತಮಾನದ ಸಮಸ್ಯೆಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಿದ್ದರು. ರಾಜಕಾರಣದ ವಿರೋಧ ಭಾವನೆಯನ್ನು ಹೊಂದಿದ್ದ ಅವರು ಎಂದೂ ಅಧಿಕಾರ, ಪ್ರಶಸ್ತಿಗೆ ಆಸೆಪಟ್ಟವರಲ್ಲ, ಪ್ರಶಸ್ತಿ ಬಂದರೂ ಸ್ಪಷ್ಟವಾಗಿ ನಿರಾಕರಿಸಿದ ಅಪರೂಪದ ವ್ಯಕ್ತಿಯಾಗಿದ್ದರು.

ಅವರ ಕಡೆಯ ಕೃತಿ **'ಮಾಯಾಲೋಕ'**. ಮಾಯಾಲೋಕ ಗೊಂದಲಗೇರಿಯ ಸುತ್ತಮುತ್ತ ನಡೆದ, ನಡೆಯುತ್ತಿರುವ ಸರಣಿ ಘಟನೆಗಳ ಒಂದು ಭಾಗ, ಇಲ್ಲಿನ ಘಟನೆಗಳೆಲ್ಲ ಅನಿರ್ದಿಷ್ಟ ಗತಿಯಲ್ಲಿ ಹೆಣೆದುಕೊಳ್ಳುತ್ತವೆ.[10] ಪ್ರತಿ ಘಟನೆಯೂ ಮುಂದಿನ ಅನೇಕ ಘಟನೆಗಳಿಗೆ ಕಾರಣವಾಗುತ್ತಾ, ರೂಪುಗೊಳ್ಳುತ್ತಾ ಸಾಗುತ್ತದೆ. ಗ್ರಾಮೀಣ ಬದುಕಿನ ಜನಸಾಮಾನ್ಯರ ಸಂಕೀರ್ಣ ಜೀವನ ಕಥೆಯಾಗಿದೆ. ಆದರೆ, ಬದುಕನ್ನು ತನ್ನಲ್ಲೇ ಮಾನವ ಮಿತಿಗೆ ಮೀರಿದ ಮಾಯೆಯನ್ನು ತನ್ನಲ್ಲಿ ಅಡಗಿಸಿಕೊಂಡಿದೆ. ಅದು ಪ್ರಕೃತಿಯ ನಿಗೂಢತೆಯೇ ಆಗಿದೆ. (ಆ ನಿಗೂಢತೆಯನ್ನು ಶೋಧಿಸುವ ಕೆಲಸದಲ್ಲಿ ನಿರಂತರವಾಗಿದ್ದ ತೇಜಸ್ವಿ ತಮ್ಮ ಕೆಲಸವನ್ನು ಅರ್ಧಕ್ಕೇ ನಿಲ್ಲಿಸಿ, ಹೊರಟುಹೋಗಿದ್ದಾರೆ).

ಇಲ್ಲಿನ ಕಥಾ ಪ್ರತಿಮೆಗೂ ದೃಶ್ಯ ಪ್ರತಿಮೆಗಳೂ ಓದುತ್ತಾ ಹೋದಂತೆ, ಒಂದರ ಮೇಲೊಂದು ಸಂಯೋಜನೆಗೊಳ್ಳುತ್ತಾ, ಮಾಯಾಲೋಕವನ್ನು ಸೃಷ್ಟಿಸುತ್ತದೆ. ಮಾಯಾಲೋಕ ಒಂದು ಕಥೆಯಲ್ಲ, ಅನೇಕ ಕಥೆಗಳ ಹಂದರ. ಏರುಗತಿಯ ನಿರೂಪಣೆ ಹಾಗೂ ಒಂದು ತಾರ್ಕಿಕ ಅಂತ್ಯವನ್ನು ತಿಳಿಯುವ ಅನೇಕ ಪ್ರಕ್ರಿಯೆಗಳು ಶೋಧನೆಗಳು ಅಗತ್ಯವಾಗಿವೆ.

ಸುರಿದ ಭಾರೀ ಮಳೆಗೆ ಹೇಮಾವತಿಗೆ ಸೇರುವ ಹಳ್ಳ ತನ್ನ ಪಾತ್ರ ಬದಲಿಸಿ, ಮಾಮೂಲಿ ಜಾಗದಿಂದ ಒಂದು ಕಿಲೋಮೀಟರ್ ದೂರದಲ್ಲಿ ಹರಿಯುತ್ತದೆ. ಈ ಹಳ್ಳ ಹೇಮಾವತಿಯನ್ನು ಸೇರುವ ಜಾಗವನ್ನು ನೋಡಬೇಕೆಂಬ ಹಠದಿಂದ ಲೇಖಕರು ಮತ್ತವರ ಸ್ನೇಹಿತರು ಹೊರಡುತ್ತಾರೆ. ಆದರೆ, ಹಳ್ಳಿ ಹೇಮಾವತಿ ನದಿಗೆ ಸಂಪೂರ್ಣ ವಿರುದ್ಧ ದಿಕ್ಕಿನಲ್ಲಿ ಹರಿಯುತ್ತಿರುತ್ತದೆ. ಇದರ ಅಂತ್ಯವನ್ನು ಕಾಣಬೇಕೆಂದು ಹೊರಟಾಗ ಹಳ್ಳಿ ದಟ್ಟವಾದ ಕಾಡಿನಲ್ಲಿ ಹರಿಯುತ್ತದೆ. ಬರಬರುತ್ತಾ ಅದರ ಗಾತ್ರ ಹಿರಿದಾಗಿ ಊರಳ್ಳಿ, ಗದ್ದೆ, ಬಯಲು, ಈಚಲು ಮರ, ಹಳ್ಳದ ಗುಡ್ಡ, ಯಾವುದೂ ಕಾಣದಂತಾಗಿ ಪರ್ವತ, ಕಾಡು ಎಲ್ಲ ಸೇರಿ ಒಂದು ಚಕ್ರವ್ಯೂಹವನ್ನು ನಿರ್ಮಿಸುತ್ತವೆ. ಇದರಿಂದ ಬಿಡಿಸಿಕೊಂಡು ಅದರ ಅಂತ್ಯ ಕಾಣದೆ ಅವರು ಅವರ ಸ್ನೇಹಿತರು ಹಿಂದಿರುಗುತ್ತಾರೆ.

ತೇಜಸ್ವಿಯವರು ಅನೇಕ ಕೃತಿಗಳನ್ನು ರಚಿಸಿ, ಕನ್ನಡ ಓದುಗ ಸಂಖ್ಯೆಯನ್ನು ಜ್ಞಾನದ ದಿಗಂತವನ್ನು ವಿಸ್ತರಿಸಿದ್ದಾರೆ. ತಮ್ಮ ಸುತ್ತಲಿನ ಜಗತ್ತಿನ ಬಗ್ಗೆ ಅಪಾರ ಕುತೂಹಲ,

ಬೆರಗು, ಮುಗ್ಧತೆಗಳನ್ನು ಹೊಂದಿ, ಜಗತ್ತನ್ನು, ಪರಿಸರವನ್ನೂ, ಮನುಷ್ಯನನ್ನೂ ಸೂಕ್ಷ್ಮವಾಗಿ ಗಮನಿಸಿದ್ದಾರೆ.

ಊರಳ್ಳಿಗೂ ಹೇಮಾವತಿ ನದಿಗೂ ನಡುವೆ ಇರುವ ಹಳ್ಳಿ ಹೆಸರೇ ಮಕ್ಕಿಗದ್ದೆ. ಈ ಊರಿನ ಮೂಲಕ ಹೋಗುವ ರಸ್ತೆ ಸಹ್ಯಾದ್ರಿ ಪರ್ವತಗಳ ತಪ್ಪಲಿನಲ್ಲಿದ್ದ ಹಳ್ಳಿ ಕೊಂಪೆಗಳಿಗೆಲ್ಲಾ ಬಸ್ಸು ಹೋಗುತ್ತಿದ್ದುದರಿಂದ ಒಳ್ಳೆ ರಸ್ತೆ ಮಾಡಿದ್ದರು. ಈ ರಸ್ತೆಯಿಂದಾಗಿ ಮಕ್ಕಿಗದ್ದೆಯವರೆಗೆ ಊರಳ್ಳಿಯವರಂತೆ ನಿರಾತಂಕವಾಗಿ ಕಳ್ಳಭಟ್ಟಿ ದಂಧೆ ನಡೆಸಲು ಸಾಧ್ಯವಾಗಿರಲಿಲ್ಲ. ಒಳ್ಳೆ ರಸ್ತೆ ಮನೆಮನೆಗೆ ನಲ್ಲಿ ನೀರಿನ ವ್ಯವಸ್ಥೆ ಮಾಡಿಕೊಂಡಿದ್ದಾರೆಂದು ಊರಳ್ಳಿಯವರಿಗೆ ಮಕ್ಕಿಗದ್ದೆಯವರ ಮೇಲೂ, ಷರಾಬು ವ್ಯವಹಾರದಲ್ಲಿ ಒಳ್ಳೆ ಲಾಭ ಮಾಡುತ್ತಿದ್ದಾರೆಂದು ಊರಳ್ಳಿಯವರ ಮೇಲೆ ಮಕ್ಕಿಗದ್ದೆಯವರಿಗೂ ಅಸಮಾಧಾನ, ಅಸೂಯೆ ಇತ್ತು. ಬೇಸಿಗೆ ಕಾಲ ಹೆಚ್ಚಾದಂತೆ, ಬಿಸಿಲಿನ ತಾಪಕ್ಕೆ ಹಳ್ಳದ ನೀರೆಲ್ಲಾ ಬತ್ತಿ ಹೋಗಿದ್ದರಿಂದ ಜನಗಳ ಅಸಹನೆ ಹೆಚ್ಚಿ, ಎರಡೂ ಊರಿನವರೂ ಒಮ್ಮೆ ಜಗಳ ಮಾಡಿಕೊಂಡರು.

ನದಿ ಹರಿಯುವ ಹಳ್ಳಕ್ಕೆ ಊರಳ್ಳಿ ಮತ್ತು ಮಕ್ಕಿಗದ್ದೆ ನಡುವೆ ಪ್ರವಾಹ ಹರಿದು, ಆಳವಾದ ಗುಂಡಿಗಳಾಗಿದ್ದವು. ಅನೇಕ ತರದ ಮೀನುಗಳು ಮೊಟ್ಟೆಗಳನ್ನಿಡಲು ಆ ಗುಂಡಿಗೆ ಬರುತ್ತಿದ್ದವು. ಆ ಗುಂಡಿಯಲ್ಲಿ ಮೀನು ಹಿಡಿಯುವ ಹಕ್ಕು ತಮ್ಮದೆಂದು ಎರಡು ಹಳ್ಳಿಯವರು ಜಗಳವಾಡಿದ್ದರಿಂದ ಅಲ್ಲಿ ಮೀನು ಹಿಡಿಯುವುದಿದ್ದರೆ, ಎರಡು ಊರಿನವರೂ ಸೇರಿಯೇ ಹಿಡಿಯಬೇಕೆಂದು ಕಟ್ಟಳೆ ಮಾಡಿದ್ದರು. ಮೀನುಗಳ ವಿಷಯದ ಕಾರಣದಿಂದಾಗಿ ಎರಡು ಊರಿಗೂ ಗಡಿ ಕಾಳಗ ನಡೆಯುತ್ತಿತ್ತು. ಇದು ಗಡಿ ಕಾಳಗದ ಸಂಕೇತವಾಗಿತ್ತು. ರಾತ್ರಿಯೆಲ್ಲಾ ಅವು ಮಾಡುತ್ತಿದ್ದ ಸದ್ದು ಯಾರೋ ಗುಂಡಿಗೆ ಬಿದ್ದವರ ರೀತಿಯಲ್ಲಿ ಕೇಳಿಸುತ್ತಿತ್ತು.

ಒಮ್ಮೆ ಮಕ್ಕಿಗದ್ದೆಯ ಕಮ್ಮಾರ ಇಕ್ಬಾಲ್ ಸಾಬಿ ಮತ್ತು ಕುಮರಿಸೆಟ್ಟು ಈ ಗುಂಡಿಯನ್ನು ನೋಡಲು ಬಂದರು. ಗುಂಡಿಯಲ್ಲಿ ಒಂದು ಮೀನು ಕಾಣಲಿಲ್ಲ. ಇದರಿಂದ ಅಕ್ಬಾಲ್ ಸಾಬಿಗೆ ಕುಮರಿ ಸೆಟ್ಟಿಗೆ ರೇಗಿ ಹೋಯಿತು. ಕಾರೇಕಾಯಿಗಳನ್ನು ಜಗ್ಗಿ ಕದಡಿ, ಆ ಗುಂಡಿಯಲ್ಲಿನ ಮೀನುಗಳನ್ನು ಹಿಡಿದುಬಿಟ್ಟಿದ್ದರು. ಇದು ಊರಳ್ಳಿಯ ಕೈವಾಡ ಎಂದು ಸಂಶಯ ಮೂಡಿತು.

ಈ ಕಾದಂಬರಿಯಲ್ಲಿ ಬರುವ ಅಪ್ಪಣ್ಣಪ್ಪ, ಭಂಡಾರಿಬಾಬು, ಕರಾಟೆ ಮಂಜ, ಇಕ್ಬಾಲ್ ಸಾಬಿ, ಕುಮರಿಸೆಟ್ಟಿ - ಮುಂತಾದವರೆಲ್ಲ ತಮ್ಮ ಕೆಲಸಗಳಲ್ಲಿ ತೊಡಗಿಕೊಂಡರೂ ಯಾವುದೋ ಒಂದು ನಿಗೂಢ ಅವರನ್ನು ಆವರಿಸಿರುತ್ತದೆ. ಈ ಕೃತಿಯಲ್ಲಿ ಮಾಯೆಯೆಂದರೆ, ಬೇರೇನಲ್ಲ, ಅಪರಿಚಿತತೆ ಹಾಗೂ ಆ ಅಪರಿಚಿತತೆ ಉಂಟು ಮಾಡುವ ಅನುಮಾನ. ಆತಂಕ - ಆಘಾತಗಳ ಪರಿಣಾಮ ಸ್ವರೂಪವೇ ಆಗಿದೆ. ಹೊರಗಿನ ಸಂಸ್ಕೃತಿಯಿಂದ ಬಂದ ಯಾವುದೇ ಜೀವ ಅಥವಾ ವ್ಯಕ್ತಿ ಅಥವಾ ವಿಚಾರ ಸ್ಥಳೀಯಗೊಳ್ಳದೇ ಹೋದರೆ, ಅದು ಒಂದಲ್ಲ ಒಂದು ಹಂತದಲ್ಲಿ ಸ್ಥಳೀಯ ಸಂಸ್ಕೃತಿಯನ್ನು ವಿಭ್ರಮೆಗೆ ಸಿಲುಕಿಸಿ ಅನಾಹುತಗಳಿಗೆ ಎಡೆಮಾಡಿಕೊಡುತ್ತದೆ.

ಇಲ್ಲಿ ಸಂಸ್ಕೃತಿ ಎಂದರೆ, ಜೀವಕ್ರಮ ಹಾಗೂ ಜೀವನ ಕ್ರಮವೂ, ಆಗಿದೆ. ಕಳೆದ ಐವತ್ತು ವರ್ಷಗಳಲ್ಲಿ ಗ್ರಾಮೀಣ ಕರ್ನಾಟಕ ಕಂಡ ಪ್ರಾಕೃತಿಕ-ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಬದಲಾವಣೆಗಳ ಚಿತ್ರಣ ಈ ಕಾದಂಬರಿಯಲ್ಲಿದೆ. ಇದೊಂದು ವಿಭ್ರಮೆ ಸೃಷ್ಟಿಸುವ ಮಾಯಾಜಾಲವಾಗಿದ್ದು, ಅದರೊಳಗೆ ಸಿಲುಕಿಕೊಂಡಿರುವ ಸಮಾಜದ ಅಂತಃಶಕ್ತಿಯಲ್ಲ, ಆ ಸಮಾಜಕ್ಕೆ ನೀರುಣಿಸುವ ಜಲಮೂಲಗಳ ಜೊತೆಗೆ ಬತ್ತಿಹೋಗುವ ದುರಂತವನ್ನು ಪ್ರಾಕೃತಿಕ ಅಲ್ಲೋಕ ಕಲ್ಲೋಲದ ರೂಪಕದ ಮೂಲಕ ಧ್ವನಿಪೂರ್ಣವಾಗಿ ಚಿತ್ರಿಸಿದ್ದಾರೆ. ಆ ಧ್ವನಿಯಲ್ಲಿ ಈ ವಿಶ್ವ ಸೃಷ್ಟಿಯನ್ನು ಹಾಗೂ ಅದರ ಭಾಗವಾದ ಮನುಷ್ಯ ಸಮಾಜವನ್ನು ಈ ದುರಂತದಿಂದ ರಕ್ಷಿಸಬಹುದಾದ ಶಕ್ತಿಗಳು ಹೊರಹೊಮ್ಮುತ್ತವೆ.

ಮಾಯಾಲೋಕದ ಮುಖ್ಯವಸ್ತು ಒಂದು ಅಜ್ಞಾತ ಹಳ್ಳ. ಸ್ಥಳೀಯ ಭೂಗೋಳಕ್ಕೆ ಸೇರಿದ ಒಂದು ಅಜ್ಞಾತ ಹಳ್ಳದ ಜೀವನಾಡಿಯನ್ನು ಹಿಡಿದು, ನೈಸರ್ಗಿಕ ಸಂಪನ್ಮೂಲಗಳು, ವ್ಯಕ್ತಿಮಟ್ಟದಿಂದ ಹಿಡಿದು ರಾಷ್ಟ್ರಮಟ್ಟದವರೆಗೆ ಸರ್ವವ್ಯಾಪಿಯಾಗಿ ರೂಪಿಸುವ ವೈವಿಧ್ಯಮಯ ಜೀವನ ಶೈಲಿಗಳನ್ನೂ ಮತ್ತು ಜೀವಿ ವೈವಿಧ್ಯದ ನೆಲೆಗಳನ್ನು ಮಾಯಾಲೋಕದಲ್ಲಿ ಚಿತ್ರಿಸಲಾಗಿದೆ. ಪ್ರಾಚೀನ ಕಾಲದಲ್ಲಿ ನದಿ ದಂಡೆಯ ನಾಗರೀಕತೆಗಳನ್ನು ನಾವಿಂದು ಅಧ್ಯಯನ ಮಾಡುತ್ತಿರುವ ಹಾಗೆಯೇ ತೇಜಸ್ವಿಯವರು ಊರಳ್ಳಿ ಹಾಗೂ ಮಕ್ಕಿಗದ್ದೆಗಳಿಗೆ ಸಂಬಂಧಪಟ್ಟ ಹಳ್ಳಿ ಬದುಕನ್ನು ಅನಾವರಣಗೊಳಿಸಿದ್ದಾರೆ. ಜೊತೆಗೆ ಆಧುನಿಕ ನಾಗರೀಕತೆ ಮತ್ತು ವಿಜ್ಞಾನದ

ದುಷ್ಕೃತ್ಯಗಳನ್ನು ವಿಡಂಬಿಸಿದ್ದಾರೆ. ಜೀವಂತ ಸಮಾಜವೊಂದು ಜಡತೆಯಿಂದ ಎಚ್ಚೆತ್ತು ತನ್ನೊಳಗೆ ವಿನಾಶ-ವಿಕಾಸ, ಯಥಾಸ್ಥಿತಿ-ಪರಿವರ್ತನೆಗಳ ಮೂಲಕ ಕ್ರಮಿಸುವ ಚಲನಗಳು ಅಕ್ಷರ ಹಾಗೂ ಚಿತ್ರಗಳಲ್ಲಿ ಕಾಣಿಸಿಕೊಂಡಿವೆ. ಹೊಸ ನುಡಿಗಟ್ಟುಗಳು, ಹೊಸ ಉಕ್ತಿಭಂಗಿ, ಹೊಸ ಅಭಿವ್ಯಕ್ತಿ, ವಿಧಾನಗಳ ಬಗ್ಗೆ ನಾವೀಗ ಗಮನ ಹರಿಸಿ, ಹೊಸ ದಿಗಂತಗಳತ್ತ ಅನ್ವೇಷಣೆ ಹೊರಡಬೇಕಾಗಿದೆ ಎಂಬ ತೇಜಸ್ವಿಯವರ ನುಡಿಗಳನ್ನು ಮನನ ಮಾಡಿಕೊಳ್ಳಬೇಕಾಗಿದೆ.

ಮಾಯಾಲೋಕದ ಮುನ್ನುಡಿಯಲ್ಲಿ ತೇಜಸ್ವಿಯವರು ಇದೊಂದು ಬೆಟ್ಟು ತೋರಿಸಿ, ನಿರ್ದೇಶಿಸಲಾರದಷ್ಟು ಸೂಕ್ಷ್ಮ ಮತ್ತು ಪರೋಕ್ಷ ಸಂವಹನ ಕ್ರಿಯೆ ಎಂದು ಹೇಳಿದ್ದಾರೆ. ಮಾಯಾಲೋಕದಲ್ಲಿ ನೂರಾರು ಮಾನವ ಪಾತ್ರಗಳು ಬರುತ್ತವೆ. ಅಷ್ಟೇ ದಟ್ಟವಾಗಿ ಹುಂಡುಕೋಳಿಯ ಜೀವನಕ್ರಮ, ಮಂಗ, ಚಿಟ್ಟುಗಿಳಿ, ಮೀನು, ಏಡಿ, ಹಾವು, ಅಳಿಲು, ನವಿಲು, ಜೇನು, ಕಾಡಹಂದಿ, ಜೇಡ ಬರುತ್ತವೆ. ದಾಸವಾಳ ಜೊಂಡು ಅಡಕ ಮೆಣಸಿನ ಗಿಡ ಮುಂತಾದ ಸಸ್ಯ ಜಗತ್ತು ಬರುತ್ತದೆ. ಮಾನವ ಹಾಗೂ ಸಸ್ಯ ಪ್ರಾಣಿಕೀಟಗಳ ಎರಡೂ ಲೋಕಗಳು ಕಾದಂಬರಿಯಲ್ಲಿ ಅನಾವರಣಗೊಳ್ಳುತ್ತವೆ.

ನಿಸರ್ಗದ ನೆಲೆಗಳು ಮತ್ತು ಬದುಕಿನ ಸಂಬಂಧಗಳ ಜೊತೆ ತೇಜಸ್ವಿಯವರು ಹಗಲಿನ ಮುಖಾಮುಖಿಯನ್ನೂ ನಡೆಸುವುದಿಲ್ಲ. ಬದಲಿಗೆ ಇರುಳಿನ ಮುಖಾಮುಖಿಯನ್ನು ನಡೆಸುತ್ತಾ, ದೃಷ್ಟಿ ಗೋಚರವಾದ ವಿಸ್ಮಯ ಮತ್ತು ಭಾವಗೋಚರವಾದ ನಿಗೂಢತೆಯನ್ನು ಮುಂದಿಡುತ್ತಾರೆ. ಕಾರೇಡಿಗಳ ವಂಶಾಭಿವೃದ್ಧಿಗೆ ಕಾರಣವೇನು ಎಂಬ ಜಿಜ್ಞಾಸೆ ಕಾದಂಬರಿಯಲ್ಲಿದ್ದರೂ ಇದಕ್ಕೆ ಖಚಿತವಾದ ಕಾರಣವಿಲ್ಲ. ಹುಂಡುಕೋಳ್ಳಗಳನ್ನೆಲ್ಲಾ ಹಕ್ಕಿಪಿಕ್ಕಿಯವರು ಖಾಲಿ ಮಾಡಿದ್ದರಿಂದ ಕಾರೇಡಿಗಳು ಹೆಚ್ಚಿಕೊಂಡಿದೆಯೇ? ನಿಶಾಚರ ಹಕ್ಕಿಗಳು ತಂದು ಬೀಳಿಸಿದ ಸತ್ತ ಹಾವನ್ನೂ ತಿನ್ನಲು ಕಾರೇಡಿಗಳು ಮುಗಿಬಿದಿದ್ದಿವೆಯೇ? ಸಮೃದ್ಧವಾದ ಜೌಗಿನ ಪ್ರದೇಶವಾದ್ದರಿಂದ ಸಹಜವಾಗಿಯೇ ಕಾರೇಡಿಗಳ ನೆಚ್ಚಿನ ತಾಣವಾಯಿತೆ? ಹೀಗೆ ಅನೇಕ ವಿಸ್ಮಯ ಅನಾವರಣಗೊಳಿಸುತ್ತ, ನಿಗೂಢತೆಯನ್ನು ಹಾಗೆಯೇ ಉಳಿಸುತ್ತಾರೆ.

ಮಾಯಾಲೋಕದಲ್ಲಿ ಸಾಮಾನ್ಯ ಕ್ಷುದ್ರ ಎನಿಸುವ ವಿವರಗಳ ಮೂಲಕ ಬದುಕಿನ ಕಥನವನ್ನು ಕಟ್ಟುವ ಪ್ರಯೋಗವಿದೆ. ಮೆಣಸಿನಕಾಯಿ ಬೆಳೆಯಲು ಹಳ್ಳಕ್ಕೆ ನೀರು ಕಟ್ಟುವ ಕ್ರಿಯೆ ವಿಸ್ತಾರವಾಗಿ ಬಂದಿದೆ. ಮಾಯಾಲೋಕವನ್ನು ಸಣ್ಣಕತೆಗಳ ಮಹಾಕಾವ್ಯ ಎಂದು ಕರೆಯಬಹುದು. ಸಾಮಾನ್ಯ ವಿವರಗಳ ಮೂಲಕ ಬದುಕನ್ನು ಹಿಡಿದುಕೊಡುವ ಯತ್ನದಲ್ಲಿ ಮರಳಿಮಣ್ಣಿಗೆ, ಮದುಮಗಳು, ಒಡಲಾಳ, ಗಂಗಾಮಾಡಿ, ಗ್ರಾಮಾಯಣ - ಮುಂತಾದ ಕಾದಂಬರಿಗಳು ಯಶಸ್ವಿಯಾಗಿವೆ. ಇಲ್ಲಿನ ಮಾಯಾಲೋಕದಲ್ಲಿನ ಸಣ್ಣ ವಿವರಗಳು ಹಾದಿಬೀದಿಯಲ್ಲಿ ನಡೆಯುವವೇ ಹೊರತು ಮನೆಯ ಒಳಗಲ್ಲ. ಮನೆಯೊಳಗಿನ ವಿಷಯ ಬಂದಾಗ, ತೇಜಸ್ವಿಯವರು ಅಷ್ಟು ಆಸಕ್ತರೂ ಅಲ್ಲ, ಸೂಕ್ಷ್ಮರೂ ಅಲ್ಲ.

ಆಧುನೀಕರಣದ ಪ್ರಕ್ರಿಯೆಯಲ್ಲಿ ನಮ್ಮ ಗ್ರಾಮೀಣ ಸಮುದಾಯಗಳಲ್ಲಿ ಸೌಂದರ್ಯಕ್ಕೆ ಬದಲಾಗಿ, ಕುರೂಪಗಳು ಸೃಷ್ಟಿಯಾಗುತ್ತಿರುವುದನ್ನು ಸೂಚಿಸುವುದೇ ಈ ಹೊಸ ಪ್ರಯೋಗದ ಉದ್ದೇಶವಾಗಿದೆ. ಹೊಸ ಅಭಿವ್ಯಕ್ತಿ ಕ್ರಮಗಳ ಹುಡುಕಾಟದಲ್ಲಿ ಸಚಿತ್ರ ಸಾಕ್ಷ್ಯ ರೂಪಕದ ಮಾದರಿಯೊಂದನ್ನು ಈ ಕೃತಿಯ ಮೂಲಕ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ.

ಅಡಿಟಿಪ್ಪಣಿ

1. ಡಾ॥ ಎಚ್.ಎಂ. ಮಹೇಶ್ವರಯ್ಯ, ಪೂರ್ಣಚಂದ್ರ ತೇಜಸ್ವಿ ಪುಟ - 41
   ಪ್ರಕಟಣೆ, ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್,
2. ಡಾ॥ ಎಚ್.ಎಂ. ಮಹೇಶ್ವರಯ್ಯ, ಪೂರ್ಣಚಂದ್ರ ತೇಜಸ್ವಿ ಪುಟ - 41
   ಪ್ರಕಟಣೆ, ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್,
3. ಡಾ॥ ಎಚ್.ಎಂ. ಮಹೇಶ್ವರಯ್ಯ, ಪೂರ್ಣಚಂದ್ರ ತೇಜಸ್ವಿ ಪುಟ - 48
   ಪ್ರಕಟಣೆ, ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್,
4. ಸಂಪಾದಕರು ಪ್ರೊ. ಜಿ.ಟಿ. ವೀರಪ್ಪ ಡಾ॥ ಎಂ. ಬೈರೇಗೌಡ,
   ತೇಜಸ್ವಿ - ಸಾಹಿತ್ಯ ಕೃಷಿ, ಪುಟ - 25
5. ಟಿ.ಪಿ. ಅಶೋಕ, ತೇಜಸ್ವಿ ಕಥನ, ಪುಟ - 70
6. ಡಾ॥ ಎಚ್.ಎಂ. ಮಹೇಶ್ವರಯ್ಯ: ಪೂರ್ಣ ಚಂದ್ರ ತೇಜಸ್ವಿ ಪುಟ - 44
7. ಟಿ.ಪಿ. ಅಶೋಕ, ತೇಜಸ್ವಿ ಕಥನ. ಪುಟ - 95
8. ಸಂಪಾದಕರು ಪ್ರೊ. ಜಿ.ಟಿ. ವೀರಪ್ಪ ಡಾ॥ ಎಂ. ಬೈರೇಗೌಡ,
   ತೇಜಸ್ವಿ - ಸಾಹಿತ್ಯ ಕೃಷಿ, ಪುಟ - 23
9. ಟಿ.ಪಿ. ಅಶೋಕ, ತೇಜಸ್ವಿ ಕಥನ. ಪುಟ - 88.
10. ಕೃಪೆ : ಮಯೂರ, ಜೂನ್ 2007

ವಿಶ್ವರಚನೆಯ ವಿಸ್ಮಯಗಳು :

ನಮ್ಮ ಸುತ್ತಮುತ್ತಲಿನ ಜಗತ್ತು ಹಾಗೂ ಪರಿಸರ ನಿಗೂಢ ವಿಸ್ಮಯ ಹಾಗೂ ಕುತೂಹಲದಿಂದ ಕೂಡಿದೆ. ಮನುಷ್ಯನ ಬುದ್ಧಿವಂತಿಕೆ ಬೆಳೆದಂತೆಲ್ಲಾ ಅನೇಕ ಸಂಶೋಧನೆಗಳು ಆವಿಷ್ಕಾರಗಳು ಅನ್ವೇಷಣಗಳು ನಡೆದಿದೆ. ನಡೆಯುತ್ತಲೂ ಇವೆ. ಜಗತ್ತಿನ ಅನೇಕ ರಾಷ್ಟ್ರಗಳು ತಮ್ಮ ರಾಷ್ಟ್ರದ ಮುಂಗಡ ಪತ್ರದಲ್ಲಿಯೇ ಕೋಟ್ಯಾಂತರ ರೂಪಾಯಿಗಳನ್ನು ಸಂಶೋಧನೆಗೆಂದೇ ಮೀಸಲಿಟ್ಟಿದ್ದಾರೆ. ಈ ಬ್ರಹ್ಮಾಂಡವು ಹೇಗೆ ಹುಟ್ಟಿತು? ಹುಟ್ಟಿದ್ದಾದರೆ ಇದಕ್ಕೇ ಸಾವು ಇರಬೇಕಲ್ಲವೇ? ಹೇಗೆ ಸಾಯುತ್ತದೆ? ಈ ಸೃಷ್ಟಿಗೆ ಯಾವುದಾದರೂ ಅಂತಿಮ ಉದ್ದೇಶ ಇದೆಯೆ? ಈ ಪ್ರಶ್ನೆಗಳು ಎಲ್ಲ ದೇಶದ ಎಲ್ಲಾ ಕಾಲದ ಸಂಸ್ಕೃತಿ ಮತ್ತು ನಾಗರೀಕತೆಗಳನ್ನೂ ಕಾಡಿವೆ.[1] ಪ್ರತಿಯೊಂದು ನಾಗರೀಕತೆಯೂ ಇದಕ್ಕೆ ತನ್ನದೇ ಆದ ರೀತಿಯಲ್ಲಿ ಉತ್ತರ ಕಂಡುಕೊಳ್ಳಲು ಯತ್ನಿಸಿವೆ. ಬೈಬಲ್, ಖುರಾನ್ ಭಗವದ್ಗೀತೆಗಳು ಸಹ ವಿಶ್ವರಚನೆಯ ವಿಸ್ಮಯದ ಅನೇಕ ಯಕ್ಷಪ್ರಶ್ನೆಗಳನ್ನು ಎದುರಿಸಿವೆ. ಇಂದಿಗೂ ಎದುರಿಸುತ್ತಿವೆ. ಒಂದು ಸಂಸ್ಕೃತಿ ಈ ಪ್ರಶ್ನೆಗೆ ರೂಪಿಸಿಕೊಂಡ ಉತ್ತರಗಳು ಆಯಾ ಸಮಾಜದ ಆಗುಹೋಗುಗಳ ಮೇಲೆ ಆಳವಾದ ಪರಿಣಾಮಗಳನ್ನು ಬೀರಿದೆ.

ಇಂದು ನಾವು ವಿಜ್ಞಾನದ ಯುಗದ ಮಂಚೂಣಿಯಲ್ಲಿದ್ದೇವೆ. ಕೆಲವು ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದ್ದರೂ, ಇನ್ನಿತರ ಕೆಲವು ಕ್ಷೇತ್ರಗಳಲ್ಲಿ ಏನನ್ನೂ ಸಾಧಿಸದೇ ಹಾಗೆಯೇ ಉಳಿದಿದ್ದೇವೆ. ನಮ್ಮ ಮುಂದೆ ವಿಜ್ಞಾನ ಹೊಸ ತರ್ಕ ಮತ್ತು ಹೊಸ ಸತ್ಯ ಶೋಧನೆಯ ಮಾರ್ಗಗಳನ್ನು ಮುಂದೆ ಇಟ್ಟಿದೆ. ತನ್ನ ಬುದ್ಧಿಶಕ್ತಿಯ ಸಾಮರ್ಥ್ಯಕ್ಕೆ ಅನುಗುಣವಾಗಿ ಈ ವಿಶ್ವದ ವಿಸ್ಮಯಗಳ ಬಗ್ಗೆ ಸ್ವಲ್ಪವೇ ತಿಳಿದುಕೊಂಡಿದ್ದಾನೆ. ಆದರೆ, ಮನುಷ್ಯ ಇಂದಿಗೂ ಎದುರಿಸುತ್ತಿರುವುದು ಈ ಜಗತ್ತು ಹುಟ್ಟಿದ್ದು ಹೇಗೆ? ಎಷ್ಟು ಹಿಂದೆ? ಇದಕ್ಕೆ ಸಾವು ಎಂದು? ಹೀಗೆ ಅನೇಕ ಪ್ರಶ್ನೆಗಳ ಬಗ್ಗೆ ಅಥವಾ ವಿಸ್ಮಯ ನಿಗೂಢಗಳ ಬಗ್ಗೆ ಅನೇಕ ವಿಜ್ಞಾನಿಗಳು ಬೇರೆ ಬೇರೆಯ ಸಿದ್ಧಾಂತಗಳನ್ನು ಮಂದಿಟ್ಟಿದ್ದಾರೆ.

ವಿಶ್ವಸ್ಥಾಯಿ ವಾದದ ಪ್ರಕಾರ ವಿಶ್ವವನ್ನು **'ಅನಾದಿ' 'ಅನಂತ'** ಎಂದು ಕರೆಯುತ್ತಾರೆ. ಮೊದಲು ಬ್ರಹ್ಮಾಂಡದಲ್ಲಿ ಅಲ್ಲಲ್ಲಿ ಸ್ಥಳೀಯವಾಗಿ ನಕ್ಷತ್ರಗಳು ಉದಯಿಸುತ್ತಿರಬಹುದು ಅಥವಾ ಸಾಯುತ್ತಿರಬಹುದು. ಆದರೆ, ವಿಶ್ವದ ಮೊತ್ತ

ಸ್ಥಾಯಿಯಾಗಿ ನಿರಂತರವಾಗಿ ಉಳಿದಿವೆ ಎಂದು ವಾದಿಸುತ್ತಾರೆ. ಇನ್ನೊಂದು ವಾದದ ಪ್ರಕಾರ ಇಡೀ ವಿಶ್ವ ಒಂದು ಬೀಜರೂಪಿಯಾದ ಮಹಾನ್ ಅಗ್ನಿ ಬಿಂದುವಿನಿಂದ ಆಸ್ಫೋಟಗೊಂಡು, ಎರಡು ಲಕ್ಷ ಮಿಲಿಯನ್ ವರ್ಷಗಳ ಹಿಂದೆ ಈ ವಿಶ್ವ ಹುಟ್ಟಿತು ಎಂದು ಹೇಳುತ್ತಾರೆ. ಖಗೋಳ ವಿಜ್ಞಾನಿ ಹಬಲ್ ಮತ್ತು ರಾಬರ್ಟ್‌ಸನ್ ಮೊದಲಾದವರು ತಮ್ಮ ವಾದದ ಪ್ರಕಟಣೆಗೆ ಅನಂತ ವಿಶ್ವದ ವಿದ್ಯಮಾನಗಳಿಂದ ಹಿಡಿದು ಅಣುಭೌತಶಾಸ್ತ್ರದವರೆಗಿನ ಸಾಕ್ಷ್ಯಾಧಾರಗಳನ್ನು ಮಂಡಿಸುತ್ತಾರೆ.[2] ಆಸ್ಫೋಟನೆಯಲ್ಲಿ ವಿದಳನಗೊಂಡು ವಿಕಾಸವಾಗುತ್ತಾ, ವಿಸ್ತಾರವಾಗುತ್ತಾ, ಕೊನೆಗೊಮ್ಮೆ ನಿಂತು ಸಂಕೋಚಗೊಳ್ಳುತ್ತಾ ಕುಗ್ಗತೊಡಗುತ್ತದೆ. ಕುಗ್ಗಿ ಕುಗ್ಗಿ ಕೊನೆಗೊಮ್ಮೆ ಬೀಜರೂಪಿ ಅಗ್ನಿಗೋಲವಾಗುತ್ತದೆ. ಮತ್ತೆ ಅಗಾಧ ಒತ್ತಡದಲ್ಲಿ ಸಂಭವಿಸುವ ಅಣುವಿದಳನದಿಂದ ಆಸ್ಫೋಟನೆಗೊಂಡು ವಿಶ್ವಸೃಷ್ಟಿ ಪುನರಾವರ್ತನೆಯಾಗುತ್ತದೆ ಎಂಬುದು ಸ್ಫೋಟವಾದಿಗಳ ವಾದ.

ವಿಶ್ವದ ದೂರಮಾನವನನ್ನು ವಿಜ್ಞಾನಿಗಳು ಜ್ಯೋತಿರ್ವರ್ಷಗಳ ಮೂಲಮಾನದಲ್ಲಿ ಅಳೆಯುತ್ತಾರೆ. ಬೆಳಕಿನ ಕಿರಣಗಳು ಒಂದು ಸೆಕೆಂಡಿಗೆ ೧೮೬೦೦ ಮೈಲು ಪ್ರಯಾಣ ಮಾಡುತ್ತವೆ. ಈ ವೇಗದಲ್ಲಿ ಸೂರ್ಯನಿಂದ ಬೆಳಕು ಭೂಮಿಗೆ ಬರಲು ಏಳು ನಿಮಿಷ ತೆಗೆದುಕೊಳ್ಳುತ್ತದೆ. ಖ್ಯಾತ ಖಗೋಳ ವಿಜ್ಞಾನಿ ಡಾ|| ಹಬಲ್ ನಮ್ಮ ಭೂಮಿಗೆ ಅತ್ಯಂತ ಹತ್ತಿರವಿರುವ ನೀಹಾರಿಕೆಯ ದೂರ ೨,೦೦,೦೦೦ ಜ್ಯೋತಿರ್ವರ್ಷಗಳು ಎಂದು ಕಂಡು ಹಿಡಿದರು. ನೀಹಾರಿಕೆಗಳಿಂದ ಬರುವ ಬೆಳಕಿನ ವರ್ಣತಂತುಗಳನ್ನು ವಿಶ್ಲೇಷಿಸಿ, ನೀಹಾರಿಕೆಗಳು ನಮ್ಮಿಂದ ದೂರ ಹೋಗುತ್ತಿರುವ ವೇಗ, ಕಾಲ ಕಳೆದಂತೆ ಹೆಚ್ಚಾಗುತ್ತಿವೆ ಎಂಬ ಹೇಳಿಕೆ ಸ್ಫೋಟವಾದಿಗಳ ವಾದಕ್ಕೆ ಹೆಚ್ಚಿನ ಸಾಕ್ಷಿ ಸಿಕ್ಕಂತಾಯಿತು. ಇವತ್ತು ನಮಗೆ ದೊರೆಯುತ್ತಿರುವ ಕಬ್ಬಿಣ, ಮ್ಯಾಂಗನೀಸ್, ಚಿನ್ನ, ಸತು, ತವರು, ಮುಂತಾದ ಅನೇಕ ಮೂಲಧಾತುಗಳು ಎಲ್ಲಿಂದ ಬಂದವು? ಎಂಬ ಪ್ರಶ್ನೆ ಕೆಲ ಕಾಲ ಸ್ಫೋಟವಾದಿಗಳನ್ನು ದಂಗುಬಡಿಸಿತ್ತು. ಆದರೆ, ಈಚೆಗೆ ಪರಮಾಣು ಸ್ಫೋಟದ ಪ್ರಯೋಗದಲ್ಲಿ ೨೦ ಮಿಲಿಯನ್ ಸೆಂಟಿಗ್ರೇಟ್ ಉಷ್ಣತೆಯಲ್ಲಿ ಹೀಲಿಯಂ ಧಾತುವಿನಿಂದಲೇ ಭಾರ ಲೋಹದ ಧಾತುಗಳು ಪರಿವರ್ತನೆಯಾಗಿ ಉಂಟಾಗುತ್ತವೆ ಎಂದು ಕಂಡು ಹಿಡಿದರು. ಹಾಗಾಗಿ ಸ್ಥಾಯಿ ವಾದಿಗಳು ಸ್ಫೋಟವಾದಿಗಳ ವಾದವನ್ನು ತಿರಸ್ಕರಿಸಲು ಅಸಾಧ್ಯವಾಗುತ್ತದೆ.

ಹೊಸ ಸಿದ್ಧಾಂತಗಳನ್ನು ರೂಪಿಸುವುದು ಎಂದರೆ ಒಂದು ಜಾಗದಲ್ಲಿನ ಹಳೆಯ ಕಟ್ಟಗಳನ್ನು ಕೆಡವಿ ಅಲ್ಲಿ ಹೊಸ ಗಗನಚುಂಬಿಗಳನ್ನು ಕಟ್ಟುವಂತೆ ಅಲ್ಲ, ಅದು ಪರ್ವತಾರೋಹಣದಂತೆ ಮೇಲೇರುತ್ತಾ ನಮ್ಮ ದೃಷ್ಟಿ ದಿಗಂತ ವಿಸ್ತಾರವಾಗುತ್ತಾ ನಮ್ಮ ಹೊಸ ಕಾಣ್ಕೆಗೂ ಹೊರಟ ಜಾಗಕ್ಕೂ ಅನೇಕ ಅಪರಿಚಿತ ಸಂಬಂಧಗಳ ಅರಿವಾಗುತ್ತದೆ. ನಾವು ಹೊರಟ ಜಾಗವೇನೂ ಕಣ್ಮರೆಯಾಗುವುದಿಲ್ಲ. ಆದರೆ, ಮೇಲಿಂದ ನಮಗೆ ಅದು ಚಿಕ್ಕದಾಗಿ ಕಾಣುತ್ತದಷ್ಟೆ. ಅಲ್ಲದೆ, ನಾವು ಹೊಸದಾಗಿ ಪಡೆದುಕೊಂಡ ನವೀನ ದೃಷ್ಟಿಕೋನದ ಅವಿಭಾಜ್ಯ ಅಂಗವಾಗಿಯೇ ಅದು ಅಸ್ತಿತ್ವದಲ್ಲಿರುತ್ತದೆ. ಅದನ್ನು ಪಡೆದುಕೊಂಡ ನವೀನ ದೃಷ್ಟಿಕೋನದ ಅವಿಭಾಜ್ಯ ಅಂಗವಾಗಿಯೇ ಅದು ಅಸ್ತಿತ್ವದಲ್ಲಿರುತ್ತದೆ. ಅದನ್ನು ಪ್ರತ್ಯೇಕಿಸುವುದಾಗಲೀ ನಾಶಮಾಡುವುದಾಗಲೀ ಸಾಧ್ಯವೇ ಇಲ್ಲ. ಹೊಸ ಸಿದ್ಧಾಂತಗಳನ್ನು ಸಂಶೋಧಿಸಿದೆವೆಂದು ಹೇಳಿಕೊಂಡರೆ ಅದು ನಾಣ್ಯದ ಒಂದು ಮುಖ ಅಷ್ಟೆ. ಹಳೆ ಸಿದ್ಧಾಂತದ ಮಿತಿ ಅಪರಿಪೂರ್ಣತೆಗಳನ್ನು ಅರಿತೆವು ಎನ್ನುವುದೇ ಆ ನಾಣ್ಯದ ಇನ್ನೊಂದು ಮುಖ - ಆಲ್ಬರ್ಟ್ ಐನ್‌ಸ್ಟೀನ್.[3]

ಬ್ರಹ್ಮಾಂಡದ ಹುಟ್ಟು ಸಾವಿನ ಬಗ್ಗೆ ಚರ್ಚಿಸಿದನಂತರ ನಮ್ಮ ಮುಂದೆ ಬರುವ ಪ್ರಶ್ನೆ ಸೂರ್ಯಮಂಡಲದ ಗ್ರಹ, ಭೂಮಿ, ಚಂದ್ರ - ಇತ್ಯಾದಿಗಳು ಹೇಗೆ ಹುಟ್ಟಿದವು? ಇವುಗಳಿಗೆ ನಿಗದಿಯಾದ ಅಯುಷ್ಯ. ಅಂತ್ಯ ಇದೆಯೇ ಎನ್ನುವ ಪ್ರಶ್ನೆ. ಈ ಪ್ರಶ್ನೆಯನ್ನು ನಮ್ಮ ಶಾಸ್ತ್ರಗಳು, ಧರ್ಮಗ್ರಂಥಗಳು ತಮ್ಮದೇ ಆದ ರೀತಿಯಲ್ಲಿ ಬಿಡಿಸಲು ಪ್ರಯತ್ನಿಸಿವೆ. ಭೂಮಿ ಹೇಗೆ ಹುಟ್ಟಿರಬಹುದು ಎಂಬುದಕ್ಕೆ ಜರ್ಮನ್ ಇಮ್ಯಾನ್ಯುಯಲ್ ಕಾಂಟ್ ಎಂಬ ತತ್ವಶಾಸ್ತ್ರಜ್ಞ, ಕಾಲ್ಪನಿಕ ಸಿದ್ಧಾಂತವನ್ನು ಮಂಡಿಸಿದ. ವಿಶ್ವದ ಶೂನ್ಯದಲ್ಲಿ ಪರಿಭ್ರಮಿಸುತ್ತಿದ್ದ ಅಗಾಧ ಧೂಳು ಮತ್ತು ಅನಿಲದಿಂದ ಕೂಡಿದ ಕರಿಯ ಮೇಘವೊಂದರಿಂದ ಇಡೀ ತಾರಾ ಮಂಡಲ ಉದಿರಿಸಬೇಕು ಎಂದು ಹೇಳಿದ. ಇಂದಿಗೂ ಕಾಂಟ್‌ನ ಕಲ್ಪನೆ ಹೆಚ್ಚು ಸಮಂಜಸವಾದದ್ದೆಂದು ಈಗಿನ ವಿಜ್ಞಾನಿಗಳು ಹೇಳುತ್ತಾರೆ. ಇಂದಿನ ವಿಜ್ಞಾನಿಗಳು ಕಾಂಟ್‌ನ ಕಲ್ಪನೆಯ ಅಗಾಧದ ಮೇಲೆ ಹೊಸದೊಂದು ಸೃಷ್ಟಿವಾದವನ್ನು ಮುಂದಿಟ್ಟಿದ್ದಾರೆ. ವಿಶ್ವದ ಶೂನ್ಯದಲ್ಲಿ ವಿರಳವಾಗಿ ಹರಡಿಕೊಂಡಿರುವ ಕಾಸ್ಮಿಕ್ ಧೂಳಿನ ಸ್ನಿಗ್ದಗೊಂಡ ಮೋಡದಿಂದಲೇ ಗ್ರಹತಾರೆಗಳು ಸೃಷ್ಟಿಯಾದವವು ಎಂದು ಊಹಿಸುತ್ತಾರೆ. ಭೂಮಿ ಹುಟ್ಟುವಾಗ ಈಗಿರುವ ಗಾತ್ರಕ್ಕಿಂತ ಒಂದು ಸಾವಿರ ಪಟ್ಟು ಹೆಚ್ಚಿನ ವಸ್ತು ಸಮುಚ್ಚಯವನ್ನು ಒಳಗೊಂಡಿತ್ತು. ತನ್ನ ಮೂಲಗಾತ್ರದ ಬಹುಪಾಲನ್ನು ತನ್ನ ರೂಪಗೊಳ್ಳುವ ಕ್ರಿಯೆಯಲ್ಲಿ ಕಳೆದುಕೊಳ್ಳುತ್ತಾ

ಬಂದಿತು. ಇದು ಭೂಮಿಯ ಹುಟ್ಟನ್ನು ವಿವರಿಸುವ ವೈಜ್ಞಾನಿಕ ಕಲ್ಪನೆ. ಆದರೆ, ಚಂದ್ರ ಎಲ್ಲಿಂದ ಬಂತು ಎಂಬುದು ಇನ್ನೊಂದು ಪ್ರಶ್ನೆ. ಹಾಗೂ ಒಗಟು. ಭೂಮಿ ಹುಟ್ಟುವಾಗಲೇ ಭೂಮಿಯ ಪಕ್ಕದಲ್ಲಿ ತಿರುಗುತ್ತಿದ್ದ ಕಾಸ್ಮಿಕ ಮೋಡದ ಚಿಕ್ಕ ಗುಳಿಯೊಂದು ಚಂದ್ರನಾಗಿ ರೂಪುಗೊಂಡಿತೆ ಅಥವಾ ಎಲ್ಲೆಂದರಲ್ಲಿ ತಿರುಗುತ್ತಿದ್ದ ಗ್ರಹ ಒಂದು ಭೂಮಿಯ ಗುರುತ್ವಾಕರ್ಷ ಶಕ್ತಿಗೆ ಸಿಲುಕಿ ಚಂದ್ರನಾದನೇ ಎನ್ನುವುದು ಕುತೂಹಲಕಾರಿಯಾದುದು. ಕೆಲವು ಮಿಲಿಯ ವರ್ಷಗಳವರೆಗೆ ಭೂಮಿಯ ಮೇಲೆ ನೀರಿರಲಿಲ್ಲ. ಭೂಮಿಯ ಮೇಲ್ಮೈ ಬಿಸಿ ಇದ್ದುದರಿಂದ ಆಕಾಶದಿಂದ ಬಿದ್ದ ಮಳೆ ಕುದಿದು ಕೂಡಲೇ ಆವಿಯಾಗಿ ಆಕಾಶ ಸೇರುತ್ತಿತ್ತು. ಕೆಲವು ವರ್ಷಗಳವರೆಗೆ ಭೂಮಿಯ ಮೇಲೆ ನಿರಂತರವಾಗಿ ಭಯಂಕರ ಮಳೆ ಬೀಳುತ್ತಾ ಕುದಿದು ಆವಿಯಾಗಿ ಗಗನ ಸೇರುತ್ತಾ ಇತ್ತೆಂದು ಹೇಳಬಹುದು. ಈ ಕ್ರಿಯೆಯಲ್ಲಿ ಭೂಮಿ ಇನ್ನಷ್ಟು ತನ್ನ ಶಾಖವನ್ನು ಕಳೆದು ಕೊಂಡ ನಂತರ ಭೂಮಿಯ ತಗ್ಗು ಪ್ರದೇಶದಲ್ಲಿ ನೀರು ನಿಲ್ಲಲು ಆರಂಭವಾಯಿತು. ಆನಂತರ ಜೀವ ವಿಕಾಸಕ್ಕೆ ಕಾರಣವಾಗುವ ಅನುಕೂಲ ವಾತಾವರಣವೊಂದು ರಚನೆಯಾಯಿತು.

ಭೂಮಿಯ ವಯಸ್ಸಿನ ಬಗ್ಗೆ ತಿಳುವಳಿಕೆ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿತು. ೧೮-೧೯ನೇ ಶತಮಾನದ ಹೊತ್ತಿಗೆ ವಿಜ್ಞಾನಿಗಳು, ವಿದ್ವಾಂಸರು, ಭೂಮಿಯ ವಯಸ್ಸನ್ನು ಕಂಡು ಹಿಡಿಯುವ ಪ್ರಯತ್ನ ಮಾಡಿದರು. ೧೯೧೫ರಲ್ಲಿ ಬ್ರಿಟಿಷ್‌ನ ಖ್ಯಾತ ಖಗೋಲಶಾಸ್ತ್ರಜ್ಞ ಎಡ್ಮಂಡ್ ಹೇಲಿ ಭೂಮಿಯ ವಯಸ್ಸನ್ನು ತಿಳಿಯಲು ಸಾಗರವನ್ನು ಶೋಧಿಸಬೇಕೆಂದು ಹೇಳಿದ.[4] ಹೇಲಿಯ ಅಭಿಪ್ರಾಯದಂತೆ ಭೂಮಿ ರೂಪಗೊಂಡಾಗ ಸಾಗರದ ನೀರು ಉಪ್ಪು ನೀರಾಗಿರಲಿಲ್ಲ. ಭೂಮಿಯ ಮೇಲಿನ ಲವಣಗಳೇ ಮಳೆ ನೀರಿನಲ್ಲಿ ಕರಗಿ ನದಿಗಳ ಮುಖಾಂತರ ಸಮುದ್ರ ಸೇರುತ್ತಾ ಸಾಗರದ ನೀರು ನಿಧಾನವಾಗಿ ಉಪ್ಪುನೀರಾಗಿ ಪರಿವರ್ತನೆಯಾಯಿತು. ಸಮುದ್ರದ ನೀರಿನಲ್ಲಿ ಈಗಿರುವ ಉಪ್ಪಿನ ಪ್ರಮಾಣಕ್ಕೆ ಎಷ್ಟು ವರ್ಷಗಳು ಬೇಕೆಂದು ಲೆಕ್ಕ ಹಾಕಿದರೆ, ಅಲ್ಲಿಗೆ ಸಮುದ್ರದ ನೀರು ಇಷ್ಟು ಉಪ್ಪಾಗಲು ಎಷ್ಟು ದಿನ ತೆಗೆದುಕೊಂಡಿತೋ ಅದೇ ಭೂಮಿಯ ವಯಸ್ಸು ಎಂದು ತನ್ನ ತರ್ಕ ಮಂಡಿಸಿದ. ಅನೇಕರು ಈ ತರ್ಕವನ್ನು ವ್ಯರ್ಥ ಎಂದು ತೀರ್ಮಾನಿಸಿದರು.

೧೮೬೯ರಲ್ಲಿ ವಿಲಿಯಂ ಸ್ಮಿತ್ ಎನ್ನುವ ಇಂಗ್ಲಿಷ್ ಅಭಿಯಂತರರು ಭೂಮಿಯ ಪದರುಗಳ ವಯಸ್ಸನ್ನು ಪತ್ತೆ ಮಾಡಲು ಹೊಸ ಸಿದ್ಧಾಂತವನ್ನು ಮಂಡಿಸಿದ. ಭೂಮಿಯ ಶಿಲಾಪದರಗಳಲ್ಲಿ ಉಳಿದಿರುವ ಜೀವಿಗಳ ಪಳೆಯುಳಿಕೆಗಳ ಮುಖಾಂತರ ಆಯಾ ಶಿಲಾಪದರಗಳು ಎಷ್ಟು ಹಳೆಯವು ತಿಳಯಬಹುದೆಂದು ನಿರ್ದೇಶಿಸಿದ. ಈವರೆಗಿನ ಎಲ್ಲಾ ವೈಜ್ಞಾನಿಕ ಸಂಶೋಧನೆಗಳಿಂದ ಭೂಮಿಯ ವಯಸ್ಸನ್ನು ಮೂರು ಬಿಲಿನ್ ವರ್ಷಗಳಿಗಿಂತಲೂ ಹಿಂದೆ ಎಂದು ಖಚಿತವಾಗಿ ಹೇಳಬಹುದು. ಭೂಮಿ ರಚನೆಯಾದ ಮೇಲೆ ಅನಂತ ವೈವಿಧ್ಯದ ಜೀವರಾಶಿಗಳು ಸೃಷ್ಟಿಯಾದವು. ಭೂಮಿಯ ವಯಸ್ಸು, ವಿಶ್ವದ ವಯಸ್ಸು ಎಷ್ಟು ಅಗಮ್ಯ ನಿಗೂಢವೋ, ಅದೇ ರೀತಿಯಲ್ಲಿ ಜೀವೊತ್ಪತ್ತಿ ಕೂಡ ಹೇಗೆ ಯಾವಾಗ ಅವತರಿಸಿತು ಎನ್ನುವುದು ಇಂದಿಗೂ ನಿಗೂಢದಿಂದ ಕೂಡಿದೆ.

ಅಗ್ನಿಪರ್ವತ

ಭೂ ತೊಗಟೆಯ ತಳದಿಂದ ಅಥವಾ ತೊಗಟೆಯ ಕೆಳಗಿನ ಕವಚದಿಂದ ಹೊರಕ್ಕೆ ಬರುವ ಶಿಲಾಪಾಕವೇ ಅಗ್ನಿಪರ್ವತ ಭೂಮಿಯೊಳಗಿನ ಧ್ರವ ಮತ್ತು ಅನಿಲರೂಪದ ದ್ರವ್ಯ ವಿಶಿಷ್ಟ ಸಂದರ್ಭಗಳಲ್ಲಿ ಹೊರಗೆ ಉಕ್ಕುವ ಹಾದಿಯೇ ಅಗ್ನಿಪರ್ವತ. ಅಗ್ನಿಪರ್ವತಗಳು ಬೃಹತ್ ಪರ್ವತ ರೂಪದಲ್ಲಿರಬಹುದು, ಇಳಿಜಾರು ಮೇಲ್ಮೈನ ಬೆಟ್ಟಗುಡ್ಡಗಳಂತಿರಬಹುದು, ಅಥವಾ ನೆಲದ ಮೇಲೆ ಹಬ್ಬಿದ ಸೀಳಿನಂತೆಯೂ ಇರಬಹುದು. ನೆಲದಲ್ಲಿ ತೆರೆದುಕೊಂಡ ಭಾರೀ ರಂಧ್ರದಂತೆಯೂ ಇರಬಹುದು. ಅಗ್ನಿಪರ್ವತಗಳಿಂದ ಕೇವಲ ಶಿಲಾಪಾಕ ಮಾತ್ರವೇ ಉಕ್ಕುವುದಿಲ್ಲ. ಕೆಲ ಜ್ವಾಲಾಮುಖಿಗಳು ಬರೀ ಧೂಳನ್ನು, ಬೂದಿಯನ್ನು ಲಕ್ಷಾಂತರ ಟನ್ ಪ್ರಮಾಣದಲ್ಲಿ ಚಿಮ್ಮಿಸುತ್ತವೆ. ಕೆಲ ಅಗ್ನಿಪರ್ವತಗಳು ಕುದಿಯುವ ಕಲ್ಲು ಗುಂಡುಗಳ ಮಳೆಯನ್ನೇ ಸುರಿಸುತ್ತವೆ. ಸಾಮಾನ್ಯವಾಗಿ ಅಗ್ನಿಪರ್ವತಗಳಿಂದ ಹೊರಬರುವ ಶಿಲಾಪಾಕವನ್ನೇ ಲಾವಾ ಎಂದು ಕರೆಯುತ್ತಾರೆ. ೧೬೦೦ ಡಿಗ್ರಿ ಸೆಲ್ಸಿಯಸ್ ಗಿಂತ ಹೆಚ್ಚಾದ ಉಷ್ಣತೆ. ಬೆಂಕಿ ಸದೃಶರೂಪದಿಂದ ಕೂಡಿರುತ್ತದೆ. ಯಾವುದೇ ಜ್ವಾಲಾಮುಖಿಯ ಸ್ಫೋಟ ನಿಸರ್ಗದ ಅತ್ಯಂತ ರುದ್ರ ರಮಣಾಯ ದೃಶ್ಯ ಹಾಗೂ ಅದೊಂದು ಪ್ರಳಯ ಸದೃಶ್ಯದ ವಿಸ್ಮಯದ ಅಗ್ನಿಪರ್ವದದಂತೆ ಕೂಡಿರುತ್ತದೆ.

ಸ್ಫೋಟಿಸುವ ಲಾವಾ ಉಕ್ಕಿಸುವ ಅಗ್ನಿಪರ್ವತಗಳು ಪ್ರಳಯವನ್ನೇ ಸೃಜಿಸಿ ಅಪಾರ ಹಾನಿಯನ್ನು ಉಂಟು ಮಾಡಿದರೂ, ನಿಸರ್ಗದ ಸಮತೋಲನದ ಸಂರಕ್ಷಣೆಯಲ್ಲಿ ಅಗ್ನಿಪರ್ವತಗಳ ಪಾತ್ರ ಬಹು ಮುಖ್ಯವಾದದ್ದು. ಧರೆಯಲ್ಲಿ ಮೂಲತಃ ಕಡಲುಗಳು ರೂಪಗೊಂಡದ್ದೇ ಅಗ್ನಿಪರ್ವತಗಳಿಂದ. ಆಗಿನ ಜ್ವಾಲಾಮುಖಿಗಳು ಹೊರಹಾಕಿದ ನೀರು ಮತ್ತು ಅನಿಲಗಳೇ ಭೂಮಿ. ಈ ರೀತಿ ಅಸ್ತಿತ್ವ ಪಡೆಯಲು ಮೂಲ ಕಾರಣ ಸ್ಫೋಟದ ಅಗ್ನಿಪರ್ವತಗಳು ಹೊರಹಾಕುವ ಶಿಲಾಪಾಕವೇ ಅಗ್ನಿಶಿಲೆಗಳ ಮೂಲದ್ರವ್ಯ ಜೊತೆಗೆ ಭೂಮಿಯ ಒಡಲಿನಿಂದ ಎಲ್ಲ ಖನಿಜಗಳನ್ನೂ ಹೊರಕ್ಕೇ ತಂದು ಹಾಕುವ ಕೆಲಸವೂ ಜ್ವಾಲಾಮುಖಿಗಳದೇ. ಭೂಮಿಯ ನೆಲ, ಜಲ, ವಾಯುಮಂಡಲಗಳನ್ನು ರೂಪಿಸಿ, ಅವುಗಳ ಸ್ವಾಸ್ಥ್ಯ ಸಮತೋಲನಗಳ ನಿರ್ವಹಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಧರೆಯ ಜೀವಜಾಲದ ಹುಟ್ಟಿಗೂ, ಉಳಿವಿಗೂ ಕಾರಣವಾಗಿರುವ ಅಗ್ನಿಪರ್ವತಗಳನ್ನು ಜೀವವಿಜ್ಞಾನಿಗಳು, **ಸೃಷ್ಟಿ ಕ್ರಿಯೆಯ ಬಟ್ಟಲು** ಎಂದು ಕರೆಯುತ್ತಾರೆ.

ಮರುಭೂಮಿಗಳು

ಇಡೀ ವಿಶ್ವದಲ್ಲಿ ಭೂಮಿಯನ್ನು ಬಿಟ್ಟು ಬೇರೆಲ್ಲೂ ಜೀವದ ಸುಳಿವಿಲ್ಲ. ವಿಶ್ವದ ಅಗಾಧ ಶೂನ್ಯದಲ್ಲಿ ಸುತ್ತುತ್ತಿರುವ ನಿರ್ಜೀವ ನಕ್ಷತ್ರ. ಗ್ರಹ ಸಮುದಾಯದ ಯಾವುದೋ ಮೂಲೆಯ ಸೌರವ್ಯೂಹದಲ್ಲಿ ಜೀವ ಉತ್ಪತ್ತಿಯಾದದ್ದು ಆಕಸ್ಮಿಕ. ಜೀವಿಗಳಿರುವ ತಾಣಕ್ಕೆ ಬಯೋಸ್ಪಿಯರ್ ಅಥವಾ ಜೀವಸ್ಥರ ಎಂದು ಕರೆಯುತ್ತಾರೆ. ನಾವು ಕಣ್ಣು ಹಾಯಿಸುವ ಎಲ್ಲೆಲ್ಲೋ ಒಂದಿಲ್ಲೊಂದು ಬಗೆಯ ಜೀವ ಸಮುದಾಯ ನಮಗೆ ಕಾಣುತ್ತದೆ. ವೈಜ್ಞಾನಿಕವಾಗಿ ಗಾಳಿಯಲ್ಲಿ ಸುಮಾರು ೩೫೦ ಅಡಿ ಎತ್ತರದಲ್ಲಿ ನೆಲದ ಮೇಲೆ ಹಾಗೂ ಸಮುದ್ರದಲ್ಲಿ ೫೦೦ ಅಡಿಗಳವರೆಗೆ ಇರುವ ಜಾಗದಲ್ಲಿ ಜಿವಸಂಕುಲ ಬದುಕಿರುವುದನ್ನು ಕಾಣಬಹುದಾಗಿದೆ. ಕೆಲವು ಹಕ್ಕಿಗಳು ಅತಿ ಎತ್ತರದಲ್ಲಿ ಹಾರುತ್ತಿದ್ದರೂ ನಂತರ ಅವು ಜೀವಸ್ಥಾನಕ್ಕೆ ಹಿಂದಿರುಗುತ್ತವೆ. ನೀರಿನ ಜೀವಿಗಳು ನೆಲದ ಮೇಲೂ, ನೆಲದಜೀವಿಗಳು ಆಕಾಶದಲ್ಲಿಯೂ ಎಲ್ಲೆಂದರಲ್ಲಿ ಹೇಗೆಂದರೆ ಹಾಗೆ ಬದುಕಲಾರದಂತೆ ನಿರ್ಬಂಧಿಸಿವೆ. ಈ ರೀತಿಯ ನಿರ್ಬಂಧಗಳೇ ಆಯಾ ಜಾಗದ ಜೀವರಾಶಿಗಳನ್ನೂ ಅಲ್ಲಿಗಲ್ಲಿಗೆ ಅನುಗುಣವಾಗುವಂತೆ ರೂಪಿಸಿ, ಇಂದಿನ ಅಗಣಿತ

ಜೀವಸಂಕುಲಗಳ ವೈವಿಧ್ಯಕ್ಕೆ ಹಾಗೂ ವಿಸ್ಮಯಕ್ಕೆ ಕಾರಣವಾಗಿದೆ. ಪ್ರತಿಯೊಂದು ಜೀವಿಯ ಜೀವನಕ್ರಮ, ಆಹಾರಾಭ್ಯಾಸ, ಅದರ ಜೊತೆಗಾರರು ಹಾಗೂ ವೈರಿಗಳು ಈ ಎಲ್ಲದರ ಪ್ರಭಾವಕ್ಕೆ ಒಳಗಾಗಿದ್ದು ಸೀಮಿತಕ್ಕೊಳಪಟ್ಟಿರುತ್ತವೆ.

ಜೀವಸ್ಥರದ ವೈಶಿಷ್ಟ್ಯಗಳನ್ನು ಸ್ಥೂಲವಾಗಿ ಹಲವು ಭಾಗಗಳಾಗಿ ವಿಂಗಡಿಸಬಹುದು.[5]

೧) ಮರುಭೂಮಿಗಳು

೨) ಧ್ರುವ ವಲಯದ ತಂಡ್ರಾ ಪ್ರದೇಶಗಳು

೩) ಉಷ್ಣವಲಯದ ಹಾಗೂ ಸಮಶೀತೋಷ್ಣವಲಯದ ಕಾಡುಗಳು

೪) ಸರೋವರ, ನದಿ ಹಾಗೂ ಸಮುದ್ರ

೫) ಪರ್ವತಗಳು, ಜೌಗು ಪ್ರದೇಶಗಳು, ಸಮುದ್ರದ ಹಿನ್ನೀರು.

ಮರುಭೂಮಿಯಲ್ಲಿ ಕೆಲವು ಕಡೆಗಳಲ್ಲಿ ಒಮ್ಮೊಮ್ಮೆ ಸರಾಸರಿ ಐದು ವರ್ಷಗಳಿಗೆ ಒಂದು ಸಾರಿ ಮಳೆ ಭೀಳುತ್ತವೆ. ಮಳೆ ಬಿದ್ದ ಮಾರನೆಯ ದಿನ ಪವಾಡದಂತೆ ಹಸುರಾಗುತ್ತದೆ. ಒಂದೆರಡು ದಿನಗಳಲ್ಲಿ ಹೊಳೆಯುವ ಕೆಂಪು, ನೀಲಿ ವರ್ಣದ ಲಕ್ಷಾಂತರ ಹೂಗಳನ್ನು ಕಾಣಬಹುದು. ಒಂದೇ ವಾರದಲ್ಲಿ ಹೂ ಕಾಯಾಗಿ, ಬೀಜವಾಗಿ, ಮತ್ತೆ ನೆಲಕ್ಕೆ ಭೀಳುತ್ತದೆ. ಇನ್ನು ಐದು ವರ್ಷ ಮಳೆ ಬರುವವರೆಗೂ ಅದರ ಬೀಜಗಳು ನೀರಿಗಾಗಿ ಮರಳಿನಲ್ಲಿರುತ್ತವೆ. ಒಂಟೆಗಳಿಗೆ ಬಹುಪ್ರಿಯವಾದ **ಆಶಾಬ್** ಎನ್ನುವ ಹುಲ್ಲಿನ ಬೀಜ ಸುಮಾರು ಹತ್ತು ವರ್ಷಗಳವರೆಗೆ ಮೊಳಕೆ ಒಡೆಯದೆ ಮಳೆಗಾಗಿ ಕಾಯುತ್ತದೆ.

ಹಲವು ಬಗೆಯ ಮರಳುಗಾಡಿನ ಸಸ್ಯಗಳು ಬಿಸಿಲಿಗೆ ಜಗ್ಗುವುದೇ ಇಲ್ಲ. ಅವು ನೀರನ್ನು ಪಡೆದುಕೊಳ್ಳಲು ಅನೇಕ ವಿಶಿಷ್ಟ ಬಗೆಯ ಮಾರ್ಗಗಳನ್ನು ಅನುಸರಿಸುತ್ತವೆ. ಕುರುಚಲು ಗಿಡಗಳು ನೂರು ಅಡಿ ಆಳದವರೆಗೆ ತಾಯಿಬೇರು ಬಿಟ್ಟು ಅಂತರ್ಜಲವನ್ನು ಹೀರುವ ಗುಣವನ್ನು ಹೊಂದಿದೆ. ಕೆಲ ಗಿಡಗಳ ಅಚ್ಚರಿಕೆಯ ಹೊಂದಾಣಿಕೆಯೆಂದರೆ, ಬೆಳಗಿನ ಹೊತ್ತಿನಲ್ಲಿ ಬೀಳುವ ಇಬ್ಬನಿಯನ್ನು ಹೀರಿಕೊಂಡು, ಆ ನೀರನ್ನು ಬೇರುಗಳ ಮುಖಾಂತರ ಭೂಮಿಗೆ ಹಾಯಿಸಿ, ನೆಲವನ್ನು ತೇವವಾಗಿಟ್ಟಿರುತ್ತವೆ. ಪಾಪಾಸುಕಳ್ಳಿಯ

ಜಾತಿಯ ಕೆಲವು ಗಿಡಗಳು ತಮ್ಮ ಕಾಂಡಗಳಲ್ಲೆಲ್ಲಾ ಬೇಕಾದಷ್ಟು ನೀರನ್ನು ಸಂಗ್ರಹಿಸಿಕೊಂಡಿರುತ್ತವೆ. ಮೆಕ್ಸಿಕೋದ ಮರುಭೂಮಿಯಲ್ಲಿರುವ **ಬಿಸಾಗಾ** ಎನ್ನುವ ಕಳ್ಳಿಗಿಡವನ್ನು **ಮರಳುಗಾಡಿನ ನಲ್ಲಿ** ಎಂದೇ ಕರೆಯುತ್ತಾರೆ. ಆ ಗಿಡದ ತುದಿಯನ್ನು ಕೊಯ್ದು ಕಾಂಡದಲ್ಲಿ ಗುಳಿ ಮಾಡಿದರೆ ಸಾಕು, ಬೇಕೆನಿಸುವಷ್ಟು ನೀರು ದೊರೆಯುತ್ತದೆ.

ಗಿಡಗಳಂತೆಯೇ ಮರುಭೂಮಿಯ ಪ್ರಾಣಿಗಳು ಕೆಲ ಹೊಂದಾಣಿಕೆಗಳನ್ನು ಮಾಡಿಕೊಂಡಿವೆ. ಒಂಟೆ ಒಮ್ಮೆ ಹೊಟ್ಟೆ ತುಂಬಾ ನೀರು ಕುಡಿದರೆ, ಹದಿನೈದು ದಿನಗಳವರೆಗೆ ನೀರಿಲ್ಲದೇ ಜೀವಿಸಬಲ್ಲದು. ಒಂಟೆಗೆ ಮರಳುಗಾಡಿನಲ್ಲಿ ಬಹುದೂರದಲ್ಲಿರುವ ನೀರಿನ ತಾಣಗಳನ್ನು ಪತ್ತೆ ಹಚ್ಚುವ ಸಾಮರ್ಥ್ಯವನ್ನು ಹೊಂದಿದೆ. ಅಲೆಮಾರಿಗಳು ದಾಹ ತಡೆಯದಾದಾಗ ತಮ್ಮ ಒಂಟೆಗಳನ್ನು ಹೋದತ್ತ ಹೋಗಲೆಂದು ಬಿಡುತ್ತಾರೆ. ಕಪ್ಪೆಗಳು ಚೆನ್ನಾಗಿ ನೀರು ಕುಡಿದು ನೆಲದಲ್ಲಿ ಗುಂಡಿ ತೋಡಿಕೊಂಡು ನಿದ್ರಾವಸ್ಥೆಗೆ ಜಾರುತ್ತವೆ. ಮತ್ತೊಮ್ಮೆ ಮಳೆ ಬರುವವರೆಗೆ ಬೇಸಿಗೆಯಿಡೀ ಈ ಕಪ್ಪೆಗಳು ನೆಲದ ತಂಪಿನಲ್ಲಿ ಹಾಗೆಯೇ ಇರುತ್ತವೆ.

ಸಹಾರಾದ ಅನೇಕ ಭಾಗಗಳಲ್ಲಿ ೪೦,೦೦೦ ಅಡಿಗಳಷ್ಟು ಕೆಳಗೆ ಸಿಹಿನೀರಿನ ಸಮುದ್ರ ಇರುವುದು ಪತ್ತೆಯಾಗಿದೆ. ನೈಲ್ ನದಿಯ ಬಳಿ ಸಹಾರಾದಲ್ಲಿ ಇನ್ನೊಂದು ನದಿಯು ಅಂತರ್ಗಾಮಿಯಾಗಿ ನೆಲದೊಳಗೆ ಹರಿಯುತ್ತಿದೆಯೆಂದು ಕಂಡುಹಿಡಿದಿದ್ದಾರೆ. ಮನುಷ್ಯ ಹಾಗೂ ಪ್ರಾಣಿಗಳ ವಿಸ್ತರಣಾ ಸಾಮರ್ಥ್ಯಕ್ಕೆ ಸವಾಲಾಗಿದೆ. ಜಗತ್ತಿನ ಅತ್ಯಂತ ನಿರ್ಜನ ಮರುಭೂಮಿಯೆಂದರೆ, ಸಹಾರಾ ಮರುಭೂಮಿ. ಇದು ಉತ್ತರ ಆಫ್ರಿಕಾದ ಬಹುಭಾಗವನ್ನು ವ್ಯಾಪಿಸಿದೆ. ಮರದ ನೆರಳಿಲ್ಲದೆ, ಮೋಡದ ತುಣುಕಿಲ್ಲದೆ, ನಿರಾಸೆಯ ಪ್ರತೀಕವಾಗಿದೆ. ಎಲ್ಲೋ ಒಂದೊಂದು ಕಡೆ ಓಯಸಿಸ್ಸುಗಳ ಬಳಿ ಮಾತ್ರ ಜನ ವಸತಿ ಇದೆ. ಕೆಲವು ವರ್ಷಗಳ ಹಿಂದೆ ಮಧ್ಯ ಸಹಾರಾದಲ್ಲಿ ಫ್ರೆಂಚ್ ವಿಜ್ಞಾನಿಗಳು ಗ್ಲೇಸಿಯಲ್ ಅಥವಾ ಹಿಮನದಿಗಳು ಹರಿದಿರುವ ಗುರುತುಗಳನ್ನು ಕಂಡು ಹಿಡಿದರು. ಈ ಸಂಶೋಧನೆ ಎಲ್ಲರನ್ನೂ ಚಕಿತಗೊಳಿಸಿತು. ಜನವಿಹೀನವಾದ ನೀರಿನ ಸೋಂಕಿಲ್ಲದ ಕಾದ ಮರಳಿನ ರಾಶಿಯಿಂದ ತುಂಬಿರುವ ಈ ಮರುಭೂಮಿಯಲ್ಲಿ ಯಾವಾಗ ಮತ್ತೆ ಹೇಗೆ ಹಿಮನದಿಗಳು ಹುಟ್ಟಿದವು ಎನ್ನುವುದು? ನಿಗೂಢ ಮತ್ತು ವಿಸ್ಮಯಕಾರಿಯಾದುದು.

ಭೂಮಿ ಸೂರ್ಯಮಂಡಲದ ಸಮಶೀತೋಷ್ಣವಲಯದಲ್ಲಿದೆ. ನೀರು ನೀರಾಗಿ ಉಳಿಯಲು ಅಗತ್ಯವಿದ್ದಷ್ಟು ಶಾಖ ಮಾತ್ರ ಈ ನೀಲಿಯ ಗ್ರಹದ ಮೇಲೆ ಬೀಳುತ್ತದೆ. ಆದರೆ, ಭೂಮಿಯ ಮೇಲೆ ಶೀತ ಮತ್ತು ಶಾಖದ ವೈಪರೀತ್ಯಗಳು ನಡೆಯುತ್ತಲೇ ಇವೆ.

ತೇಜಸ್ವಿಯವರು ವರ್ಣಿಸುವ ವಿದ್ಯಮಾನಗಳು ಏಕಕಾಲದಲ್ಲಿ ನಿರ್ಧಿಷ್ಟ ಐತಿಹಾಸಿಕ ಸಂದರ್ಭಗಳಾಗಿಯೂ, ಮಾನವೇತಿಹಾಸಕ್ಕೆ ಅತೀತವಾದ ಸೃಷ್ಟಿಯ ಲೀಲೆಗಳಾಗಿಯೂ ಕಾಣುತ್ತವೆ. ಜೀವನವನ್ನು ಒಂದು ಲೀಲೆಯಾಗಿ ಪರಿಭಾವಿಸುವ ಪರಿಯಿಂದಾಗಿ ಒಂದು ಬಗೆಯ ಕಾಮಿಕ್ ಧಾಟಿ ತೇಜಸ್ವಿ ಬರವಣಿಗೆಗೆ ಬರುತ್ತದೆ. ಹಾಸ್ಯವನ್ನು ಸೃಷ್ಟಿಸುವದು ತೇಜಸ್ವಿಯವರ ಉದ್ದೇಶವಲ್ಲ. ತೇಜಸ್ವಿ ಹಾಸ್ಯ ಲೇಖಕರೂ ಅಲ್ಲ, ಎಲ್ಲವನ್ನೂ ವೈನೋದಿಕ ದರ್ಶನದಲ್ಲಿ ಪರಿಭಾವಿಸುತ್ತಾರೆ. ಹಾಗಾಗಿ ಮನುಷ್ಯ ಸಂಬಂಧದ ಭೀಕರ, ಭೀಭತ್ಸ ಚಿತ್ರಗಳನ್ನು ಕಟ್ಟಿಕೊಡುವಾಗ ಅವರ ಬರವಣಿಗೆ ಅತಿ ಭಾವುಕತೆಗೆ ಅಥವಾ ರಂಜಕತೆಗೆ ಎಡೆಮಾಡಿಕೊಡುವುದಿಲ್ಲ. ಅವರ ಚಿಂತನೆ ಮತ್ತು ಬರವಣಿಗೆಗಳ ಮುಖ್ಯ ಕಾಳಜಿಯೆಂದರೆ, ಸಾಕ್ಷರತೆ, ವಿದ್ಯಾಭ್ಯಾಸ, ಶಿಕ್ಷಣ ಮತ್ತು ಸಂವಹನ. ಈ ವಿಷಯಗಳನ್ನು ಬೇರೆ ಬೇರೆ ಸಂದರ್ಭದಲ್ಲಿ ಸ್ಪಷ್ಟವಾಗಿ ನಿಷ್ಠುರವಾಗಿ ಪ್ರತಿಪಾದಿಸುತ್ತ ಬಂದಿದ್ದಾರೆ. ಅವರ ನೆಲೆ ಕೇವಲ ಪ್ರತಿಕ್ರಿಯಾತ್ಮಕವಲ್ಲ. ಕ್ರಿಯಾತ್ಮಕ ಪ್ರಯತ್ನಗಳು.

ಅಡಿಟಿಪ್ಪಣಿ

1. ಕೆ.ಪಿ. ಪೂರ್ಣ ಚಂದ್ರ ತೇಜಸ್ವಿ ವಿಸ್ಮಯ (1) ಪುಟ - 1

2. ಕೆ.ಪಿ. ಪೂರ್ಣ ಚಂದ್ರ ತೇಜಸ್ವಿ ವಿಸ್ಮಯ (1) ಪುಟ - 2

3. ಕೆ.ಪಿ. ಪೂರ್ಣ ಚಂದ್ರ ತೇಜಸ್ವಿ ವಿಸ್ಮಯ (1) ಪುಟ - 5

4. ಕೆ.ಪಿ. ಪೂರ್ಣ ಚಂದ್ರ ತೇಜಸ್ವಿ ವಿಸ್ಮಯ (1) ಪುಟ - 12

5. ಕೆ.ಪಿ. ಪೂರ್ಣ ಚಂದ್ರ ತೇಜಸ್ವಿ ವಿಸ್ಮಯ (1) ಪುಟ - 31

ತೇಜಸ್ವಿಯವರ ಬದುಕು ಮತ್ತು ಬರಹ

ಪೂರ್ಣಚಂದ್ರ ತೇಜಸ್ವಿಯವರು ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಕಾದಂಬರಿಕಾರರು, ಕಥೆಗಾರರು, ನಾಟಕಕಾರರು, ಅನುವಾದಕಾರರು, ಅನೇಕ ಕೃತಿಗಳನ್ನು ರಚಿಸಿ ಕನ್ನಡಿಗರ ಹೃದಯಲ್ಲಿ ಮನೆಮಾಡಿದ್ದಾರೆ. ಮಲೆನಾಡಿನಲ್ಲಿ ಇದ್ದರೂ ಪ್ರಕೃತಿಯನ್ನೂ ಬರೀ ಆರಾಧಿಸದೇ ಅದರಲ್ಲಿನ ನಿಗೂಢ ರಹಸ್ಯಗಳ ಶೋಧನೆ ಮಾಡಿದ್ದಾರೆ. ವೈಜ್ಞಾನಿಕ ದೃಷ್ಟಿಕೋನದಿಂದ ಪ್ರಕೃತಿ ನಿಗೂಢತೆಗಳನ್ನು ಅನಾವರಣಗೊಳಿಸಿದ್ದಾರೆ.

ಕನ್ನಡದ ಮೇರು ಕವಿ ಶ್ರೀ ಕುವೆಂಪು ಮತ್ತು ಪತ್ನಿ ಹೇಮಾವತಿ ದಂಪತಿಗಳ ಮಗನಾಗಿ ಸೆಪ್ಟೆಂಬರ್ ೮, ೧೯೩೮ರಂದು ಕುಪ್ಪಳ್ಳಿಯಲ್ಲಿ ಜನಿಸಿದರು. ಕೋಕಿಲೋದಯ, ಚೈತ್ರ ಎಂಬ ಸಹೋದರ. ಇಂದು ಕಲಾ ಮತ್ತು ತಾರಿಣಿ ಎಂಬ ಇಬ್ಬರು ಸಹೋದರಿಯರು ಇದ್ದಾರೆ. ಪ್ರಾಥಮಿಕ ಶಿಕ್ಷಣ ಮಲೆನಾಡಿನಲ್ಲಿ ಪಡೆದ ನಂತರ ಕಾಲೇಜು ವಿದ್ಯಾಭ್ಯಾಸವನ್ನು ಶಿವಮೊಗ್ಗದಲ್ಲಿ ಪಡೆದು, ನಂತರ ಕನ್ನಡ ಎಂ.ಎ. ಪದವಿಯನ್ನು ಮೈಸೂರಿನ ವಿಶ್ವವಿದ್ಯಾನಿಲಯದಲ್ಲಿ ಪಡೆದರು. ೧೮೬೬ರಲ್ಲಿ ಆರ್. ರಾಜೇಶ್ವರಿಯನ್ನು ಅಂತರ್ಜಾತಿ ವಿವಾಹವಾದರು. ಇವರಿಗೆ ಇಬ್ಬರು ಹೆಣ್ಣುಮಕ್ಕಳು. ಸುಶ್ಮಿತಾ ಮತ್ತು ಈಶಾನ್ಯ. ಪೂಚಂತೇ ಸಹ್ಯಾದ್ರಿಯ ಪರಿಸರದಿಂದ ಬಂದ ಕುವೆಂಪು ಅವರಂತೆಯೇ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದ ಸಾಹಿತ್ಯವನ್ನು ರಚಿಸಿದ್ದಾರೆ. ತೇಜಸ್ವಿಯವರ ಸಾಹಿತ್ಯದಲ್ಲಿ ಕಾಣುವ ವಿಶಿಷ್ಟ ಗುಣಗಳೆಂದರೆ, ಕುತೂಹಲ, ವಿಸ್ಮಯ, ರಹಸ್ಯ ಮತ್ತು ಮುಗ್ಧತೆ. ಈ ಎಲ್ಲಾ ಗುಣಗಳನ್ನು ತಮ್ಮೆಲ್ಲ ಕೃತಿಗಳಲ್ಲಿ ಜೀವಂತವಾಗಿ ಉಳಿಸಿಕೊಂಡು ಬಂದಿದ್ದಾರೆ. ಕೃಷಿ, ಛಾಯಾಚಿತ್ರ, ಪಕ್ಷಿವೀಕ್ಷಣೆ, ಬೇಟೆ, ಮುಂತಾದ ಆಸಕ್ತಿಗಳನ್ನು ಮೈಗೂಡಿಸಿಕೊಂಡಿದ್ದಾರೆ. ಸರಳ ಹಾಗೂ ನಿರಹಂಕಾರದ, ನಿರ್ಭೀತಿಯ ವ್ಯಕ್ತಿತ್ವವನ್ನು ಹೊಂದಿದ್ದಾರೆ. ರಾಷ್ಟ್ರಕವಿಯ ಮಗನೆಂಬ ಹಮ್ಮಿನಿಂದ ಬೀಗದೆ, ಅಪ್ಪಟ ಹಳ್ಳಿಗನಂತೆ ಆತ್ಮೀಯತೆಯನ್ನು ಹೊಂದಿದ್ದಾರೆ. ನಾಯಿ ಸಾಕುವುದು, ಬೇಟೆಯಾಡುವುದು, ಹವ್ಯಾಸವಾಗಿದೆ. ತೇಜಸ್ವಿಯವರ ಮೇಲೆ ಗಾಢ ಪರಿಣಾಮ ಬೀರಿರುವ ಅಂಶಗಳೆಂದರೆ, ಒಂದು ಲೋಹಿಯಾ ಅವರ ತತ್ವ ಚಿಂತನೆ. ಎರಡನೆಯದು ಕುವೆಂಪುರವರ ಕಲಾಸೃಷ್ಟಿ. ಮೂರನೆಯದು ಕಾರಂತರ ಜೀವನದ ಪ್ರಯೋಗಶೀಲತೆ. ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳಲ್ಲಿ ಕೃತಿಗಳನ್ನು ರಚಿಸುತ್ತಾ ಬಂದಿದ್ದಾರೆ.

ಜೀವನದಲ್ಲಿ ಕಂಡುಂಡ ಅನುಭವಗಳನ್ನು ತಮ್ಮ ಸಾಹಿತ್ಯದ ಮೂಲಕ ಹಂಚಿಕೊಂಡಿದ್ದಾರೆ. ಅವರ ಬರವಣಿಗೆಯಲ್ಲಿ ನವಿರಾದ ಹಾಸ್ಯಪ್ರಜ್ಞೆ ಹಾಗೂ ವಿಸ್ಮಯ ಹಾಗೂ ನಿಗೂಢತೆಯ ಅಂಶಗಳು ಅವರ ಕೃತಿಗಳಲ್ಲಿ ಕಂಡುಬರುತ್ತವೆ. ರಾಜಕೀಯ, ಧಾರ್ಮಿಕ, ಪರಿಸರ, ವಿಜ್ಞಾನ, ಶಿಕ್ಷಣ ಮುಂತಾದ ವಿಷಯದ ಬಗ್ಗೆ ವೈಚಾರಿಕ ನಿಲುವುಗಳನ್ನು ಪ್ರಕಟಿಸಿದ್ದಾರೆ.

ಲಿಂಗಬಂದ ಎಂಬ ಕಥೆಯನ್ನು ಬರೆಯುವುದರ ಮೂಲಕ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ ತೇಜಸ್ವಿ ಕಥೆ, ಕಾವ್ಯ, ನಾಟಕ, ಕಾದಂಬರಿ, ವೈಜ್ಞಾನಿಕ ಲೇಖನ, ಹಾಗೂ ಇಂಗ್ಲಿಷ್ ನ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ.[1] ನಿರಂತರ ಹೋರಾಟ, ಜಗತ್ತಿನ ನಿಗೂಢತೆ, ಮನುಷ್ಯನ ವೈಫಲ್ಯ ಮುಂತಾದವುಗಳನ್ನು ತಮ್ಮ ಬರಹಗಳಲ್ಲಿ ಅಳವಡಿಸಿಕೊಂಡು ವಿವಿಧ ಜ್ಞಾನ ಶಾಖೆಗಳ ಎಲ್ಲೆಯನ್ನು ವಿಸ್ತರಿಸಿದ್ದಾರೆ.

ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟಾಫೀಸ್, ಕಿರುಗೂರಿನ ಗಯ್ಯಾಳಿಗಳು ಎಂಬ ಮೂರು ಕಥಾ ಸಂಕಲನಗಳನ್ನು, ಬೃಹನ್ನಳೆ, ಸೋಮುವಿನ ಸ್ವಗತ, ಲಹರಿ ಎಂಬ ಕಾವ್ಯ ಸಂಕಲನವನ್ನು, ಯಮಳ ಪ್ರಶ್ನೆ ಎಂಬ ನಾಟಕವನ್ನು, ಸ್ವರೂಪ, ನಿಗೂಢ ಮನುಷ್ಯರು, ಕರ್ವಾಲೋ, ಚಿದಂಬರ ರಹಸ್ಯ, ಜುಗಾರಿ ಕ್ರಾಸ್, ಮಾಯಾಲೋಕ ಎಂಬ ಕಾದಂಬರಿಗಳನ್ನು ಬರೆದಿದ್ದಾರೆ. ಪರಿಸರದ ಕತೆ ಫ್ಲೈಯಿಂಗ್ ಸಾಸರ್ಸ್, ಅದ್ಭುತ ಜಗತ್ತು, ಕನ್ನಡ ನಾಡಿನ ಹಕ್ಕುಗಳು, ಕಾಡಿನ ಕತೆಗಳು, ವಿಸ್ಮಯ, ಸಹಜ ಕೃಷಿ, ಮಿಸ್ಸಿಂಗ್ ಲಿಂಕ್, ಮಿಲೇನಿಯಂ ಸರಣಿ ಮುಂತಾದ ವೈಜ್ಞಾನಿಕ ಕೃತಿಗಳನ್ನು ರಚಿಸಿದ್ದಾರೆ. ಅಲೆಮಾರಿಯ ಅಂಡಮಾನ್ ಮತ್ತು ಪ್ರವಾಸ ಕಥನ ವೈಚಾರಿಕ ಆಲೋಚನೆಗಳನ್ನು ಮೈಗೂಡಿಸಿಕೊಂಡು ಬರೆಯುವ ತೇಜಸ್ವಿಯವರು ತಮ್ಮ ಬರಹಗಳಲ್ಲಿ ಸಂಶೋಧನಾಸಕ್ತಿಯನ್ನು, ಸೂಕ್ಷ್ಮ ದೃಷ್ಟಿಯನ್ನು. ತಾರ್ಕಿಕ ಚಿಂತನೆಯನ್ನು ಮಾಡಿದ್ದಾರೆ. ವೈವಿಧ್ಯಮಯ ವಿಷಯದ ಆಯಾಮಗಳು ಅವರ ಬದುಕಿನಷ್ಟೇ ಸಮೃದ್ಧವಾಗಿದೆ. ಅವರು ಅನುವಾದಿಸಿರುವ ಕಾಡಿನ ಕತೆಗಳು ಭಾಗ ೧, ೨, ೩ ಕೆನತ್ ಆ್ಯಂಡರ್ಸನ ಅವರ ಅನುಭವ ಸಂಗ್ರಹದ ರೂಪಾಂತರಗಳಾಗಿವೆ.[2] ಅವರ ಮತ್ತೊಂದು ಅನುವಾದಿತ ಕೃತಿ ರುದ್ರಪ್ರಯಾಗದ ಭಯಾನಕ ನರಭಕ್ಷಕ, ಜಿಮ್ ಕಾರ್ಬೆಟ್ ಅವರ ಮ್ಯಾನ್‌ಈಟಿಂಗ್ ಆಫ್ ರುದ್ರಪ್ರಯಾಗ ಎಂಬ ಪುಸ್ತಕದ ರೂಪಾಂತರವಾಗಿದೆ.

ಹಾಗಾಗಿ ತೇಜಸ್ವಿಯವರನ್ನು ಕನ್ನಡದ ಜಿಯಾಗ್ರಾಫಿಕಲ್ ಛಾನಲ್ ಎಂದು ಪ್ರೀತಿಯಿಂದ ಹೆಮ್ಮೆಯಿಂದ ಕರೆಯುತ್ತಾರೆ.

ಅಣ್ಣನ ನೆನಪು ಎಂಬ ಸಂಸ್ಮರಣ ಕೃತಿಯನ್ನು ಬರೆದಿದ್ದಾರೆ. ಕುವೆಂಪುರವರ ವ್ಯಕ್ತಿತ್ವದ ಆತ್ಮೀಯ ಮುಖಗಳನ್ನು, ವೈವಿಧ್ಯಪೂರ್ಣವಾದ ಅಂಶಗಳನ್ನು ಅನಾವರಣ ಮಾಡಿಕೊಟ್ಟಿದ್ದಾರೆ. ತಮ್ಮ ಚಿಕ್ಕಂದಿನಿಂದ ಓದು ಮುಗಿಸುವವರೆಗಿನ ತಮ್ಮ ತಂದೆಯ ನೆನಪುಗಳನ್ನು ದೈನಂದಿನ ದಿನಚರಿಯ ಮಾದರಿಯಲ್ಲಿ ಬರೆಯುತ್ತಾರೆ. ತತ್ವಚಿಂತನೆಯ ಕರ್ನಾಟಕ ಸಂಸ್ಕೃತಿ ಅವಲೋಕನ, ರಾಜಕೀಯ ಮೀಮಾಂಸೆ, ಸಮಾಜಿಕ ಜಿಜ್ಞಾಸೆ, ಎಲ್ಲವನ್ನೂ ಅದರೊಳಗೆ ಕಂಡಿರಿಸಿದ್ದಾರೆ.[3]

ಗಣಕೀಕರಣದ ಈ ಯುಗದಲ್ಲಿ ಭಾಷೆಯ ಯಾಂತ್ರಿಕ ಸೌಲಭ್ಯಗಳನ್ನು ಸೃಷ್ಟಿಸಿಕೊಂಡರೆ ಮಾತ್ರ ಕನ್ನಡದ ಅಭಿವೃದ್ಧಿ ಸಾಧ್ಯ ಎಂದು ಗ್ರಹಿಸಿದವರು. ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡುವುದರಿಂದ ಕನ್ನಡದ ಅಭಿವೃದ್ಧಿ ಸಾಧ್ಯವಿಲ್ಲ, ಇಂಗ್ಲಿಷ್ ಭಾಷೆಯ ಯಾಂತ್ರಿಕ ಸೌಲಭ್ಯವನ್ನು ಸೃಷ್ಟಿಸಿಕೊಂಡರೆ ಮಾತ್ರ ಕನ್ನಡಕ್ಕೆ ಉಳಿವು ಎಂದು ಸಾರಿ, ಕನ್ನಡ ತಂತ್ರಾಂಶದ ಅಭಿವೃದ್ಧಿಗೆ ಹಗಲಿರುಳೂ ದುಡಿದರು.

ತೇಜಸ್ವಿಗೆ ಸಂದಿರುವ ಪ್ರಶಸ್ತಿ ಮತ್ತು ಪುರಸ್ಕಾರಗಳು :

ಪೂಚಂತೇಯವರ ವಿಶಿಷ್ಟ ಸಾಧನೆಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳು ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ, ಗೌರವಿಸಿದೆ. ಚಿದಂಬರ ರಹಸ್ಯ ಕೃತಿಗೆ ೧೯೮೫ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ೧೯೮೭ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ೧೯೮೯ರಲ್ಲಿ ಚಿದಂಬರ ರಹಸ್ಯ ಕೃತಿಗೆ ಭಾರತೀಯ ಭಾಷಾ ಪರಿಷತ್ತು ಪ್ರಶಸ್ತಿಯು ದೊರೆತಿದೆ. ಮಿಸ್ಸಿಂಗ್ ಲಿಂಕ್ ಕೃತಿಗೆ ಅತ್ಯುತ್ತಮ ಸಮಾಜ ವಿಜ್ಞಾನ ಕೃತಿ ಎಂಬ ಬಹುಮಾನ ದೊರೆತಿದೆ. ೨೦೦೧ರಲ್ಲಿ ಪಂಪ ಪ್ರಶಸ್ತಿಯ ಗೌರವವು ಬಂದಿದೆ. ಆದರೆ, ಈ ಪ್ರಶಸ್ತಿಯನ್ನು ಸ್ವೀಕರಿಸಲು ನಿರಾಕರಿಸಿದರು. ಅಬಚೂರಿನ ಪೋಸ್ಟಾಫಿಸ್ ಎಂಬ ಸಣ್ಣ ಕತೆಯನ್ನು ಆಧರಿಸಿ, ನಿರ್ಮಿಸಿದ ಚಲನಚಿತ್ರಕ್ಕೆ ೧೯೭೩ನೇ ಸಾಲಿನ ಅತ್ಯುತ್ತಮ ಪ್ರಾಂತಿಯ ಚಲನಚಿತ್ರ

ಎಂಬ ರಾಷ್ಟ್ರಪ್ರಶಸ್ತಿ ದೊರೆತಿದೆ. ತಬರನ ಕಥೆ ಎಂಬ ಸಣ್ಣ ಕಥೆ ಆಧಾರಿತ ಚಲನಚಿತ್ರಕ್ಕೆ ೧೯೮೬ನೇ ಸಾಲಿನ ಸ್ವರ್ಣಕಮಲ ಪ್ರಶಸ್ತಿ ಹಾಗೂ ಬಂಗಾರದ ಪದಕ ದೊರಕಿದೆ. ಕುಬಿ ಮತ್ತು ಇಯಾಲ ಕಥೆಗೆ ಉತ್ತಮ ಕಥಾ ಲೇಖಕ ಪ್ರಶಸ್ತಿಯು ದೊರಕಿದೆ.

ಇವರ ಅನೇಕ ಕೃತಿಗಳು ಹಿಂದಿ, ಮರಾಠಿ, ಮಲೆಯಾಳಂ, ಇಂಗ್ಲಿಷ್, ಜಪಾನಿ ಭಾಷೆಗಳಿಗೆ ಅನುವಾದಗೊಂಡಿವೆ.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ನಡೆಸುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಕೂಡ ನಿರಾಕರಣೆ ಮಾಡಿದವರಾಗಿದ್ದಾರೆ.

ಅಡಿಟಿಪ್ಪಣಿ

1. ಡಾ॥ ಹೆಚ್.ಎಂ. ಮಹೇಶ್ವರಯ್ಯ, ಪೂರ್ಣ ಚಂದ್ರ ತೇಜಸ್ವಿ ಪುಟ -13

2. ಡಾ॥ ಹೆಚ್.ಎಂ. ಮಹೇಶ್ವರಯ್ಯ, ಪೂರ್ಣ ಚಂದ್ರ ತೇಜಸ್ವಿ ಪುಟ -15

3. ಟಿ. ಪಿ. ಅಶೋಕ ತೇಜಸ್ವಿ ಕಥನ, ಪುಟ - 123

ಸಾರರೂಪ

ಪೂರ್ಣಚಂದ್ರ ತೇಜಸ್ವಿ ಕನ್ನಡದ ಘನತೆಯನ್ನು ಹೆಚ್ಚಿಸಿದ ಬರಹಗಾರರು. ಪ್ರೊ। ಕಿ.ರಂ. ನಾಗರಾಜರ ಅಭಿಪ್ರಾಯದಂತೆ, ತೇಜಸ್ವಿ ಕೇವಲ ಕಾದಂಬರಿಕಾರರೋ, ಕತೆಗಾರರೋ, ಅಲ್ಲ. ಅವರು ಇತ್ತೀಚಿನ ಕಾಲಮಾನದಲ್ಲಿ ನಮ್ಮ ದೇಶ ಕಂಡಿರುವ ಅಪೂರ್ವ ಸಮರ್ಥ ಕ್ರಿಯಾಶೀಲ ಸಂಯೋಜಕ ಕಲಾವಿದರು. ಅಂದರೆ, ಚಿತ್ರಕಲೆ, ಛಾಯಾಗ್ರಹಣ, ಪರಿಸರ, ಸಂಗೀತ, ಸಾಮಾಜಿಕ ಬದುಕಿನ ಚಿಂತನೆ, ಭಾಷಾ ನೀತಿ, ಶಿಕ್ಷಣ, ಅಲೆಮಾರಿ, ಸಾಹಸ ಹಾಗೂ ವಿಜ್ಞಾನದ ನಿಗೂಢಗಳಿಗೆ ಕೈ ಹಚ್ಚಿ ಅನಂತ ವಿಸ್ತಾರಗಳನ್ನು ಶೋಧನಾತ್ಮಕ ನೋಟದಿಂದ ಕಥಿಸಿದ ಕ್ರಮದಿಂದ ಅವರು ಕನ್ನಡ ಸಂಸ್ಕೃತಿಯಲ್ಲಿ ವಿಶಿಷ್ಟರು ಎಂದು ಹೇಳಿದ್ದಾರೆ.[1]

ಸೃಜನಶೀಲ ನಿರೂಪಣೆಯಿಂದ ಕನ್ನಡ ನಾಡಿನ ನಾಡಿ ಬಡಿತವನ್ನು, ಕನ್ನಡ ಭಾಷೆಯ ಸಾಧ್ಯತೆಯನ್ನು ಅಪಾರವಾಗಿ ವಿಸ್ತಾರಿಸಿದ್ದಾರೆ. ಅವರ ಗದ್ಯ ಸಾಹಿತ್ಯವು ಮಾಂತ್ರಿಕ ಸ್ವರೂಪದಿಂದ ಕೂಡಿದೆ. ಅವರ ಸಾಹಿತ್ಯದಲ್ಲಿ ನಿಗೂಢತೆ ಹಾಗೂ ಅದ್ಭುತ ಗ್ರಹಿಕೆಗಳು ಇರುತ್ತವೆ, ಯಾವ ಕಾರಣಕ್ಕೂ ನಿಗೂಢ ವಿಸ್ಮಯ ನಿರೂಪಣೆಯನ್ನು ಬಿಡುವುದಿಲ್ಲ. ತನ್ನ ಸುತ್ತಣ ನಿಸರ್ಗದ ನಿಗೂಢವನ್ನು ತನ್ನ ಬರಹದ ಶಕ್ತಿಯಾಗಿಸಿಕೊಂಡು ಜೀವಜಾಲದ ಅನಂತವನ್ನೇ ಕಾಣ್ಕೆಯಾಗಿಸಿಕೊಂಡರು. ನಿಸರ್ಗವು ಕುವೆಂಪು ಅವರಿಗೆ ಅಮರತ್ವದ ಸಂಕೇತವಾದರೆ, ತೇಜಸ್ವಿಯವರಿಗೆ ಅದೇ ನಿಸರ್ಗ ಜೀವಜಾಲ ರೂಪಕವಾಗಿ ಕಂಡಿದೆ. ಅವರು ಅಣುವಿನಿಂದ ಅನಂತವನ್ನು ಅಳೆಯುವ ಕೆಲಸ ಮಾಡಿದರೆ ಹೊರತು, ಅನಂತತೆಯಿಂದ ಅಣುವಿನ ಅಳತೆ ಮಾಡಲಿಲ್ಲ.

ಕನ್ನಡ ಸಂದರ್ಭದಲ್ಲಿ ಮಾತ್ರವಲ್ಲದೆ, ಇಡೀ ಭಾರತೀಯ ಸಂದರ್ಭದಲ್ಲಿಯೇ ತೇಜಸ್ವಿಯವರ ಬರಹ ವಿಶಿಷ್ಟವಾಗಿದೆ. ಭಾರತೀಯ ಸಮಾಜವನ್ನು ಅದರ ಎಲ್ಲ ವಾಸ್ತವಗಳಿಂದ ಗ್ರಹಿಸಿದರು. ತಮ್ಮ ಸಂವೇದನಾಶೀಲ ವ್ಯಕ್ತಿತ್ವದಿಂದ ಜೀವಜಾಲದ ವೈವಿಧ್ಯ ರೂಪರಾಶಿಯನ್ನು ಸೃಜನಶೀಲ ನಿರೂಪಣೆಗಳಲ್ಲಿ ಅದ್ಭುತವಾಗಿ ಸೆರೆಹಿಡಿದಿದ್ದಾರೆ.

ನವೋದಯ ಕವಿಗಳು ನಿಸರ್ಗವನ್ನು ದೈವದ ರೂಪದಲ್ಲಿ ಕಂಡರೆ, ತೇಜಸ್ವಿ ಅವರು ನಿಸರ್ಗವನ್ನು ಮನುಷ್ಯ ಸಾಧ್ಯತೆಯ ಹುಡುಕಾಟದ ಭಾಗವಾಗಿ ಭಾವಿಸಿ, ಅದರ ವಿಸ್ಮಯ ವಿಕಾಸದ ಅಸಾಮಾನ್ಯ ನಿಸರ್ಗ ಕಲ್ಪನೆಗಳನ್ನು, ಪರಿಸರದ ಜೀವ ವೈವಿಧ್ಯದ ಅನಂತಕೊಂಡಿಗಳನ್ನು ವಿಸ್ತಾರಿಸುವುದರ ಜೊತೆಗೆ ನಿಗೂಢತೆಗಳನ್ನು ಬೇಧಿಸಲು ಹೊರಡುತ್ತಾರೆ. ಸಾಮಾನ್ಯ ಮಂದಣ್ಣನ ಮೂಲಕವೇ ವಿಶ್ವ ಸೃಷ್ಟಿಯ ಕಥನವನ್ನು ಗ್ರಹಿಸುತ್ತಾ, ಅದರ ಅನಂತವನ್ನು ಧ್ವನಿಸಲು ಯತ್ನಿಸಿದರು. ತೇಜಸ್ವಿಯವರ ಸೃಜನಶೀಲತೆಯ ಮೊದಲನೆಯ ಪ್ರಮುಖ ಅಂಶವೇ ನಿಗೂಢ. ಮನುಷ್ಯ ಮತ್ತು ಅವನ ಅಸ್ತಿತ್ವಕ್ಕೆ ನೆಲೆಯಾಗಿದ್ದ ನಿಸರ್ಗವನ್ನು ಕೇವಲ ಪರಿಸರವಾದಿಯ ಕಾಳಜಿಯಿಂದ ನೋಡಿದವರಲ್ಲ. ನಿಸರ್ಗವು ಅರಿವಿಗೆ ವಿಸ್ಮಯ, ನಿಗೂಢವಾಗಿ ಕಂಡಿದ್ದಲ್ಲದೆ, ಕೂಡಿದ್ದಲ್ಲಿದೆ. ಈ ನಿಗೂಢವೇ ಅಖಂಡವಾದ ಜೀವವಿಕಾಸದ ಅನಂತತೆಯನ್ನು ಕಂಡಿದ್ದರು. ಅನಂತ ಚಲನೆಯ ನಿರಂತರ ಸತ್ಯವೆಂಬಂತೆ ಬೇಟೆಗಾರನಾಗಿ ಪ್ರತಿಯೊಂದು ಬರಹದಲ್ಲಿ ಕಾಣುತ್ತಾರೆ. ಕೇವಲ ಪರಿಸರ ವಿಜ್ಞಾನಿಯಾಗಿದ್ದರೆ, ಅವರ ಬರಹಗಳಿಗೆ ಅಂತಹ ಮಹತ್ವವೇನೂ ಬರುತ್ತಿರಲಿಲ್ಲ. ಅದಕ್ಕೆ ಮಿಗಿಲಾಗಿ, ನಿಸರ್ಗದ ಸಂತನಾಗಿ ಅದರ ಅಂತರಾಳವನ್ನು ಕೆದಕಿ, ತಿಳಿಯುವ ಆಧುನಿಕ ಪ್ರಜ್ಞೆಯ ವಿಜ್ಞಾನಿಯಾಗಿದ್ದರು.

ಸಣ್ಣಹುಳು ಹುಪ್ಪಟೆ, ಪ್ರಾಣಿ ಪಕ್ಷಿ ಕಾಡಿನ ನಿಗೂಢ ಮನುಷ್ಯರ ಮೂಲಕ ಅಲ್ಲಿ ಹಗಲಿರುಳೂ ದಿನಗಟ್ಟಲೆ ಸುರಿಯುವ ಮಳೆಯಿಂದ, ಯಾವತ್ತೂ ನಿದ್ದೆಯಿಲ್ಲದ ಜುಗಾರಿ ಕ್ರಾಸಿನ ನಿಗೂಢ ವ್ಯವಹಾರಗಳಿಂದ, ಮಾಯಾ ಲೋಕದ ಅನಿಯಂತ್ರಿತ ಜಗತ್ತಿನಿಂದ ಹಾಗೂ ಕಾಫಿ ತೋಟದ ಕಷ್ಟನಷ್ಟಗಳಿಂದ ಪಶ್ಚಿಮ ಘಟ್ಟಗಳ ಜೀವಜಾಲದ ನಿಗೂಢ ಬೇರುಗಳಿಂದ ಬೇರು ಬಿಡುತ್ತಿರುವ ಅಧೋಲೋಕದ ದಂಧೆಗಳಿಂದ ತನ್ನ ಸುತ್ತಲಿನ ಲೋಕದ ಎಲ್ಲ ವಿಸ್ಮಯಗಳನ್ನು, ನಿಗೂಢಗಳನ್ನು ಕಂಡರಿಸಿದರು. ಇದು ಕನ್ನಡದ ಯಾವೊಬ್ಬ ಲೇಖಕನಿಗೂ ಎಟುಕದ ದಿವ್ಯ ಕಥನವಾಗಿದೆ.

ಅವರ ನಿಗೂಢ ಮನುಷ್ಯರು ಕೃತಿಯಲ್ಲಿ ನಾಯಕ ಜಗನ್ನಾಥ ಅನುಭವರಾಹಿತ್ಯವೇ ಅನುಭವವಾಗಿ ರೂಪುಗೊಳ್ಳುತ್ತಿದ್ದ ವಿರೋಧಾಭಾಸದಲ್ಲಿ ಸಾಹಿತ್ಯ ಅವನತಿಗೊಳ್ಳುತ್ತಿದ್ದುದರಿಂದ ಬೇಸರಿಸಿ, ಹೊಸ ಬದುಕನ್ನರಸಿಕೊಂಡು ಕಾಡಿಗೆ ಹೋಗುತ್ತಾನೆ. ಅಲ್ಲಿ ಕಾಡಿನ ಮಳೆಗಾಳಿಗಳು ಉಂಟು ಮಾಡುವ ಅಲ್ಲೋಲ ಕಲ್ಲೋಲಗಳ ಮಧ್ಯೆ ಅವನಂತೆಯೇ ನಾಗರೀಕ ಬದುಕನ್ನು ಬಿಟ್ಟು ಕಾಡಿನಲ್ಲಿರುವ

ಗೋಪಾಲಯ್ಯನ ಅನುಭವ ಕೇಳಿ ದಿಗ್ಭ್ರಾಂತಗೊಳ್ಳುತ್ತಾನೆ. ಇದು ತೇಜಸ್ವಿಯವರು ಸೃಷ್ಟಿಸಿರುವ ಮಹತ್ವದ ರೂಪಕ. ಮನುಷ್ಯ, ಅವನ ಜಾಣ್ಮೆ, ಯಂತ್ರ ನಾಗರೀಕತೆಯ ಇತಿಮಿತಿಗಳು ಅದರ ಎದುರಿಗೆ ನಿಸರ್ಗದ ಅಗಾಧ ಚೈತನ್ಯ. ಇವುಗಳ ನಡುವೆ ಹುಟ್ಟಿಕೊಳ್ಳುವ ಎಲ್ಲ ಬಿಕ್ಕಟ್ಟುಗಳು ಅಂತಿಮವಾಗಿ ನಿಸರ್ಗ ಚೈತನ್ಯದ ದಿಗ್ವಿಜಯದ ವಿಸ್ಮಯ ಕಥನ ಇದರಲ್ಲಿದೆ. ಸ್ವರೂಪ ಕಾದಂಬರಿ ಮನುಷ್ಯನ ಅಮೂರ್ತ ಹಾಗೂ ಮೂರ್ತ ಅಸ್ತಿತ್ವದ ನೆಲೆಗಳ ನಿಗೂಢತೆಗಳನ್ನು ಅರಿಯಲು ತತ್ವಶಾಸ್ತ್ರೀಯ ಪರಿಕಲ್ಪನೆಗಳೊಂದಿಗೆ ಹೋಗುತ್ತಾರೆ. ಇಲ್ಲಿ ಶ್ರೀನಿವಾಸನ ವಿದ್ಯಾರ್ಥಿ ಜೀವನ, ಕಾಮವಿಲಾಸ, ಸಾಹಸಗಳು, ಪ್ರೇಮ, ಆಷಾಢಭೂತಿತನ, ಬೇಟೆ, ಶಿಕಾರಿ-ಶೋಷಣೆ ಮುಂತಾದ ಸ್ವರೂಪಗಳನ್ನು ನಿರೂಪಿಸುತ್ತಾ, ಅವುಗಳ ಮೂಲಕ ಬದುಕಿನ ಅರ್ಥವನ್ನು ತಾತ್ವಿಕ ದರ್ಶನವನ್ನು ಹೊರಡಿಸಲು ಯತ್ನಿಸುತ್ತಾರೆ. ಹೇಮಂತನ ಮೌನ, ಶ್ರೀನಿವಾಸನ ಮಾತು, ಹಿನ್ನೆಲೆಯಾಗಿ ಬದುಕಿನ ಅರ್ಥದ ಹುಡುಕಾಟ ಸ್ವರೂಪ ಕೃತಿಯಲ್ಲಿ ನಡೆಯುತ್ತದೆ.

ಕರ್ವಾಲೋ ಕಾದಂಬರಿಯಲ್ಲಿ ಜೀವವಿಕಾಸದ ಕೀಲಿಕೈಯಂತೆ ತೋರುವ ಹಾರುವ ಓತಿಯ ದರ್ಶನಕ್ಕಾಗಿ ಪ್ರಯಾಣ ಬೆಳೆಸುತ್ತಾರೆ. ಕರ್ವಾಲೋ ಕತೆ ನಡೆಯುವ ಹಳ್ಳಿಯ ಪರಿಸರದಲ್ಲಿ, ಕಥೆಯ ನಿರೂಪಕ, ಮಂದಣ್ಣ ಎಂಬ ಬಡ ಹಳ್ಳಿಗ, ಕರ್ವಾಲೋ ಎಂಬ ಸಂಶೋಧಕ ಈ ಮೂವರು ತಮ್ಮ ಪರಿಸರದಲ್ಲಿ ಕಂಡುಕೊಂಡ ವಿಸ್ಮಯಕರ ಸಂಗತಿಗಳೇ ಕರ್ವಾಲೋ ಕಾದಂಬರಿಯ ವಸ್ತು. ಹಳ್ಳಿಗನಾದ ಮಂದಣ್ಣನಲ್ಲಿ ಹುದುಗಿದ್ದ ಪ್ರತಿಭೆಯೇ ಈ ಕಾದಂಬರಿಯ ತಳಪಾಯ. ಮಂದಣ್ಣನ ಗೆಳೆತನದಿಂದ ಮತ್ತು ಕರ್ವಾಲೋರವರ ಮಾರ್ಗದರ್ಶನದಿಂದ ನಿರೂಪಕ ಕಂಡುಕೊಂಡ ಅರಣ್ಯ ಮಧ್ಯದ ಜೀವರಾಶಿಯ ನಿಗೂಢ ಬದುಕು ಈ ಕಾದಂಬರಿಯ ಇನ್ನೊಂದು ಸ್ತರ. ಕಾಲಜ್ಞಾನದಂತೆ ರೂಪಗೊಳ್ಳುವ ಅಚ್ಚರಿಯ ಕತೆ ಸ್ವಾರಸ್ಯವಾಗಿ ಮೂಡಿಬಂದಿದೆ. ಕರ್ವಾಲೋರವರ ವಿಶಿಷ್ಟ ಜ್ಞಾನದ ಬೆಳಕಿನಲ್ಲಿ ನಿರೂಪಕ, ಮಂದಣ್ಣ , ಕರಿಯಪ್ಪ ಕಾಲದೇಶಗಳ ಪರಿಧಿಯ ತೆರೆಯನ್ನು ಮೀರಿ, ಹಾರುವ ಓತಿಯ ಮಿಂಚು ನೋಟವನ್ನು ಕಾಣುವ ಕೌತುಕ ಘಟನೆ ಕಾದಂಬರಿಯಲ್ಲಿದೆ. ಕನ್ನಡ ಸಾಹಿತ್ಯದಲ್ಲಿ ಮಂದಣ್ಣನ ಪಾತ್ರ ಚಿರಸ್ಥಾಯಿಯಾಗಿ ಉಳಿಯುವಂತಾಗಿದೆ.

ಏಲಕ್ಕಿಗೆ ಕೊಳೆರೋಗ ಬರುವುದು, ಆ ಬೆಳೆ ತೆಗೆಯುವ ಸಮಾಜದ ಅಂತರಂಗಕ್ಕೆ ತಾಕಿದ ಕೊಳೆರೋಗದ ಪರಿಣಾಮವಾಗಿ ಎಂಬ ಹೊಳಹು ಚಿದಂಬರ ರಹಸ್ಯದಲ್ಲಿ ಮೂಡಿದೆ. ಅಪಾರ ವಿದೇಶಿ ವಿನಿಮಯ ಒದಗಿಸುತ್ತಿದ್ದ ಸಂದರ್ಭದಲ್ಲಿ ಏಲಕ್ಕಿ ಬೆಳೆಗೆ ಕೆಸರೂರು ಖಾಯಿಲೆ ತಗುಲಿ, ಅದರ ಉತ್ಪಾದನೆ ಇಳಿಮುಖವಾಯಿತು. ವ್ಯವಸಾಯದಲ್ಲಿ ಅನಿರೀಕ್ಷಿತವಾದ ಕುಸಿತ ಉಂಟಾಯಿತು. ಈ ಹಿನ್ನೆಲೆಯನ್ನಿಟ್ಟುಕೊಂಡು ತನಿಖೆ ಮಾಡಲು ಎಂದು ಅಂಗಾಡಿಗೆ ಕೆಸರೂರಿನ ಎಲ್ಲಾ ವಿಷಯಗಳ ಬಿಡಿಸಲಾಗದ ರಹಸ್ಯತೆಯಿಂದ ಕೂಡಿರುತ್ತದೆ. ಜೋಗಿಹಾಳರ ಅಸ್ವಾಭಾವಿಕ ಸಾವು ರಹಸ್ಯದಿಂದ ಕೂಡಿದೆ. ಮನುಷ್ಯಪ್ರಜ್ಞೆಯು ವಿಧಿ ನಿಯಮಗಳ ಅಧೀನವೋ ಅಥವಾ ಸ್ವಾತಂತ್ರ್ಯವೋ ಎಂಬುದು ನಿಗೂಢತೆಯಿಂದ ಕೂಡಿದೆ. ಪತ್ತೇದಾರಿ ಕಾದಂಬರಿ ಶೈಲಿಯಲ್ಲಿ ನಿರೂಪಿತವಾಗಿರುವ ಚಿದಂಬರ ರಹಸ್ಯ ಕೃತಿಯಲ್ಲಿ ದಿಕ್ಕುದೆಸೆಯಿಲ್ಲದೆ, ಅಲೆದಾಡುವ ಯುವಕರು, ತುಳಿತಕ್ಕೊಳಗಾದ ಸ್ತ್ರೀಯರು, ಮೂಢನಂಬಿಕೆಗಳಲ್ಲಿ ಮುಳುಗು ಹೋಗಿರುವ ಜನರ ದ್ವಂದ್ವಗಳು, ಹಳ್ಳಿಗಾಡಿನ ಜ್ವಲಂತ ಸಮಸ್ಯೆಗಳನ್ನು ಮನುಷ್ಯನ ಸಣ್ಣತನವನ್ನು ವ್ಯವಸ್ಥೆಯ ದುರಂತವನ್ನು ತಿಳಿಸುತ್ತ ಸಾಗುವ ಈ ಕಾದಂಬರಿ ಬದುಕಿನ ನೈಜ ಸತ್ವವನ್ನು ಕಟ್ಟಿಕೊಡುವಲ್ಲಿ ಸಫಲವಾಗಿದೆ.

ತಮ್ಮ ಸೃಜನಶೀಲ ಸಾಮರ್ಥ್ಯದ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುವ ಪ್ರಯತ್ನವೆಂಬಂತೆ ಪತ್ತೇದಾರಿ ಸಾಹಿತ್ಯದ ಕುತೂಹಲ, ವಿನೋದ, ಶೈಲಿ, ನೇರ ಅನುಭವ ಕಥನದ ಸರಳತೆ - ಇವೆಲ್ಲವುಗಳನ್ನು ಜುಗಾರಿಕ್ರಾಸ್ ಕಾದಂಬರಿಯಲ್ಲಿ ಸಮರ್ಥವಾಗಿ ದುಡಿಸಿಕೊಂಡಿದ್ದಾರೆ. ಈ ಕಾದಂಬರಿಯನ್ನು ಓದುವುದೇ ಒಂದು ಉಲ್ಲಾಸಕರ ಅನುಭವ. ಸಾಮಾಜಿಕ ವಿಷಾದಕ ಸತ್ಯಗಳನ್ನು ಅನ್ವೇಷಿಸುವ ಪ್ರಯತ್ನವನ್ನು ಜೊತೆಗೆ ತಲ್ಲಣವನ್ನುಂಟು ಮಾಡುತ್ತದೆ. ಜುಗಾರಿ ಕ್ರಾಸ್‌ನಲ್ಲಿ ಆಧುನಿಕ ಬದುಕು ಸೃಷ್ಟಿಸುತ್ತಿರುವ ಗೋಜಲುಗಳಿಂದಾಗಿ ಇಡೀ ಸಮಾಜವೇ ಹೀಗೆ ಒಂದು ಸಮಾಜ ವಿರೋಧಿ ಮಾಫಿಯಾಗೆ ತುತ್ತಾಗುತ್ತಿದೆ ಎಂಬುದನ್ನು ಪತ್ತೇದಾರಿ ಶೈಲಿಯಲ್ಲಿ ನಿಗೂಢವಾಗಿ ಹೇಳಲು ಹೋಗಿ ಅತಿ ರೋಚಕತೆಗೆ ಕಾರಣವಾಗಿದೆ. ಅರ್ಥಸಂಸ್ಕೃತಿಯ ಆಧುನಿಕ ಸಮಾಜದ ವಿಕೃತಿಯನ್ನು, ಅದರೊಳಗೆ ಇರುವ ಆರೋಗ್ಯಕರ ಬದುಕಿನ ಸಾಧ್ಯತೆಗಳನ್ನು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

ಇತ್ತೀಚಿನ ಹಾಗೂ ಕೊನೆಯ ಕಾದಂಬರಿ ಮಾಯಾಲೋಕ. ಇದು ಅನೇಕ ಕಥೆಗಳ ಹಂದರ.[4] ಕೃತಿಯ ಉದ್ದೇಶ ರಸ ಮತ್ತು ಆನಂದಗಳಾಗಿರದೆ, ಲೋಕ ಚಲನೆಯನ್ನು ಹಿಡಿಯುವುದೇ ಆಗಿದೆ. ಈ ಚಲನೆಯು ನಿತ್ಯ ಚಲನಶೀಲವಾದ ಲೋಕ ವಾಸ್ತವವನ್ನು ಹಿಡಿಯುವುದರಿಂದ ಇಡಿ ಲೋಕ ಸಂಬಂಧದ ಬಗೆಗಿನ ಮಿತ್ಯದೃಷ್ಟಿಗಳನ್ನು ನಿರೂಪಿಸಿದ್ದಾರೆ. ಚಲನೆಯಲ್ಲಿ ಪ್ರಾರಂಭವೆನ್ನುವ ಸ್ವತಂತ್ರ ಆದಿಬಿಂದುವಾಗಲಿ, ಕೊನೆ ಎನ್ನುವ ಸ್ವತಂತ್ರ ಅಂತ್ಯ ಇಲ್ಲ. ಈ ಕಾರಣದಿಂದ ಮಾಯಾಲೋಕ ಕನ್ನಡದ ವಿಶಿಷ್ಟ ಕೃತಿಯಾಗಿದೆ.

ಅಡಿಟಿಪ್ಪಣಿ

1. ಕೃಪೆ, ಕನ್ನಡ ಟೈಮ್ಸ್, ಸಂಪುಟ. 1, ಸಂಚಿಕೆ. 8, 20 ಏಪ್ರಿಲ್ 2007
2. ಡಾ॥ ಹೆಚ್.ಎಂ. ಮಹೇಶ್ವರಯ್ಯ, ಪೂರ್ಣ ಚಂದ್ರ ತೇಜಸ್ವಿ ಪುಟ -44
3. ಡಾ॥ ಹೆಚ್.ಎಂ. ಮಹೇಶ್ವರಯ್ಯ, ಪೂರ್ಣ ಚಂದ್ರ ತೇಜಸ್ವಿ ಪುಟ -102
4. ಕೃಪೆ ಮಯೂರ, ಸಂಪುಟ.40, ಸಂಚಿಕೆ. 6, ಜೂನ್ 2007.

ಗ್ರಂಥಋಣ

೧. ಕನ್ನಡ ಕಥನ ಸಾಹಿತ್ಯ : ಕಾದಂಬರಿ
ಡಾ। ಜಿ.ಎಸ್. ಆಮೂರ
ಪ್ರಕಾಶಕರು : ಭಾನಾಮತಿ ಶಾ. ಹೊಸ ಆವೃತ್ತಿ ೨೦೦೬

೨. ಇಂಗ್ಲಿಷ್ ಸಾಹಿತ್ಯ ಚರಿತ್ರೆ
ಡಾ। ಎಲ್.ಎಸ್.ಶೇಷಗಿರಿರಾವ್
ಪ್ರಕಾಶಕರು : ಕಾಮಧೇನು, ಶೇಷಾದ್ರಿಪುರಂ, ಬೆಂಗಳೂರು

೩. ಸಮಗ್ರ ವಿಮರ್ಶೆ
ಡಾ। ಗಿರಡ್ಡಿ ಗೋವಿಂದರಾಜು
ಪ್ರಕಾಶಕರು : ಶ್ರೀಮತಿ ಭಾನಾಮತಿ ಶಾ. ಬೆಂಗಳೂರು

೪. ಸಾಹಿತ್ಯ ಸಂಸ್ಕೃತಿ
ಡಾ। ನರಹಳ್ಳಿ ಬಾಲಸುಬ್ರಹ್ಮಣ್ಯ
ಪ್ರಕಾಶಕರು : ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು

೫. ಕನ್ನಡ ನವ್ಯ ಕಾದಂಬರಿಗಳು
ಡಾ। ಕೆ. ವಿಜಯಶ್ರೀ
ಪ್ರಕಾಶಕರು : ರಾಮಕೃಷ್ಣ ಪ್ರಕಾಶನ, ಬನಶಂಕರಿ, ಬೆಂಗಳೂರು

೬. ತೇಜಸ್ವಿ ಸಾಹಿತ್ಯ ಕೃಷಿ
ಸಂಪಾದಕರು : ಪ್ರೊ। ಜಿ.ಟಿ. ವೀರಪ್ಪ
ಡಾ। ಎಂ. ಭೈರೇಗೌಡ

೭. ಡಾ। ಕೆ.ಪಿ. ಪೂರ್ಣಚಂದ್ರ ತೇಜಸ್ವಿ
ಡಾ। ಎಚ್.ಎಂ. ಮಹೇಶ್ವರಯ್ಯ
ಪ್ರಕಾಶಕರು : ಮೆ। ನವಕರ್ನಾಟಕ ಪಬ್ಲಿಕೇಷನ್ಸ್, ಪ್ರೈ.ಲಿ., ಬೆಂಗಳೂರು

೮. ಹೊಸಗನ್ನಡ ಸಾಹಿತ್ಯ ಚರಿತ್ರೆ
ಎಲ್.ಎಸ್. ಶೇಷಗಿರಿರಾವ್

AKSHARA GRANTHALAYA
ACC.NO. 129843